ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಭಾರತೀಯ ಸಿನಿಮಾದ ಬೀದಿ ಹೋರಾಟಗಾರ

ಮೃಣಾಲ್ ಸೇನ್ ಇನ್ನಿಲ್ಲ

ಸಂಪುಟ 13 | ಸಂಚಿಕೆ 2 | ಜನವರಿ 7–13, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಚಾರಿತ್ರಿಕ 55 ಲಕ್ಷ ಮಹಿಳೆಯರ ಗೋಡೆ



ನವೋತ್ಥಾನ ಪ್ರತಿಜ್ಞೆ

ಮೋದಿ ಸಂದರ್ಶನ: ಬಿಚ್ಚಿಟ್ಟದ್ದಕ್ಕಿಂತ ಬಚ್ಚಿಟ್ಟಿದ್ದೇ ಹೆಚ್ಚು





ಪೂರ್ಣಕುಂಭ ಮತ್ತು ಅಕ್ಷರ ಜಾತ್ರೆ



ರೈತರ ಸಂಕಷ್ಟಗಳೆಂದರೆ ವಿಮಾ ಕಂಪನಿಗಳಿಗೆ ಹಬ್ಬ

ಶಬರಿಮಲೆ ದೇವಸ್ಥಾನ ಮುಚ್ಚಿರುವುದು ಮತ್ತು ಹರತಾಳ ಸುಪ್ರೀಂಕೋರ್ಟ್ ಆದೇಶದ ನೇರ ಉಲ್ಲಂಘನೆ–ಪಿಣರಾಯಿ ವಿಜಯನ್

ಶಬರಿಮಲೆಯ ಮುಖ್ಯ ಅರ್ಚಕರು ಶಬರಿಮಲೆಗೆ ಮಹಿಳೆಯರ ಪ್ರವೇಶದ ನಂತರ ದೇವಸ್ಥಾನವನ್ನು ಮುಚ್ಚಲು ನಿರ್ಧರಿಸಿರುವುದು ಸುಪ್ರಿಂ ಕೋರ್ಟಿನ ಆದೇಶದ ನೇರ ಉಲ್ಲಂಘನೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ. ಅವರ ವರ್ತನೆ ವಿಚಿತ್ರವಾಗಿದೆ, ಈ ಆದೇಶದ ಬಗ್ಗೆ ಭಿನ್ನಾಭಿಪ್ರಾಯವಿದ್ದರೆ ಆತ ತನ್ನ ಹುದ್ದೆಯಿಂದ ಕೆಳಗಿಳಿಯಬೇಕು ಎಂದು ಏಕೆಂದರೆ ಮಹಿಳೆಯರು ಸುಪ್ರಿಂ ಕೋರ್ಟಿನ ತೀರ್ಪನ್ನು ಅನುಸರಿಸಿ ದೇವಸ್ಥಾನ ಪ್ರವೇಶಿಸಿದ್ದಾರೆ ಎಂದು ಅವರು ನೆನಪಿಸಿದ್ದಾರೆ.

ಈ ಮುಖ್ಯ ಅರ್ಚಕರು ಮತ್ತು ದೇವಸ್ವಂ ಮಂಡಳಿ ಸುಪ್ರಿಂ ಕೋರ್ಟಿನಲ್ಲಿ ಈ ಕುರಿತ ಕೇಸಿನಲ್ಲಿ ಪಾರ್ಟಿಗಳಾಗಿದ್ದರು. ಅವರು ತಮ್ಮ ಸ್ಥಾನದಲ್ಲಿ ಮುಂದುವರೆಯಬೇಕಾದರೆ ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೊಳಿಸಬೇಕು, ಇಲ್ಲವೇ ಅಥವ ಆ ಹುದ್ದೆಯನ್ನು ಬಿಡಬೇಕು. ದೇವಸ್ಥಾನವನ್ನು ತೆರೆಯಬೇಕೇ ಬೇಡವೇ ಎಂಬುದನ್ನು ನಿರ್ಧರಿಸಬೇಕಾದ್ದು ದೇವಸ್ವಂ ಮಂಡಳಿಯೇ ಹೊರತು ಮುಖ್ಯ ಅರ್ಚಕರಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶಬರಿಮಲೆ ದೇವಸ್ಥಾನದೊಳಕ್ಕೆ ಇಬ್ಬರು ಮಹಿಳೆಯರ ಪ್ರವೇಶವನ್ನು ವಿರೋಧಿಸಿ ನೀಡಿರುವ ಹರತಾಳದ ಕರೆಯೂ ಸುಪ್ರಿಂ ಕೋರ್ಟ್ ಆದೇಶದ ನೇರ ಉಲ್ಲಂಘನೆಯಾಗಿದೆ. ಸಂಘ ಪರಿವಾರ ಸುಪ್ರಿಂ ಕೋರ್ಟ್ ತೀರ್ಪನ್ನು ಬುಡಮೇಲು ಮಾಡಲು ಪ್ರಯತ್ನಿಸುತ್ತಿದೆ. ಅವರ ಹಸ್ತಕ್ಷೇಪ ಸ್ಪಷ್ಟ ರಾಜಕೀಯ ಆಶಯದಿಂದ ಕೂಡಿದೆ. ಅದರೊಂದಿಗೆ ಬಲವಾಗಿ ವ್ಯವಹರಿಸಲಾಗುವುದು, ಹಿಂಸಾಚಾರವನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಶಬರಿಮಲೆಯನ್ನು ಇಂತಹ ದಾಳಿಗಳಿಂದ ರಕ್ಷಿಸಲು ಸರಕಾರ ಪ್ರಯತ್ನಿಸುತ್ತಿದೆ ಎಂದು ಪಿಣರಾಯಿ ವಿಜಯನ್ ಹೇಳಿದ್ದಾರೆ.

ಈ ಇಬ್ಬರು ಮಹಿಳೆಯರು ಕೆಲವು ದಿನಗಳ ಹಿಂದೆಯೂ ಪ್ರಯತ್ನಿಸಿದ್ದರು. ಹಲವಾರು ಕಾರಣಗಳಿಂದ ಅದು ಸಾಧ್ಯವಾಗಿರಲಿಲ್ಲ. ಅವರು ಪೋಲೀಸರ ಬಳಿ ಬಂದರು. ಸುಪ್ರಿಂ ಕೋರ್ಟ್ ತೀರ್ಪಿನ ಜಾರಿಯ ಹೊಣೆಯಿರುವ ಪೋಲೀಸರು ಅವರ ಪ್ರವೇಶಕ್ಕೆ ಅಗತ್ಯವಾದ ಭದ್ರತೆಯನ್ನು ಒದಗಿಸಿದರು. ಈ ಮಹಿಳೆಯರು ಇತರ ಭಕ್ತರು ಸಾಗುವ ದಾರಿಯಲ್ಲೇ ಹೋದರು, ಹೆಲಿಕಾಪ್ಟರ್ ಬಳಸಿರಲಿಲ್ಲ, ಅವರಿಗೆ ವಿಶೇಷ ವ್ಯವಸ್ಥೆಯನ್ನೇನೂ ಮಾಡಿರಲಿಲ್ಲ. ಅಲ್ಲಿದ್ದ ಇತರ ಭಕ್ತರು ಅವರ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟರು. ಅವರು ಪ್ರವೇಶಿಸಿದಾಗ ಶಬರಿಮಲೆಯಲ್ಲಿ ಏನೂ ಪ್ರತಿಭಟನೆಯಿರಲಿಲ್ಲ.

ಅವರ ಪ್ರವೇಶದ ಒಂದು ಗಂಟೆಯ ನಂತರವೂ ಯಾವುದೇ ಸಮಸ್ಯೆ ಇರಲಿಲ್ಲ. ನಮ್ಮ ಸರಕಾರಕ್ಕಾಗಲೀ, ನಮ್ಮ ಆಸ್ತಿಕ ಸಮುದಾಯಕ್ಕಾಗಲೀ ಮಹಿಳೆಯರ ಪ್ರವೇಶಕ್ಕೆ ವಿರೋಧವೇನೂ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂದ ಮುಖ್ಯಮಂತ್ರಿಗಳು, ಇದರಿಂದ ರಾಜಕೀಯ ಪ್ರಯೋಜನ ಪಡೆಯ ಬಯಸಿರುವ ಒಂದು ಗುಂಪು ಹಿಂಸಾಚಾರಕ್ಕೆ ಕರೆ ಕೊಡುವ ವರೆಗೆ ಎಲ್ಲವೂ ಶಾಂತಿಮಯವಾಗಿತ್ತು, ಸಂಘ ಪರಿವಾರ ರಸ್ತೆಗಳಲ್ಲಿ ಹಿಂಸಾಚಾರವನ್ನು ಸಂಘಟಿಸುತ್ತಿದ್ದಾರೆ. ಇದು ಪೂರ್ವಯೋಜನೆಯ ಒಂದು ಭಾಗ ಎಂಬುದು ಸ್ಪಷ್ಟ, ಈ ಯೋಜನೆಯ ಭಾಗವಾಗಿ ಪತ್ರಕರ್ತರು, ಪೋಲೀಸರು ಮತ್ತು ಪಾದಚಾರಿಗಳ ಮೇಲೆ ಹಲ್ಲೆಗಳನ್ನು ನಡೆಸಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

79 ಕೇರಳ ಸಾರಿಗೆ ಬಸ್ಸುಗಳು ಸಂಘ ಪರಿವಾರದ ಈ ಹಿಂಸಾಚಾರದಲ್ಲಿ ಧ್ವಂಸವಾಗಿವೆ. 31 ಪೋಲೀಸ್ ಸಿಬ್ಬಂದಿಗೆ ಗಾಯಗಳಾಗಿವೆ. ಹಲವು ಪಾದಚಾರಿಗಳ ಮೇಲೂ ಹಲ್ಲೆಗಳು ನಡೆದಿವೆ. ಅವರಲ್ಲಿ ಹೆಚ್ಚಿನವರು ಮಹಿಳೆಯರು. ಹಲವು ಮಹಿಳಾ ಪತ್ರಕರ್ತರ ಮೇಲೆ ಹಲ್ಲೆಗಳು ವರದಿಯಾಗಿವೆ. ಅಂಗಡಿಗಳು, ಜಾಹೀರಾತು ಫಲಕಗಳು ಧ್ವಂಸಗೊಂಡಿವೆ. ಹಲವು ಸಿಪಿಐ(ಎಂ) ಕಚೇರಿಗಳ ಮೇಲೆ ಹಲ್ಲೆಗಳು ನಡೆದಿವೆ.

ಯಾವುದೇ ಮಹಿಳೆಯನ್ನು ಬಲವಂತದಿಂದ ಶಬರಿಮಲೆ ಪ್ರವೇಶ ಮಾಡಿಸುವ ಆಶಯ ಸರಕಾರಕ್ಕೆ ಇಲ್ಲ ಎಂದು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರು. ಆದರೆ ಸ್ವಯಮಿಚ್ಛೆಯಿಂದ ದೇವಸ್ಥಾನಕ್ಕೆ ಭೇಟಿ ನೀಡಲು ಬರುವ ಮಹಿಳೆಯರಿಗೆ ರಕ್ಷಣೆ ಒದಗಿಸಲಾಗುವುದು ಎಂದು ಹೇಳಿರುವ ಅವರು ಮಾಧ್ಯಮಗಳು ವರದಿ ಮಾಡುವಾಗ ಜಾತ್ಯತೀತ ಮೌಲ್ಯಗಳ ನಿಲುವನ್ನು ಅಂಗೀಕರಿಸಬೇಕು ಎಂದರು, ಸಾಮಾಜಿಕ ಮಾಧ್ಯಮಗಳಲ್ಲಿ ರಾಜ್ಯದಲ್ಲಿ ಹಿಂಸಾಚಾರವನ್ನು ಪ್ರಚೋದಿಸಲು ಪ್ರಚಾರ ನಡೆಯುತ್ತಿದೆ, ಇದನ್ನು ಬದಲಾಯಿಸಬೇಕು ಎಂದು ಪಿಣರಾಯಿ ವಿಜಯನ್ ಹೇಳಿದ್ದಾರೆ.

ಚಾರಿತ್ರಿಕ ಮಹಿಳಾ ಗೋಡೆ: ಕೇರಳದ ಮಹಿಳೆಯರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿನಂದನೆ

ಜನವರಿ 1 ರಂದು ಚಾರಿತ್ರಿಕ 'ಮಹಿಳಾ ಗೋಡೆ'ಯನ್ನು ನಿರ್ಮಿಸಿದ ಕೇರಳದ ಮಹಿಳೆಯರನ್ನು ಮತ್ತು ಎಲ್ಲ 176 ಸಾಮಾಜಿಕ ಹಾಗೂ ಸಾಮೂಹಿಕ ಸಂಘಟನೆಗಳನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿನಂದಿಸಿದೆ.

ಜಾತಿ/ಸಮುದಾಯಗಳ ಸೀಮೆಗಳ:ನ್ನು ಮೀರಿ ನಿಂತು ಎಲ್ಲ ಜನವಿಭಾಗಗಳ 55 ಲಕ್ಷಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದ ಈ ಮಹಿಳಾ ಗೋಡೆ ಮಹಿಳಾ ಹಕ್ಕುಗಳು ಮತ್ತು ಸುಧಾರಣೆ ಕುರಿತಂತೆ ಕೇರಳದ ನವೋತ್ಥಾನ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಒಂದು ಬಲವಾದ ಐಕ್ಯತೆಯ ಸಂದೇಶವನ್ನು ಸಾರಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಆರೆಸ್ಸೆಸ್ ನೇತೃತ್ವದ ಕೋಮುವಾದಿ ಬಲಪಂಥೀಯ ಶಕ್ತಿಗಳು ದೇಶಾದ್ಯಂತ ಪ್ರತಿಗಾಮೀ 'ಮನುವಾದಿ' ತತ್ವ-ಸಿದ್ಧಾಂತಗಳನ್ನು ಹೇರಲು ಪ್ರಯತ್ನಿಸುತ್ತಿರುವಾಗ, ಮಹಿಳಾ ಗೋಡೆ ಒಂದು ವ್ಯಾಪಕವಾದ ಮಹತ್ವವನ್ನು ಹೊಂದಿದೆ, ಅದು ಮನುವಾದಿ ತತ್ವಗಳನ್ನು ಹೇರುವ ಎಲ್ಲ ಪ್ರಯತ್ನಗಳಿಗೆ ಒಂದು ವ್ಯಾಪಕವಾದ ಪ್ರತಿರೋಧಕ್ಕೆ ಉತ್ತೇಜನ ನೀಡುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ತ್ರಿಪುರಾದಲ್ಲಿ ಪ್ರತಿಪಕ್ಷಗಳ ಮೇಲೆ ಕೊನೆಗಾಣದ ದೈಹಿಕ ದಾಳಿಗಳು: ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ತ್ರಿಪುರಾದಲ್ಲಿ ಸಿಪಿಐ(ಎಂ) ಮತ್ತು ಅದರ ಮುಖಂಡರ ಮೇಲೆ ಬಿಜೆಪಿಗೆ ಸೇರಿದ ಗೂಂಡಾಗಳ ದಾಳಿಗಳಿಗೆ ಕೊನೆಯಿಲ್ಲದಂತಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಹಿಂಸಾಚಾರದ ಸುರುಳಿಯಲ್ಲಿ ಇತ್ತೀಚಿನದೆಂದರೆ ಸಿಪಿಐ(ಎಂ) ತ್ರಿಪುರಾ ರಾಜ್ಯ ಕಾರ್ಯದರ್ಶಿ ಗೌತಮ್ ದಾಸ್ ಮತ್ತು ಶಾಸಕ ರತನ್ ಭೌಮಿಕ್ ಮೇಲೆ ನಡೆದಿರುವ ದಾಳಿ.

ಡಿಸೆಂಬರ್ 28 ರಂದು ಇವರನ್ನು ಬಿಶಾಲ್‌ಗಡ್ ಪಟ್ಟಣದಲ್ಲಿ ಅಡ್ಡಗಟ್ಟಿ ದಾಳಿ ನಡೆಸಲಾಗಿದೆ. ಇವರಿಬ್ಬರು ಮಿರ್ಝಾ, ಉದಯಪುರ್ ನಿಂದ ಹಿಂದಿರುತ್ತಿದ್ದಾಗ ಬಿಶಾಲಗಡ್ ಪಟ್ಟಣದಲ್ಲಿ ಅಡ್ಡಗಟ್ಟಿ ಅವರ ಮೇಲೆದಾಳಿ ನಡೆಸಲಾಗಿದೆ. ಕೆಲವು ದಿನಗಳ ಹಿಂದೆ ಅದೇ ಕಿಡಿಗೇಡಿಗಳ ಗ್ಯಾಂಗ್ ಮಾಜಿ ಮಂತ್ರಿ ಹಾಗೂ ಈಗ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷ ಭಾನುಲಾಲ್ ಸಾಹಾ ಅವರ ಮೇಲೆ ದಾಳಿ ಮಾಡಿದ್ದರು.

ಆಳುವ ಪಕ್ಷದ ಗೂಂಡಾಗಳು ಹಾಡುಹಗಲೇ ಪ್ರಧಾನ ಪ್ರತಿಪಕ್ಷದ ಉನ್ನತ ಮುಖಂಡರು ಮತ್ತು ಚುನಾಯಿತ ಪ್ರತಿನಿಧಿಗಳ ಮೇಲೆ ದೈಹಿಕ ದಾಳಿಯನ್ನು ಮಾಡುವ ಧೈರ್ಯ ತೋರುತ್ತಿರುವುದು, ಅವರಿಗೆ ಆಳುವ ಮಂದಿಗಳಿಂದ ಎಂತಹ ಅಭಯ ಹಸ್ತ ಇದೆ ಎಂಬ ಬಗ್ಗೆ ಬಹಳಷ್ಟು ಹೇಳುತ್ತದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಂದಿನಿಂದ ಸತತವಾಗಿ ಇಂತಹ ದಾಳಿಗಳು ಇಲ್ಲಿ ಸಾಮಾನ್ಯವಾಗಿ ಬಿಟ್ಟಿದೆ.

ಈ ಹಿಂಸಾಚಾರದ ಬಗ್ಗೆ ಪೋಲೀಸ್ ಮಹಾ ನಿರ್ದೇಶಕರಿಗೆ ವರದಿ ಮಾಡಿದ ಎರಡು ದಿನಗಳ ನಂತರವೂ ಈ ಕುರಿತ ದೂರಿನಲ್ಲಿ ಹೆಸರಿಸಿರುವ ಅಪರಾಧಿಗಳನ್ನು ಬಂಧಿಸಲು ಯಾವುದೇ ಕ್ರಮ ಕೈಗೊಳ್ಳದಿರುವುದು ದೂಷಣೀಯ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ತಕ್ಷಣವೇ ಅಪರಾಧಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿದೆ, ಹಾಗೂ ತ್ರಿಪುರಾದಲ್ಲಿ ಸಿಪಿಐ(ಎಂ) ಮೇಲೆ ಮತ್ತು ಪ್ರತಿಪಕ್ಷಗಳ ಮೇಲೆ ಮಾಡುತ್ತಿರುವ ಈ ದಾಳಿಗಳನ್ನು ಖಂಡಿಸಬೇಕು ಎಂದು ಜನತೆಗೆ ಕರೆ ನೀಡಿದೆ.

ಸಂಸತ್ತಿನಲ್ಲಿ ಮಾತುಗಳಿಗೆ ಕತ್ತರಿ ಹಾಕುವ ಚಾಳಿ ಬೆಳೆದಿದೆ–ಮಹಮ್ಮದ್ ಸಲೀಂ

ಲೋಕಸಭೆಯಲ್ಲಿ ತ್ರಿವಳಿ ತಲಾಖ್ ಮೇಲೆ ಚರ್ಚೆಯಲ್ಲಿ ಭಾಗವಹಿಸುತ್ತ ಸಿಪಿಐ(ಎಂ) ಸದಸ್ಯ ಮಹಮ್ಮದ್ ಸಲೀಂರವರು ಹೇಳಿದ ಕೆಲವು ಮಾತುಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ. ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಲೀಂ ಅವರು "ನಾನು ಯಾರ ಹೆಸರನ್ನೂ ಉಚ್ಚರಿಸಿರಲಿಲ್ಲ. ಆದರೆ ಈಗೀಗ ಆರೆಸ್ಸೆಸ್, ಸಾವರ್ಕರ್, ಮೋದಿಯ ಬಗ್ಗೆ ಯಾವುದೇ ಪ್ರಸ್ತಾಪವನ್ನು ಮಾಡಿದರೆ ಅದನ್ನು ಕಡತದಿಂದ ತೆಗೆದು ಹಾಕುವ ಚಾಳಿ ಸಾಮಾನ್ಯವಾಗುತ್ತಿದೆ" ಎಂದು ಹೇಳಿದ್ದಾರೆ.

ಮುಸ್ಲಿಂ ಮಹಿಳೆಯರನ್ನು ಅವರ ಗೋರಿಯಿಂದ ಹೊರಗೆಳೆದು ಬಲಾತ್ಕಾರ ನಡೆಸಬೇಕು ಎಂದು ಹೇಳಿರುವತನನ್ನು ಮುಖ್ಯಮಂತ್ರಿಯಾಗಿ ಮಾಡಿರುವ ಒಂದು ಪಕ್ಷ ಮಹಿಳಾ ಸಮಾನತೆಯ ಬಗ್ಗೆ ಹೇಗೆ ತಾನೇ ಮಾತಾಡಲು ಸಾಧ್ಯ ಎಂದು ಈ ಬಗ್ಗೆ ವೀಡಿಯೋಗಳೇ ಇವೆ ಸಲೀಂ ತನ್ನ ಭಾಷಣದ ಮಧ್ಯೆ ಹೇಳಿದ್ದನ್ನು ಕಡತದಿಂದ ತೆಗೆದು ಹಾಕಲಾಗಿದೆ ಎಂದು ತಿಳಿದು ಬಂದಿದೆ.

ಬಿಜೆಪಿಗೆ ಲಿಂಗ ಸಮಾನತೆಯ ಬಗ್ಗೆ ಕಾಳಜಿ, ಪ್ರಾಮಾಣಿಕತೆಯೇನೂ ಇಲ್ಲ. ರಾಜಕೀಯ ಪ್ರಚಾರಕ್ಕಷ್ಟೇ ಇದನ್ನು ಮಾಡುತ್ತಿದೆ. ಒಂದು ಜಂಟಿ ಸಂಸದೀಯ ಸಮಿತಿ ಈ ತ್ರಿವಳಿ ತಲಾಖ್ ಮಸೂದೆಯ ಪ್ರತಿಯೊಂದು ಆಯಾಮವನ್ನು ಚರ್ಚಿಸಿ ಒಂದು ನಿರ್ಧಾರಕ್ಕೆ ಬರುವುದು ಅಗತ್ಯ ಎಂದು ಸಲಹೆ ನೀಡಿದ ಸಲೀಂ, ಕೋಮುವಾದಿ ಹಿಂಸಾಚಾರ, ದ್ವೇಷ ಹತ್ಯೆ ಮತ್ತು ದ್ವೇಷ ರಾಜಕೀಯ ಅತಿ ಹೆಚ್ಚು ತಟ್ಟುವುದು ಮುಸ್ಲಿಂ ಮಹಿಳೆಯರನ್ನು, ಈಗೇಕೆ ಅವರನ್ನೇ ಆರಿಸಿಕೊಂಡಿದ್ದಾರೆ, ಸಮುದಾಯದ ಒಳಗೆ ಮತ್ತು ಸಮುದಾಯಗಳ ನಡುವೆ ಸಮಾನತೆ ಇರುವಂತೆ ಅವರು ನೋಡಿಕೊಳ್ಳಬಾರದೇಕೆ ಎಂದೂ ಪ್ರಶ್ನಿಸಿದರು.

ಮಹಿಳಾ ಮೀಸಲಾತಿ ಮಸೂದೆಯನ್ನು ತಕ್ಷಣವೇ ಪಾಸು ಮಾಡಿ–ಲೋಕಸಭೆಯಲ್ಲಿ ಸಿಪಿಐ(ಎಂ) ಆಗ್ರಹ

"ಲೋಕಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಕೇವಲ 11.7%, ರಾಜ್ಯಸಭೆಯಲ್ಲಿ 11.4%. ರಾಜ್ಯ ವಿಧಾನಸಭೆಗಳಲ್ಲೂ ಇಂತಹುದೇ ಲಿಂಗ ಅಸಮತೋಲನವಿದೆ. ನೀವೂ ಕೂಡ ಮಹಿಳಾ ಮೀಸಲಾತಿ ಮಸೂದೆಯನ್ನು ಸಮರ್ಥಿಸಿ, ದೇಶದ ಅತ್ಯುನ್ನತ ನೀತಿ-ನಿರ್ಧಾರ ಸಂಸ್ಥೆಗಳಲ್ಲಿ ಕನಿಷ್ಟ ಪ್ರಾತಿನಿಧ್ಯದ ಮಹಿಳಾ ಹಕ್ಕುಗಳ ಪರವಾಗಿ ಮಾತಾಡಿದ್ದೀರಿ" ಎಂದು ಲೋಕಸಭೆಯಲ್ಲಿ ಸಿಪಿಐ(ಎಂ) ಸದಸ್ಯೆಯಾದ ಪಿ.ಕೆ.ಶ್ರೀಮತಿ ಟೀಚರ್ ಲೋಕಸಭಾಧ್ಯಕ್ಷರನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದರು. ಮುಂದುವರೆದು ಅವರು "ಮಹಿಳಾ ಮೀಸಲಾತಿಯ ಪ್ರಶ್ನೆ ಕುರಿತ ಮಸೂದೆ ಕಳೆದ 20–25 ವರ್ಷಗಳಿಂದ ನೆನೆಗುದಿಯಲ್ಲಿದೆ. ಅದನ್ನು ತಕ್ಷಣವೇ ಪಾಸು ಮಾಡಬೇಕು ಎಂದು ನಾನು ಪ್ರಧಾನ ಮಂತ್ರಿಗಳು ಮತ್ತು ಇತರ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ" ಎಂದರು. ಬಿಜು ಜನತಾ ದಳದ ಭೃತೃಹರಿ ಮಹತಾಬ್ ಮತ್ತು ಟಿಆರೆಸ್‌ನ ಜಿತೇಂದ್ರ ರೆಡ್ಡಿ ಅವರನ್ನು ಬೆಂಬಲಿಸಿ ಮಾತನಾಡಿದರು.

ಸದನ ಸಭೆ ಸೇರುವ ಮೊದಲು ಬೆಳಿಗ್ಗೆ ಸಿಪಿಐ(ಎಂ)ನ ಸಂಸತ್ ಸದಸ್ಯರು ಸಂಸದ್ ಭವನದ ಮುಂದೆ ಮಹಾತ್ಮ ಗಾಂಧಿ ಪ್ರತಿಮೆಯ ಬಳಿ ಈ ಕುರಿತು ಮತಪ್ರದರ್ಶನ ನಡೆಸಿದರು.

ಮಹಿಳಾ ಮೀಸಲಾತಿ ಕುರಿತ ಮಸೂದೆಗಳನ್ನು ಲೋಕಸಭೆಯಲ್ಲಿ 1990ರ ದಶಕದಿಂದಲೇ ಮಂಡಿಸಲಾಗುತ್ತಿದೆ. ಆದರೆ ಕಾಂಗ್ರೆಸ್ ಮತ್ತು ಬಿಜೆಪಿಯ ಹಿಂಜರಿಕೆಗಳಿಂದಾಗಿ ಅವು ಹಾಗೆಯೇ ಉಳಿದವು, ಸಂಬಂಧಪಟ್ಟಲೋಕಸಭೆಯ ಕಾಲಾವಧಿ ಮುಗಿಯುತ್ತಿದ್ದಂತೆ ಅದು ಪಲೋಪಗೊಳ್ಳುತ್ತ ಬಂತು. 2008ರಲ್ಲಿ ಯುಪಿಎ–1 ಸರಕಾರ ಮಹಿಳೆಯರಿಗೆ ಶಾಸನಸಭೆಗಳಲ್ಲಿ ಕನಿಷ್ಟ 33% ಮೀಸಲಾತಿ ನೀಡುವ ಮಸೂದೆಯನ್ನುಮಂಡಿಸಲಾಯಿತು. ಇದರಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಮಹಿಳೆಯರಿಗೆ ಮೀಸಲಾತಿಯ ಅಂಶವನ್ನೂ ಸೇರಿಸಲಾಗಿದೆ. 2010ರಲ್ಲಿ ರಾಜ್ಯಸಭೆ ಇದನ್ನು ಅಂಗೀಕರಿಸಿತು. ಆದರೆ ಲೋಕಸಭೆಯಲ್ಲಿ ಮತ್ತೆ ಕಾಂಗ್ರೆಸ್ ಮತ್ತು ಬಿಜೆಪಿಯ ಹಿಂಜರಿಕೆಗಳಿಂದಾಗಿ ಚರ್ಚೆಯಾಗದೆ, 2014ರಲ್ಲಿ ಮತ್ತೆ ಲೋಪಗೊಂಡಿತು.

ಮುಸ್ಲಿಂ ಮಹಿಳೆಯರ ಅಸಮಾನತೆ ನಿವಾರಣೆಯ ಬಗ್ಗೆ ಬಹಳಷ್ಟು ಕಾಳಜಿ ಪ್ರದರ್ಶಿಸುತ್ತಿರುವ ಮೋದಿಯವರು ಎಲ್ಲ ಧರ್ಮಗಳ ಮಹಿಳೆಯರ ಸಮಾನತೆಯತ್ತ ಒಂದು ದೃಢ ಹೆಜ್ಜೆಯಾದ ಈ ಮಸೂದೆಯನ್ನು ಅಂಗೀಕರಿಸುವ ತಮ್ಮದೇ ಭರವಸೆಯನ್ನು ಈಡೇರಿಸುವ ಬಗ್ಗೆ ಚಕಾರವೆತ್ತಿಲ್ಲ.

ಅಯೋಧ್ಯೆ ತೀರ್ಪಿನ ಬಗ್ಗೆ ಪ್ರಧಾನಿ ನಿಲುವು ವಿಷಾದಕರ–ಸಿಪಿಐ(ಎಂ)

ನ್ಯಾಯಾಂಗ ಪ್ರಕ್ರಿಯೆಯ ನಂತರ ಸರಕಾರ ರಾಮ ಮಂದಿರವನ್ನು ಕಟ್ಟಲು ಸರ್ವ ಪ್ರಯತ್ನಗಳನ್ನು ಮಾಡುತ್ತದೆ ಎಂದು ಪ್ರಧಾನ ಮಂತ್ರಿಗಳು ಒಂದು ಸಂದರ್ಶನದಲ್ಲಿ ಘೋಷಿಸಿದ್ದಾರೆ. ಆರೆಸ್ಸೆಸ್ ಇದು ಪ್ರಧಾನ ಮಂತ್ರಿಗಳ ಒಂದು 'ಸಕಾರಾತ್ಮಕ ನಿಲುವು' ಎಂದು ಸ್ವಾಗತಿಸಿದೆ. ಇದು ವಿಷಾದನೀಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಇದು, ನ್ಯಾಯಾಲಯದ ತೀರ್ಪು ಏನೇ ಬರಲಿ, ಸರಕಾರ ಮಂದಿರ ಕಟ್ಟಲು ಅನುಕೂಲ ಕಲ್ಪಿಸುವ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಸುಪ್ರಿಂ ಕೋರ್ಟಿನ ಮೇಲೆ ಒತ್ತಡ ಹಾಕುವ ಒಂದು ನಡೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಪ್ರಧಾನ ಮಂತ್ರಿಗಳು ಸಂವಿಧಾನದ ಅಡಿಯಲ್ಲಿ ತನ್ನ ಹುದ್ದೆಯ ಪ್ರತಿಜ್ಞೆಯನ್ನು ಕೈಗೊಂಡಿದ್ದಾರೆ, ಆದ್ದರಿಂದ ಅವರು ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೊಳಿಸಲು ಬದ್ಧರಾಗಿರಲೇ ಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

ಓಳು ಬರೀ ಓಳು, ಸುಳ್ಳು ಬರೀ ಸುಳ್ಳು...

ಪ್ರಧಾನಿ ಮೋದಿ ಬಿಚ್ಚಿಟ್ಟಿದ್ದಕ್ಕಿಂತ ಬಚ್ಚಿಟ್ಟಿದ್ದೇ ಹೆಚ್ಚು



ಸೀತಾರಾಮ್ ಯೆಚುರಿ

ಪ್ರಧಾನಿ ನರೇಂದ್ರ ಮೋದಿ ಎ.ಎನ್.ಐ ಸುದ್ದಿ ಸಂಸ್ಥೆಯೊಂದಿಗಿನ ಯೋಜಿತ ಸಂದರ್ಶನವೊಂದರ ಮೂಲಕ 2019ರ ಲೋಕಸಭೆ ಚುನಾವಣೆಗೆ ಮೊದಲ ಗುಂಡು ಹಾರಿಸಿದ್ದಾರೆ. 2018 ಭಾರತಕ್ಕೆ ಒಂದು 'ಹೊಳೆಯುವ ವರ್ಷ'ವಾಗಿತ್ತು ಎಂದು ಅವರು ಹೇಳಿಕೊಂಡಿದ್ದಾರೆ!. 'ಹೊಳೆಯುವ ಭಾರತ'ದ ಬಗ್ಗೆ ವಾಜಪೇಯಿ ಹೇಳಿಕೊಂಡ ನಂತರದಲ್ಲಿ ನಡೆದ 2004ರ ಚುನಾವಣೆಯ ಫಲಿತಾಂಶ ಏನಾಗಿತ್ತು ಎಂಬುದು ನಮಗೆಲ್ಲರಿಗೆ ಗೊತ್ತಿದೆ. ಬಹುಶಃ ಪ್ರಧಾನಿ ಮೋದಿಯವರಿಗೆ ಗೋಡೆಯ ಮೇಲಿನ ಬರಹ ತುಂಬಾ ಸ್ಪಷ್ಟವಾದಂತಿದೆ!.

ಸುಮಾರು ಒಂದುವರೆ ಗಂಟೆಗೂ ಹೆಚ್ಚು ಕಾಲ ನಡೆದ ಸಂದರ್ಶನದಲ್ಲಿ ಮೋದಿಯವರು 2014ರ ಚುನಾವಣೆಯಲ್ಲಿ ತಾನು ಹಾಗೂ ಬಿಜೆಪಿ ಭಾರತದ ಜನರಿಗೆ ಕೊಟ್ಟ ಆಶ್ವಾಸನೆಗಳ ಬಗ್ಗೆ ಒಮ್ಮೆಯೂ ತುಟಿ ಪಿಟಕ್ ಎನ್ನಲಿಲ್ಲ. ಹಾಗೂ ಆ ಆಶ್ವಾಸನೆಗಳ ಪೈಕಿ ಒಂದೇ ಒಂದು ಕೂಡ ಯಾಕೆ ಈಡೇರಲಿಲ್ಲ ಎಂದೂ ಅವರು ಹೇಳಲಿಲ್ಲ. ಇದೊಂದು 'ಸತ್ಯೋತ್ತರ' ಪ್ರಚಾರ ಕ್ರಮವಾಗಿದೆ. ಈ ಪ್ರಕ್ರಿಯೆಯಲ್ಲಿ ಪುಂಖಾನುಪುಂಖ ತಪ್ಪು ಮಾಹಿತಿಗಳು ಹರಿದುಬಂದವು ಅಷ್ಟೆ.

ಕೃಷಿ ಸಾಲ ಮನ್ನಾ

ಪ್ರಧಾನಿಯ ಅತ್ಯಂತ ದುರಂತಮಯ ಹಾಗೂ ಅಮಾನವೀಯ ಪ್ರತಿಕ್ರಿಯೆಗಳಲ್ಲಿ ಒಂದೆಂದರೆ ಒಂದು-ಬಾರಿಯ ಸಾಲ ಮನ್ನಾವನ್ನು 'ಲಾಲಿಪಾಪ್' ಎಂದು ಕರೆದಿರುವುದು. ಅಪಾರ ಸಾಲದ ಹೊರೆಯಡಿ ನಲುಗುತ್ತಿರುವ ರೈತಾಪಿ ವರ್ಗದ ವ್ಯಾಪಕ ಹೋರಾಟಗಳ ಫಲವಾಗಿ ಸಾಲ ಮನ್ನಾದ ಬೇಡಿಕೆ ಮೇಲೆದ್ದು ಬಂದಿದೆ. ಗೋಣು ಮುರಿಯುವ ಸಾಲದ ಹೊರೆಯ ಸಂಕಷ್ಟದಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಮಾಣ ಆಘಾತಕಾರಿ ಮಟ್ಟವನ್ನು ತಲುಪುತ್ತಿದೆ. ಈ ದುರದೃಷ್ಟಕರ ಸಾವುಗಳನ್ನು ತಡೆಯಲು, ನಮ್ಮ 'ಅನ್ನದಾತ'ರನ್ನು ರಕ್ಷಿಸಲು ಈ ಒಂದು-ಬಾರಿಯ ಸಾಲಮನ್ನಾ ತುಂಬಾ ನೆರವಾಗಲಿದೆ. ದೇಶದಾದ್ಯಂತ ನಡೆಯುತ್ತಿರುವ ರೈತರ ಹೋರಾಟಗಳು ಪ್ರಧಾನಿ 2014ರಲ್ಲಿ ಆಶ್ವಾಸನೆ ನೀಡಿದ ಪ್ರಕಾರ, ಉತ್ಪಾದನೆ ವೆಚ್ಚದ ಒಂದುವರೆ ಪಟ್ಟಿನಷ್ಟು ಇರುವ ಕನಿಷ್ಟ ಬೆಂಬಲ ಬೆಲೆಯನ್ನು ನೀಡಬೇಕೆಂದು ಆಗ್ರಹಿಸುತ್ತಿವೆ. ಈ ಐದು ವರ್ಷಗಳುದ್ದಕ್ಕೂ ಅದನ್ನು ಈಡೇರಿಸಿಲ್ಲ. ಗ್ರಾಮೀಣ ಭಾರತಕ್ಕೆ ನೀಡಿದ ಆಶ್ವಾಸನೆಗಳನ್ನು ಈಡೇರಿಸದಿರುವುದು ಆಳವಾಗುತ್ತಿರುವ ಕೃಷಿ ಸಂಕಷ್ಟಗಳಿಗೆ ನೇರ ಕಾರಣವಾಗಿದೆ. ಅದು ಗ್ರಾಮೀಣ ಭಾರತದ ಕೃಷಿಯೇತರ ವಿಭಾಗಗಳ ಮೇಲೂ ಪರಿಣಾಮ ಬೀರಿದೆ. ಈ ಗ್ರಾಮೀಣ ಪ್ರದೇಶಗಳಲ್ಲಿ ಆದಾಯ ಕುಸಿದಿರುವುದರಲ್ಲಿ ಇದು ವ್ಯಕ್ತವಾಗುತ್ತಿದೆ.

ನೋಟು ಅಮಾನ್ಯೀಕರಣ

ನೋಟು ಅಮಾನ್ಯೀಕರಣದ ಸುನಾಮಿಯಿಂದ ಇಡೀ ಭಾರತೀಯ ಆರ್ಥಿಕತೆ ಸರ್ವನಾಶಕ್ಕೊಳಗಾದ ಅನುಭವ ಕಣ್ಣಿಗೆ ಹೊಡೆಯುವಂತಿದ್ದರೂ, ಅಮಾನ್ಯೀಕರಣ ಒಂದು ಯಶಸ್ವಿ ಕ್ರಮ ಎಂದು ಪ್ರಧಾನಿ ಕೊಚ್ಚಿಕೊಂಡಿದ್ದಾರೆ!. ಅಚ್ಚರಿಯ ಸಂಗತಿಯೆಂದರೆ ನೋಟು ಅಮಾನ್ಯೀಕರಣದಿಂದಾಗಿ ದೇಶದ ಆರ್ಥಿಕತೆಯಲ್ಲಿನ ಕಪ್ಪು ಹಣ ಇಡಿಯಾಗಿ ಬ್ಯಾಂಕಿಂಗ್ ವ್ಯವಸ್ಥೆಗೆ ಹರಿದು ಬಂದಿದೆ ಎಂದು ಮೋದಿಯವರ ಹೇಳಿದ್ದಾರೆ. ಇದಕ್ಕಿಂತ ದೊಡ್ಡ ಸುಳ್ಳು ಇನ್ನೊಂದು ಇರಲಾರದು. ವಾಸ್ತವವಾಗಿ ಪ್ರಧಾನಿಯವರು ಮಾಡಿದ್ದು, ಕಾನೂನು ಭಂಜಕರಿಗೆ ಹಾಗೂ ಕಾಳಧನ ಕುಳಗಳಿಗೆ ಕಪ್ಪುಹಣವನ್ನು 'ಬಿಳಿ ಹಣ'ವನ್ನಾಗಿ ಮಾಡಲು ಅವಕಾಶದ ಅನುಕೂಲವಲ್ಲದೆ ಬೇರೇನೂ ಅಲ್ಲ. ಈ ರೀತಿಯಾಗಿ, ತಪ್ಪಿತಸ್ಥರನ್ನು ಶಿಕ್ಷಿಸುವ ಬದಲು ಹಾಗೂ ಅಂಥವರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗುವ ಬದಲು ಕಾನೂನು ಭಂಜನೆಯನ್ನು ಅವರು ಕಾನೂನುಬದ್ಧಗೊಳಿಸಿದರು.

ಈ ಪ್ರಕ್ರಿಯೆಯಲ್ಲಿ, ಕೃಷಿಯ ನಂತರದಲ್ಲಿ ಅತ್ಯಂತ ಹೆಚ್ಚು ಉದ್ಯೋಗ ಸೃಷ್ಟಿಸುವ ನಮ್ಮ ದೇಶದ ಅನೌಪಚಾರಿಕ ಆರ್ಥಿಕತೆಯನ್ನು ಈ ನೋಟು ಅಮಾನ್ಯೀಕರಣ ನಾಶ ಮಾಡಿತು. ಅನೌಪಚಾರಿಕ ಆರ್ಥಿಕತೆ ದೇಶದ ಜಿಡಿಪಿಗೆ ದೊಡ್ಡ ಕೊಡುಗೆಯನ್ನು ನೀಡುತ್ತಿತ್ತು. ನಗದು ವ್ಯವಹಾರದ ಮೇಲೆ ಅವಲಂಬಿತವಾಗಿರುವ ಭಾರತದ ಕೋಟ್ಯಂತರ ಜನರ ಜೀವನೋಪಾಯವನ್ನೇ ಅಮಾನ್ಯೀಕರಣ ನಾಶ ಮಾಡಿತು. ದೇಶದ ಜಿಡಿಪಿಯಲ್ಲಿ ಕುಸಿತ ಮತ್ತು ಆರ್ಥಿಕತೆಯಲ್ಲಿನ ಬಿಕ್ಕಟ್ಟು ಪ್ರಧಾನಿಯವರ ಈ ಕ್ರಮದ ನೇರ ಪರಿಣಾಮವಾಗಿದೆ.

ಜಿಎಸ್‌ಟಿ

ಜಿಎಸ್‌ಟಿಯನ್ನು ಜಾರಿಗೆ ತರುವುದನ್ನು ಘೋಷಿಸುವ ಸಲುವಾಗಿ ಪ್ರಧಾನಿಯವರು ಸಂಸತ್ತಿನ ವಿಶೇಷ ಮಧ್ಯರಾತ್ರಿ ಅಧಿವೇಶನವನ್ನು ಕರೆದರು. ಜಿಎಸ್‌ಟಿ ಭಾರತದ ಆರ್ಥಿಕತೆಯನ್ನು ಕ್ರಾಂತಿಕಾರಗೊಳಿಸಲಿದೆ ಹಾಗೂ ಇದರಿಂದ ತೆರಿಗೆ ಸಂಗ್ರಹದ ಮೂಲಕ ಹೆಚ್ಚಿನ ಆದಾಯ ಸಂಗ್ರಹವಾಗಲಿದೆ ಎಂದು ಅವರು ಹೇಳಿಕೊಂಡರು. ಜಿಎಸ್‌ಟಿಯಿಂದಾಗಿ ತೆರಿಗೆ ಜಾಲ ವಿಸ್ತರಿಸಿದೆ ಎಂದವರು ಹೇಳಿದ್ದಾರೆ. ತೆರಿಗೆ ವಿವರ (ರಿಟರ್ನ್ಸ್) ಸಲ್ಲಿಸುವವರ ಸಂಖ್ಯೆ ಏರಿಕೆಯಾಗಿರಬಹುದು, ಆದರೆ ತೆರಿಗೆ ಸಂಗ್ರಹ ಗಣನೀಯವಾಗಿ ಕುಸಿದಿದೆ. 2018ರ ಎಪ್ರಿಲ್ ಡಿಸೆಂಬರ್ ನಡುವೆ ಜಿಎಸ್‌ಟಿ ಸಂಗ್ರಹವಾಗಿದ್ದು 96,800 ಕೋಟಿ ರೂಪಾಯಿ. ಆದರೆ ಬಜೆಟ್‌ನಲ್ಲಿ ಸಂಗ್ರಹ ಗುರಿ ಇದ್ದದ್ದು ಪ್ರತಿ ತಿಂಗಳು 1,06,300 ಕೋಟಿ ರೂಪಾಯಿ. ಬಜೆಟ್ ಗುರಿ ಮುಟ್ಟಬೇಕಾದರೆ ಮುಂದಿನ ಮೂರು ತಿಂಗಳಲ್ಲಿ ಸರಾಸರಿ 1,34,900 ಕೋಟಿ ರೂಪಾಯಿ ಸಂಗ್ರಹವಾಗಲೇ ಬೇಕು.

ಸಂದರ್ಶನದಲ್ಲಿ ಜಿಎಸ್‌ಟಿಯನ್ನು ಸಮರ್ಥಿಸಿಕೊಂಡಿರುವ ಪ್ರಧಾನಿ, ಅದು ತೆರಿಗೆ ವ್ಯವಸ್ಥೆಯನ್ನು ಸರಳೀಕರಿಸಿದೆ ಹಾಗೂ ಬಹು ದೊಡ್ಡ ವಿಭಾಗದ ಜನರಿಗೆ ಪರಿಹಾರ ಕಲ್ಪಿಸಿದೆ ಎಂದು ಹೇಳಿದ್ದಾರೆ. ಇದೊಂದು ಸುಳ್ಳಿನ ಕಂತೆಯೇ ಸರಿ. ಜಿಎಸ್‌ಟಿಯನ್ನು ಜಾರಿ ಮಾಡಿದ ರೀತಿಯಿಂದಾಗಿ ದೇಶದಲ್ಲಿ ಉದ್ಯೋಗ ಸೃಜನೆಯ ಪ್ರಮುಖ ರಂಗಗಳಲ್ಲಿ ಒಂದಾದ ಮಧ್ಯಮ, ಸಣ್ಣ ಮತ್ತು ಅತಿಸಣ್ಣ (ಎಂಎಸ್‌ಎಂಇ) ಕೈಗಾರಿಕೆಗಳ ಕ್ಷೇತ್ರ ಕುಂಠಿತವಾಯಿತು. ಕೋಟ್ಯಂತರ ಜನರು ತಮ್ಮ ಅನ್ನದ ದಾರಿಯನ್ನೇ ಕಳೆದುಕೊಂಡರು. ಜಿಎಸ್‌ಟಿಯಿಂದಾಗಿ 500ಕ್ಕೂ ಹೆಚ್ಚು ವಸ್ತುಗಳು ತೆರಿಗೆ ಶೂನ್ಯವಾಗಿವೆ ಎಂದೂ ಮೋದಿ ಬಡಾಯಿ ಕೊಚ್ಚಿದ್ದಾರೆ. ಆದರೆ ಈ ಪೈಕಿ 490 ವಸ್ತುಗಳು ಈಗಾಗಲೇ ಶೂನ್ಯ ತೆರಿಗೆ ವ್ಯಾಪ್ತಿಯಲ್ಲಿ ಇರುವಂಥವೇ ಆಗಿವೆ. ಹೀಗಾಗಿ ಪ್ರಧಾನಿಯವರ ಈ ಹೇಳಿಕೆ ಅರ್ಥಹೀನ.

ನಿರುದ್ಯೋಗ


ಸಂದರ್ಶನದ ವೇಳೆ ಪ್ರಧಾನಿಯವರು ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆ ಬಗ್ಗೆ ಏನ್ನೂ ಹೇಳಲಿಲ್ಲ. ತಮ್ಮ ಸರಕಾರ ಪ್ರತಿ ವರ್ಷ ಎರಡು ಕೋಟಿ ಉದ್ಯೋಗಗಳನ್ನು ಸೃಷ್ಟಿಸಲಿದೆ ಎಂದು ಪ್ರಧಾನಿ ದೇಶದ ಯುವಜನರಿಗೆ ಆಶ್ವಾಸನೆ ನೀಡಿದ್ದರು. ಅದರಂತೆ ಈ ಹೊತ್ತಿಗೆ ಹತ್ತು ಕೋಟಿ ಉದ್ಯೋಗಗಳು ಸೃಷ್ಟಿಯಾಗಬೇಕಿತ್ತು. ಅದರ ಬದಲು, ದೊಡ್ಡ ಪ್ರಮಾಣದಲ್ಲಿ ಲೇಆಫ್‌ಗಳು, ಅನೌಪಚಾರಿಕ ಆರ್ಥಿಕತೆಯ ನಾಶ, ಎಂಎಸ್‌ಎಂಇ ಕ್ಷೇತ್ರದ ನಾಶವಾಗಿ ಅಪಾರ ಪ್ರಮಾಣದ ನಿರುದ್ಯೋಗ ಉಂಟಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಕಳೆದ ಇಪ್ಪತ್ತು ವರ್ಷಗಳಲ್ಲೇ ಅತ್ಯಂತ ಕೆಟ್ಟ ನಿರುದ್ಯೋಗ ಪರಿಸ್ಥಿತಿಯನ್ನು ಭಾರತ ಎದುರಿಸುತ್ತಿದೆ ಎಂದು ಸಮೀಕ್ಷಾ ವರದಿಗಳು ಹೇಳುತ್ತಿವೆ. ಅಧಿಕೃತ ಅಂಕಿಸಂಖ್ಯೆಗಳನ್ನು ಪ್ರಕಟಿಸುವುದನ್ನು ಸರಕಾರ ನಿರ್ಬಂಧಿಸಿದೆ. ಕಾರ್ಮಿಕ ಬ್ಯೂರೋದ ವಾರ್ಷಿಕ ವರದಿ ಈ ಗಂಭೀರ ವಾಸ್ತವತೆಯನ್ನು ಬಯಲು ಮಾಡಲಿರುವುದರಿಂದ ಅದನ್ನು ಕೂಡ ಪ್ರಕಟಿಸಿಲ್ಲ.

ಯುವಜನರೇ ಭಾರತೀಯ ಜನಸಂಖ್ಯೆಯ ದೊಡ್ಡ ಭಾಗ. ಕಳೆದು ಐದು ವರ್ಷಗಳಲ್ಲಿ ಅವರ ಭವಿಷ್ಯವನ್ನು ಅಭದ್ರತೆ ಮತ್ತು ಅನಿಶ್ಚಯತೆಯ ಕೂಪಕ್ಕೆ ತಳ್ಳಲಾಗಿದೆ. ಈ ಯುವಜನರು ಭಾರತದ ಭವಿಷ್ಯದ ನಿರ್ಮಾಪಕರು. ಅವರ ಸಾಮರ್ಥ್ಯವನ್ನು ನಾಶ ಮಾಡುವುದೆಂದರೆ ನಮ್ಮ ಭವಿಷ್ಯವನ್ನೇ ನಾಶ ಮಾಡಿದಂತೆಯೆ ಸರಿ.

ಚಮಚಾ ಬಂಡವಾಳಶಾಹಿ

ಈ ಬಿಜೆಪಿ ಸರಕಾರದ ಆಡಳಿತದ ಅವಧಿಯಲ್ಲಿ ಭಾರತೀಯ ಸಾರ್ವಜನಿಕ ರಂಗದ ಬ್ಯಾಂಕ್‌ಗಳ

ಪುಟ 7 ಕ್ಕೆ



ವ್ಯಂಗ್ಯ ಚಿತ್ರ ಕೃಪೆ: ಸತೀಶ್ ಆಚಾರ್ಯ

ಎಡ ಪಕ್ಷಗಳ ಜಂಟಿ ಕರೆ

ಅಖಿಲ ಭಾರತ ಮಹಾ ಮುಷ್ಕರ ಮತ್ತು ಹರತಾಳ ಯಶಸ್ವಿಗೊಳಿಸಿ

ಮುಂಬರುವ ಜನವರಿ 8, 9-2019 ರಂದು ದೇಶವ್ಯಾಪ್ತಿಯಾಗಿ ಕಾರ್ಮಿಕ ವರ್ಗ ಹಾಗೂ ರೈತಾಪಿ ಮತ್ತಿತರೇ ಜನ ಸಮುದಾಯಗಳಿಂದ ನಡೆಸಲ್ಪಡುವ ಎರಡು ದಿನಗಳ ಅಖಿಲ ಭಾರತ ಮಹಾ ಮುಷ್ಕರ ಮತ್ತು ಹರತಾಳ ಅಥವಾ ಸ್ವಯಂ-ಸ್ಫೂರ್ತಿಯ ಬಂದ್ ನ್ನು ರಾಜ್ಯದ ಮಹಾ ಜನತೆ ಮತ್ತು ಎಲ್ಲ ದುಡಿಯುವ ಜನತೆ ರಾಜ್ಯದಾದ್ಯಂತ ಅಭೂತ ಪೂರ್ವವಾಗಿ ಯಶಸ್ವಿಗೊಳಿಸುವಂತೆ ಎಡಪಕ್ಷಗಳಾದ ಸಿಪಿಐ, ಸಿಪಿಐ(ಎಂ)ಹಾಗೂ ಎಸ್,ಯು.ಸಿ.ಐ (ಸಿ) ಮತ್ತು ಸಿಪಿಐ(ಎಂ,ಎಲ್) ಲಿಬರೇಷನ್ ಗಳ ರಾಜ್ಯ ಘಟಕಗಳು ಜಂಟಿಯಾಗಿ ಜನವರಿ 3 ರಂದು ಬೆಂಗಳೂರಿನಲ್ಲಿ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಕರೆ ನೀಡಿವೆ.

ಕೇಂದ್ರ ಸರಕಾರದ ಜನದ್ರೋಹದ ವಿರುದ್ಧ ನಡೆಯಲಿರುವ ಜನತೆಯ ಈ ಮುಷ್ಕರ ಅತ್ಯಂತ ನ್ಯಾಯಯುತವಾದುದಾಗಿದೆ. ಈ ಮುಷ್ಕರದ ಯಶಸ್ವಿಗೆ ನಮ್ಮೆಲ್ಲಾ ಸದಸ್ಯರು ಮತ್ತು ಘಟಕಗಳು ಶ್ರಮಿಸಲಿವೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ದೇಶದ ಎಲ್ಲ ದುಡಿಯುವ ಜನತೆಗೆ 'ಒಳ್ಳೆಯ ದಿನ'ಗಳನ್ನು ತರಲಾಗುವುದೆಂದು ಬಹು ದೊಡ್ಡ ಭರವಸೆಗಳನ್ನು ನೀಡಿ ಅಧಿಕಾರ ಪಡೆದ ಬಿಜೆಪಿ ಮತ್ತು ಸಂಘ ಪರಿವಾರಗಳು ಅಧಿಕಾರ ದಕ್ಕಿದ ಮೇಲೆ ಜನತೆಗೆ ನೀಡಿದ ಭರವಸೆಗಳನ್ನು ದುರುದ್ದೇಶದಿಂದಲೆ ಗಾಳಿಗೆ ತೂರಿ, ದೇಶ ವಿದೇಶಗಳ ಬಹುರಾಷ್ಟ್ರೀಯ ಸಂಸ್ಥೆಗಳ ಮತ್ತು ಬಂಡವಾಳಶಾಹಿ ಭೂಮಾಲಕರ ಬಾಲಬಡುಕತನ ತೋರುವ ಮೂಲಕ ದೇಶದ ನಾಗರೀಕರನ್ನು ವಂಚಿಸಲಾಗಿರುವುದನ್ನು ಹೇಳಿಕೆಯಲ್ಲಿ ತೀವ್ರವಾಗಿ ಖಂಡಿಸಲಾಗಿದೆ.

ನಿರಂತರವಾಗಿ ಏರುತ್ತಿರುವ ಪೆಟ್ರೋಲ್ - ಡೀಸೆಲ್ ಬೆಲೆಗಳು, ಸರಕು ಸಾಗಣೆ ಸಾರಿಗೆ ವೆಚ್ಚಗಳು, ಕೃಷಿ ಉತ್ಪನ್ನಗಳ ಹೂಡಿಕೆಗಳಾದ ಬೀಜ,ರಸಾಯನಿಕ ಗೊಬ್ಬರ, ಕ್ರಿಮಿನಾಶಕ ಹಾಗೂ ಕೃಷಿ ಉಪಕರಣಗಳ ಬೆಲೆಗಳು, ಸರಕಾರಗಳ ಹೊಸ ತೆರಿಗೆ ಭಾರಗಳು ಮತ್ರು ಕಾಳ ಸಂತೆಕೋರರ ವಂಚನೆಗಳಿಂದಾಗಿ, ಈ ದಿನಗಳಲ್ಲಿ ಜನ ಸಾಮಾನ್ಯರು ಬಳಸುವ ಅಗತ್ಯ ವಸ್ತುಗಳ ಬೆಲೆಗಳು ಗಗನ ಮುಖಿಯಾಗಿವೆ. ಆ ಮೂಲಕ ಬೆಲೆಗಳನ್ನು ನಿಯಂತ್ರಿಸಲಾಗುವುದೆಂಬ ಬಿಜೆಪಿಯ ಕುಹಕತನವನ್ನು ಬಯಲಿಗೆಳೆದಿವೆ.

ದೇಶದ ಅಭಿವೃದ್ಧಿಯ ಹೆಸರು ಹೇಳಿ ಹೊಟ್ಟೆಗಿಲ್ಲದ ಜನತೆಯಿಂದಲೇ ಒಂದು ಕೋಟಿ ಕೋಟಿ ರೂಗಳಿಗಿಂತಲೂ ಅಧಿಕ ಮೊತ್ತದ ತೆರಿಗೆ ಸಂಗ್ರಹಿಸಿದ ನರೇಂದ್ರ ಮೋದಿಯವರ ಸರಕಾರ ಚುನಾವಣೆಯಲ್ಲಿ ಜನತೆಗೆ ನೀಡಿದ ಒಂದೇ ಒಂದು ವಾಗ್ದಾನವನ್ನು ಜಾರಿಗೆ ತರದೇ ಜನತೆಯ ಬೆನ್ನಿಗೆ ಇರಿದಿದೆ., ಎಂದು ಹೇಳಿಕೆ ತಿಳಿಸಿದೆ

ನೋಟುಗಳ ಬದಲಾವಣೆ ಮತ್ತು ಏಕ-ರೂಪದ ಸರಕು ಮತ್ತು ಸೇವಾ ತೆರಿಗೆ, ಸಾರ್ವಜನಿಕ ರಂಗದ ಖಾಸಗೀಕರಣ, ಸಾರ್ವಜನಿಕ ವೆಚ್ಚದಲ್ಲಿ ಕಡಿತ ಮುಂತಾದ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಲೂಟಿಕೋರ ನೀತಿಗಳಿಂದಾಗಿ, ದೇಶದ ದುಡಿಯುವ ಜನತೆ ತನ್ನ ಕೋಟ್ಯಾಂತರ ಕೆಲಸದ ದಿನಗಳನ್ನು ಮತ್ತು ಉದ್ಯೋಗಗಳನ್ನು ಕಳೆದುಕೊಳ್ಳುವಂತಾಗಿದೆ.

ಕಾರ್ಮಿಕರ ಬಲವಾದ ಒತ್ತಾಯಗಳ ನಡುವೆಯೂ ಇಂತಹ ಬೆಲೆ ಏರಿಕೆಯ ಸಂದರ್ಭದಲ್ಲಿ ಕನಿಷ್ಠ ವೇತನವನ್ನು ಸಾರ್ವತ್ರಿಕವಾಗಿ ರೂ. 18,000 ಕ್ಕೆ ಹೆಚ್ಚಿಸಲಿಲ್ಲ ಮಾತ್ರವಲ್ಲ, ಕಾರ್ಮಿಕರು ಸಂಘಟಿತರಾಗುವ ಮತ್ತು ಚೌಕಾಸಿ ಮಾಡುವ ಹಕ್ಕುಗಳ ಮೇಲೆ ದಾಳಿ ಮಾಡಲಾಗುತ್ತದೆ. ಉದ್ಯೋಗ ಭದ್ರತೆಯನ್ನು ನಿರಾಕರಿಸಲಾಗುತ್ತದೆ.

ಸಾರ್ವಜನಿಕ ರಂಗದ ಕೈಗಾರಿಕೆಗಳನ್ನು ಕಳಚಿ ಹಾಕಲಾಗುತ್ತಿದೆ, ಎಂದು ಸರಕಾರದ

ಪುಟ 4 ಕ್ಕೆ

ತೊಕ್ಕೋಟು ಫ್ಲೈ-ಓವರ್ ಅಣಕು ಉದ್ಘಾಟನೆ

ಕರಾವಳಿ ರಾಷ್ಟ್ರೀಯ ಹೆದ್ದಾರಿ ಮೇಲಿರುವ ತೊಕ್ಕೊಟ್ಟು ಫ್ಲೈ ಓವರ್ ಕಾಮಗಾರಿ ಕಳೆದ 8 ವರ್ಷಗಳ ಹಿಂದೆಯೇ ಆರಂಭವಾಗಿದ್ದರೂ ಇನ್ನೂ ಅಪೂರ್ಣವಾಗಿರುವ ಹಿನ್ನೆಲೆಯಲ್ಲಿ ಉಳ್ಳಾಲ ವಲಯ ಡಿವೈಎಫ್ಐ ನೇತೃತ್ವದಲ್ಲಿ ಈಗಾಗಲೇ ನಾಲ್ಕಾರು ಬಾರಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಗಿದೆ. ಇತ್ತೀಚೆಗೆ ನಡೆದ ಪಪ್ರತಿಭಟನೆಯ ತೀವ್ರತೆಯನ್ನು ಗಮನಿಸಿದಸ ಬಳಿಕ ಮಂಗಳೂರಿನ ಸಂಸದರು ತಾವು ಶೀಘ್ರ ಮೇಲ್ಸೇತುವೆ ಕಾಮಗಾರಿ ಮಾಡಿಸುವುದಾಗಿಯೂ ಡಿಸೆಂಬರ್ 31ರೊಳಗಡೆ ಪ್ರಧಾನಿ ನರೇಂದ್ರ ಮೋದಿಯವರ ಹಸ್ತದಿಂದಲೇ ಉದ್ಘಾಟನೆ ಮಾಡುವುದಾಗಿ ಪತ್ರಿಕೆಗಳಲ್ಲಿ ಪ್ರಚಾರ ಪಡಿಸಿದ್ದರು.

ಸಂಸದರು ಭರವಸೆ ನೀಡಿ ಡಿಸೆಂಬರ್ 31 ಗಡುವು ತಲುಪಿದ್ದರೂ, ಮೇಲ್ಸೇತುವೆ ಕಾಮಗಾರಿ ಇನ್ನೂ ಅಪೂರ್ಣವಾಗಿಯೇ ಉಳಿದಿದೆ. ಈ ಬಗ್ಗೆ ವಿಶಿಷ್ಟ ರೀತಿಯಲ್ಲಿ ಡಿಸೆಂಬರ್ 30 ರಂದು ಡಿವೈಎಫ್ಐನವರು ಪ್ರತಿಭಟಿಸಿದ್ದರು. ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ, ಸ್ಥಳೀಯ ಸಂಸದ ನಳಿನ್ ಕುಮಾರ್ ಕಟೀಲ್, ಪ್ರಧಾನಿ ನರೇಂದ್ರ ಮೋದಿ ಇವರ ಮುಖವಾಡಗಳನ್ನು ಹಾಕಿದ್ದ 3 ಮಂದಿ ಡಿವೈಎಫ್ಐ ಕಾರ್ಯಕರ್ತರಿಂದ ತೊಕ್ಕೊಟ್ಟು ಫ್ಲೈಓವರ್ ಸಮೀಪ ಟೇಪು ಕತ್ತರಿಸುವ ಮೂಲಕ ಅಣಕು ಉದ್ಘಾಟನಾ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಉದ್ಘಾಟನಾ ಸಮಾರಂಭದ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ಬಹಳ ವೈರಲ್ ಆಗಿ ಸಂಸದರನ್ನು ನಗೆಪಾಟಲುಗೀಡುಮಾಡಿದೆ.



ಅಣಕು ಉದ್ಘಾಟನೆಯ ಈ ವಿಭಿನ್ನ ಪ್ರತಿಭಟನೆಯಲ್ಲಿ ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲಿಯಾನ್, ಸಿಪಿಐ(ಎಂ) ಮುಖಂಡರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ್, ಡಿವೈಎಫ್ಐ ಉಳ್ಳಾಲ ವಲಯ ಸಮಿತಿಯ ರಝಾಕ್ ಮೊಂಟೆಪದವು, ನಿತಿನ್ ಕುತ್ತಾರ್, ಸುನಿಲ್ ತೇವುಲ ಭಾಗವಹಿಸಿದ್ದರು.

ಬಂಟ್ವಾಳ ಸಿಪಿಐ ಕಚೇರಿಗೆ ಬೆಂಕಿ: ಸಿಪಿಐ(ಎಂ) ಖಂಡನೆ



ಭಾರತ ಕಮ್ಯೂನಿಸ್ಟ್ ಪಕ್ಷ ಸಿಪಿಐ ಪಕ್ಷದ ಬಂಟ್ವಾಳ ತಾಲೂಕು ಸಮಿತಿಯ ಕಚೇರಿಗೆ ನಿನ್ನೆ (ತಾ.2–1–2019 ರಂದು) ರಾತ್ರಿ ಬೆಂಕಿ ಇಟ್ಟು ಸಂಪೂರ್ಣವಾಗಿ ಭಸ್ಮಗೊಳಿಸಿರುವಂತಹ ಘಟನೆ ನಡೆದಿದ್ದು ಇದನ್ನು ಸಿಪಿಐ(ಎಂ) ಪಕ್ಷ ತೀವ್ರವಾಗಿ ಖಂಡಿಸುತ್ತದೆ. 2014ರಲ್ಲಿ ಕೇಂದ್ರದಲ್ಲಿ ಆಡಳಿತಕ್ಕೆ ಬಂದಿರುವಂತಹ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಆಳ್ವಿಕೆಗೆ ಬಂದ ತರುವಾಯ ದೇಶವ್ಯಾಪಿಯಾಗಿ ಪಶ್ಚಿಮ ಬಂಗಾಳ, ತ್ರಿಪುರಾ, ಕೇರಳ, ಪಂಜಾಬ್ ಹಾಗೂ ಕರ್ನಾಟಕದ ಎಡಪಂಥೀಯರ ಕಚೇರಿಗಳನ್ನು ಹಾನಿಗೊಳಿಸಿ ಪ್ರಜಾಪ್ರಭುತ್ವ ಚಳುವಳಿಗಳನ್ನು ಹತ್ತಿಕ್ಕುವ ಕೃತ್ಯಗಳು ನಡೆಯುತ್ತಿವೆ. ಇದರ ಭಾಗವಾಗಿ ಬಂಟ್ವಾಳ ಸಿಪಿಐ ಕಚೇರಿ ಮೇಲೆ ಈ ರೀತಿಯ ದುಷ್ಕೃತ್ಯ ನಡೆದಿದೆ ಎಂದು ಸಿಪಿಐ(ಎಂ) ಆರೋಪಿಸಿದೆ. ಇಲ್ಲಿಯ ಪೋಲೀಸ್ ಇಲಾಖೆ ಹಾಗೂ ಸರಕಾರ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸಿ ಶಿಕ್ಷೆಗೊಳಪಡಿಸಬೇಕೆಂದು ಒತ್ತಾಯಿಸಲಾಗಿದೆ.

ಜನವರಿ 4 ರಂದು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಈ ದಾಳಿಯನ್ನು ಖಂಡಿಸಿ ಎಡಪಕ್ಷಗಳ ಜಂಟಿ ಪ್ರತಿಭಟನೆ ನಡೆಯಿತು.



ವಿಜಯಾ ಬ್ಯಾಂಕ್ ವಿಲೀನದ ವಿರುದ್ಧ ಪ್ರತಿಭಟನೆ




ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆಗೊಂಡ ವಿಜಯಾ ಬ್ಯಾಂಕನ್ನು ಈಗ ನಷ್ಟದಲ್ಲಿರುವ 'ಬ್ಯಾಂಕ್ ಆಫ್ ಬರೋಡಾ' ಮತ್ತು 'ದೇನಾ ಬ್ಯಾಂಕ್' ಜತೆ ವಿಲೀನಗೊಳಿಸುವುದನ್ನು ವಿರೋಧಿಸಿ ಸಮಾನ ಮನಸ್ಕರು ಸೇರಿ ಜನವರಿ 3 ರಂದು ಮಂಗಳೂರಿನ ಜಿಲ್ಲಾಧಿಕಾರಿಯ ಕಚೇರಿಯ ಮುಂದೆ ಪ್ರತಿಭಟನೆ ಮಾಡಿದರು.

ಮೂಲ್ಕಿ ಸುಂದರ ರಾಮ ಶೆಟ್ಟಿ, ಎ ಬಿ ಶೆಟ್ಟಿಯಂತಹ ಹಿರಿಯ ತುಳುವ ಚೇತನರು ಕಟ್ಟಿದ ವಿಜಯಾ ಬ್ಯಾಂಕನ್ನು ವಿಲೀನದ ಹೆಸರಿನಲ್ಲಿ ಮುಚ್ಚಿಸಲು ಹೊರಟ ಮೋದಿ ನೇತೃತ್ವದ ಸರಕಾರದ ವಿರುದ್ಧ ಜಿಲ್ಲೆಯ ಜನರ ದನಿಯಾಗಬೇಕಿದ್ದ ಸಂಸದರು ಮೌನ ವಹಿಸಿ ಹಿರಿಯ ಚೇತನರಿಗೂ ತುಳುನಾಡಿನ ಅಸ್ಮಿತೆಗೂ ಅವಮಾನ ಮಾಡಿದ್ದಾರೆಂದು ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಮಾತನಾಡುತ್ತಾ ಟೀಕಿಸಿದರು. ಸಂಸದ ನಳಿನ್ ಕುಮಾರ್ ಕಟೀಲ್ ಮೋದಿಭಕ್ತಿಯಿಂದ ಹೊರಬರಬೇಕು. ಜಿಲ್ಲೆಯ ಜನತೆ ಜತೆ ನಿಲ್ಲಬೇಕು. ಜಿಲ್ಲೆಯ ರಾಜಕೀಯ ನಾಯಕತ್ವವು ದಿವಾಳಿಯಾಗಿದೆ. ಜಿಲ್ಲೆ ಮೇಲೆ ಎಲ್ಲಾ ಕಡೆಗಳಿಂದಲೂ ದಾಳಿಯಾದರೂ ಸುಮ್ಮನಿರುವ ಕುರುಡು ಕಣ್ಣಿನ ಪ್ರತಿನಿಧಿಗಳಿಗೆ ಮತದಾರರು ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸಬೇಕು ಎಂದು ಅಮೀನ್ ಮಟ್ಟು ಹೇಳಿದರು.

ವಿಜಯ ಬ್ಯಾಂಕನ್ನು ನಷ್ಟದಲ್ಲಿರುವ ಗುಜರಾತ್ ಬ್ಯಾಂಕ್ ಗಳ ಜೊತೆಗೆ ವಿಲೀನ ಮಾಡಿದರ ಬಗ್ಗೆ ಇಡೀ ತುಳುನಾಡು ಚರ್ಚಿಸುತ್ತಿದೆ. ಸಂಸದ ನಳಿನ್ ಕುಮಾರ್ ಕಟೀಲ್ ಒಂದಕ್ಷರ ಮಾತಾಡುತ್ತಿಲ್ಲ. ಕೇಂದ್ರ ಸರಕಾರದ ಕ್ರಮವನ್ನು ಸಮರ್ಥಿಸಿಯಾದರೂ ಸರಿ ತುಳುನಾಡಿನ ಬಿಜೆಪಿಯ ಎರಡು ಸಂಸದರು, ಹನ್ನೆರಡು ಶಾಸಕರು, ಬಿಜೆಪಿ ಪಕ್ಷ, ಸಂಘ ಪರಿವಾರ ಮಾತಾಡಬೇಕು. ಜನತೆಗೆ ತಮ್ಮ ನಿಲುವು ಸ್ಪಷ್ಟ ಪಡಿಸಬೇಕು. ಈ ಮೌನ ಒಳ್ಳೆಯದಲ್ಲ ಎಂದು ಡಿ.ವೈ.ಎಫ್.ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳ ಹೇಳಿದರು.

ಪ್ರತಿಭಟನೆಯಲ್ಲಿ ಮಾಜಿ ಸಚಿವ ರಮಾನಾಥ ರೈ, ಮಾಜಿ ಶಾಸಕ ವಿಜಯ ಕುಮಾರ ಶೆಟ್ಟಿ, ಅವರು ಸಹ ಮಾತನಾಡಿದರು.

ಸಿಪಿಐ(ಎಂ) ಮುಖಂಡ ಯಾದವ ಶೆಟ್ಟಿ, ಕಾರ್ಪೋರೇಟರ್ ದಯಾನಂದ ಶೆಟ್ಟಿ, ಸಮುದಾಯದ ವಾಸುದೇವ ಉಚ್ಚಿಲ್, ಬ್ಯಾಂಕ್ ಯೂನಿಯನ್ ಮುಖಂಡ ಬಿ.ಎಂ.ಮಾಧವ ಅಲ್ಲದ್ದೆಲವು ಕಾಂಗ್ರೆಸ್, ಜೆಡಿ–ಎಸ್ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದರು. ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಝ್ ಸ್ವಾಗತಿಸಿ ಕಾರ್ಯಕ್ರಮ



ಅಖಿಲ ಭಾರತ ಮಹಾ ಮುಷ್ಕರ....... ಪುಟ 3 ರಿಂದ

ಹೊಣೇಗೇಡಿತನವನ್ನು ಹೇಳಿಕೆ ಬಯಲಿಗೆಳೆದಿದೆ.

ಕೃಷಿ ಬಿಕ್ಕಟ್ಟಿನಿಂದ ಜರ್ಜರಿತವಾದ ಗ್ರಾಮೀಣ ಪ್ರದೇಶವನ್ನು ಸಂರಕ್ಷಿಸಲು ರೈತರ ಆತ್ಮಹತ್ಯೆಗಳು ಮತ್ತು ಬಡವರ ಹಸಿವಿನ ಸಾವುಗಳನ್ನು ತಡೆಯಲು ಅವರ ಸಾಲ ಮನ್ನಾ ನಿರಾಕರಿಸಿ ದೊಡ್ಡ ಬಂಡವಾಳದಾರರ ಲಕ್ಷಾಂತರ ಕೋಟಿ ರೂ ಸಾಲ ಮನ್ನಾ ಮಾಡಲಾಗಿದೆ. ರೈತರಿಗೆ ಕೃಷಿ ಉತ್ಪನ್ನ ಗಳ ವೆಚ್ಚದ ಒಂದೂವರೆ ಯಷ್ಟು ಬೆಲೆ ನಿಗದಿಸಲಾಗದೆಂದು ಸುಪ್ರಿಂ ಕೋರ್ಟ ಮುಂದೆ ಪ್ರಮಾಣ ಪತ್ರ ನೀಡಲಾಗಿದೆ.

ವ್ಯವಸಾಯದಲ್ಲಿ ಆಸಕ್ತಿ ಹೊಂದಿರುವ ದಲಿತರು, ಹಿಂದುಳಿದ ಸಮುದಾಯಗಳ ಬಡವರಿಗೆ ಸರಕಾರಿ ಜಮೀನು ನೀಡುವ ಬದಲು, ಕೋಟ್ಯಾಂತರ ಎಕರೆ ಜಮೀನುಗಳನ್ನು ಕಂಪನಿ ಗಳಿಗಾಗಿ ಕಾಯ್ದಿರಿಸಲಾಗುತ್ತದೆ. ಕೋಟ್ಯಾಂತರ ಎಕರೆ ಬೀಳು ಭೂಮಿಗಳನ್ನು ಕಂಪನಿ ಕೃಷಿಗೆ ವಹಿಸಿಕೊಡಲಾಗುತ್ತಿದೆ. 20 ಕೋಟಿಗೂ ಅಧಿಕ ಎಕರೆ ಜಮೀನುಗಳನ್ನು ಕೈಗಾರಿಕಾ ಕಾರಿಡಾರ್ ಮತ್ತಿತರೆ ಮೂಲ ಸೌಕರ್ಯಗಳ ಹೆಸರಿನಲ್ಲಿ ಬಲವಂತದ ಸ್ವಾಧೀನ ಮಾಡಲಾಗುತ್ತಿದೆ, ಎಂದು ಮೋದಿ ಸರಕಾರವನ್ನು ಹೇಳಿಕೆ ಖಾರವಾಗಿ ಟೀಕಿಸಿದೆ.

ಪ್ರತಿವರ್ಷ ವಿದ್ಯಾವಂತ ನಿರುದ್ಯೋಗಿಗಳು 1.5 ಕೋಟಿ ಹೊರಬಂದರೇ ಉದ್ಯೋಗ ನೀಡಿಕೆ ಕೇವಲ ಅದರ ಶೇ 1 ರಷ್ಟು ಇಲ್ಲ. ಶಿಕ್ಷಣ ಹಾಗೂ ಆರೋಗ್ಯದ ಖಾಸಗೀಕರಣ ಬಡವರನ್ನು ಸಂಕಷ್ಟಕ್ಕೀಡುಮಾಡುತ್ತಿದೆ.

ಭ್ರಷ್ಟಾಚಾರ ಮಾಡಲು ಬಿಡುವುದಿಲ್ಲ ಎಂದ ಪ್ರಧಾನಿ ಸ್ವತಃ ಅವರೇ ರಫೆಲ್ ಹಗರಣದ ಆರೋಪ ಹೊತ್ತಿದ್ದಾರೆ.

ಜನರ ಪ್ರತಿರೋಧಗಳನ್ನು ಸೌಹಾರ್ದತೆಯನ್ನು ಕದಡುವ ಹಾಗೂ ಹಿಂದೂ ಕೋಮುವಾದವನ್ನು ಹರಡುವ ಮೂಲಕ ಒಡೆದಾಳಲು ಉತ್ತೇಜನ ನೀಡಲಾಗುತ್ತಿದೆ. ಆಹಾರದ ಹಕ್ಕು, ಬದುಕುವ ಹಕ್ಕು, ಧಾರ್ಮಿಕ ಹಕ್ಕು, ಮೀಸಲಾತಿ ಹಕ್ಕು, ವೈವಾಹಿಕ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ ಮುಂತಾದ ಸಂವಿಧಾನ ನೀಡಿದ ಪ್ರಜಾಸತ್ತಾಕ ಹಕ್ಕುಗಳ ಮೇಲೆ ದಾಳಿಗಳನ್ನು ಸಂಘಟಿಸಲಾಗುತ್ತಿದೆ. ಪ್ರಗತಿಪರರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿ ಬಂಧಿಸಿ ಬೆದರಿಸಲಾಗುತ್ತಿದೆ.

ಸರಕಾರಗಳ ಜನವಿರೋಧಿ ನೀತಿಗಳಿಂದಾಗಿ ಶ್ರೀಮಂತರು ಬಡವರ ನಡುವಿನ ಅಂತರ ಹೆಚ್ಚುತ್ತಿರುವುದರಿಂದ ದಲಿತರು, ಮಹಿಳೆಯರು, ಅಲ್ಪ ಸಂಖ್ಯಾತರ ಮೇಲಿನ ದೌರ್ಜನ್ಯಗಳು ಬೆಳೆಯುತ್ತಲೇ ಇವೆ, ಎಂದು ಹೇಳಿಕೆ ತಿಳಿಸಿದೆ.

ಆದ್ದರಿಂದ ಈ ಸರಕಾರ ಮುಂದುವರೆಯಲು ಯಾವುದೇ ನೈತಿಕತೆ ಉಳಿದಿಲ್ಲ ಜನವಿರೋದಿ ನಿಲುಮೆಗಳನ್ನು ತಡೆಯಲು ತೀವ್ರ ರೀತಿಯ ಚಳುವಳಿಯೊಂದೇ ಮಾರ್ಗವಾಗಿರುವುದರಿಂದ ಈ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸುವುದು ಅಗತ್ಯವಿದೆ, ಎಂದು ಹೇಳಿಕೆ ಕರೆ ಕೊಟ್ಟಿದೆ.

ಎಡಪಕ್ಷಗಳ ರಾಜ್ಯ ಕಾರ್ಯದರ್ಶಿಗಳಾದ ಸಿಪಿಐ(ಎಂ)ನ ಯು. ಬಸವರಾಜ, ಸಿಪಿಐ ನ ಸಾತಿ ಸುಂದರೇಶ್, ಎಸ್‌ಯುಸಿಐ(ಸಿ) ನ ಕೆ.ಉಮಾ, ಸಿಪಿಐ(ಎಂಎಲ್) ಲಿಬರೇಶನ್ ನ ಕ್ಲಿಫ್ಟನ್ ಡಿ ಈ ಹೇಳಿಕೆ ನೀಡಿದ್ದಾರೆ. •

ಜನವರಿ 8–9 ಮುಷ್ಕರ ಯಶಸ್ಸಿಗಾಗಿ ಭರದ ಸಿದ್ಧತೆ

ಜನವರಿ 8, 9 ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ರಾಜ್ಯದಾದ್ಯಂತ ಭರದ ಸಿದ್ಧತೆ ನಡೆದಿದೆ. ದಕ್ಷಿಣ ಕನ್ನಡದಿಂದ ವಿವರವಾದ ವರದಿ ಬಂದಿದ್ದು, ಇತರ ಹಲವೆಡೆಗಳಿಂದ ಕಿರುವರದಿಗಳು, ಚಿತ್ರಗಳು ಬಂದಿವೆ. ಅವು ಇಲ್ಲಿವೆ.

ಕಾರ್ಮಿಕ ಸಂಘಟನೆಗಳು ಜನವರಿ 8, 9 ರಂದು ಹಮ್ಮಿಕೊಂಡಿರುವ ಅಖಿಲ ಭಾರತ ಮುಷ್ಕರವನ್ನು ಸಂಪೂರ್ಣ ಯಶಸ್ವಿಗೊಳಿಸಲು ದ.ಕ. ಜಿಲ್ಲೆಯ ಕಾರ್ಮಿಕ, ರೈತ, ಮಹಿಳಾ, ಯುವಜನ ಸಂಘಟನೆಗಳು ಭಾರೀ ಸಿದ್ಧತೆ ನಡೆಸುತ್ತಿವೆ.

ದ.ಕ.ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಸಮಾವೇಶ ನಡೆಸಿದ ಬಳಿಕ, ಅಖಿಲ ಭಾರತ ಮುಷ್ಕರ ಯಶಸ್ವಿಗೊಳಿಸಲು ವಿವಿಧ ಕಾರ್ಮಿಕ ಸಂಘಟನೆಗಳು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಕರೆ ಕೊಟ್ಟ ಮೇರೆಗೆ, ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳು ದ.ಕ. ಜಿಲ್ಲಾದ್ಯಂತ ಡಿಸೆಂಬರ್ 20 ರಿಂದ 22ರ ವರೆಗೆ 3 ದಿನಗಳ ಜಾಥಾ ಹಮ್ಮಿಕೊಂಡಿದ್ದವು. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಂಚರಿಸಿದ ಜಾಥಾದ ನಾಯಕತ್ವವನ್ನು ಸಿಐಟಿಯು ದ.ಕ. ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ವಹಿಸಿದ್ದರು. ಮಂಗಳೂರಿನ ಉದ್ಘಾಟನಾ ಸಭೆಯಲ್ಲಿ ಸಿಐಟಿಯು ಜೊತೆ ಎಐಟಿಯುಸಿ, ಇಂಟಕ್ ಮುಖಂಡರು ಭಾಗವಹಿಸಿದ್ದರು. ಸಿಐಟಿಯು ಕಾರ್ಯಕರ್ತರೊಂದಿಗೆ ಎಐಟಿಯುಸಿ ಸಂಘಟನೆಯವರು ಬಂಟ್ವಾಳ (ಬಿಸಿರೋಡ್), ವಿಟ್ಲಗಳಲ್ಲಿ ಜಾಥಾವನ್ನು ಸ್ವಾಗತಿಸಿರುತ್ತಾರೆ. ಪುತ್ತೂರು, ವಿಟ್ಲ, ಕಡಬ, ಬೈಕಂಪಾಡಿ ಮೊದಲಾದೆಡೆ ಸಿಐಟಿಯು ಕಾರ್ಯಕರ್ತರೊಂದಿಗೆ ಇಂಟಕ್ ಕಾರ್ಯಕರ್ತರೂ ಜಾಥಾವನ್ನು ಸ್ವಾಗತಿಸಿರುತ್ತಾರೆ. ಸಿಐಟಿಯು, ಎಐಟಿಯುಸಿ, ಇಂಟಕ್ ಕಾರ್ಯಕರ್ತರು ಹೆಚ್ಚು ಸಂಖ್ಯೆಯಲ್ಲಿ ಒಂದೆಡೆ ಸ್ವಾಗತಿಸಿದ್ದು ಬಂಟ್ವಾಳದಲ್ಲೇ. ಸಿಐಟಿಯು ಸಂಘಟನೆ ದುರ್ಬಲವಾಗಿರುವ ಬಜಪೆ, ಕಿನ್ನಿಗೋಳಿ, ಮುಲ್ಕಿ ಪ್ರದೇಶಗಳಲ್ಲೂ ಜಾಥಾ ಸಾಗಿ ಬಂದಿದ್ದು, ಮಂಗಳೂರಿನ ಹೊರವಲಯದ ಕಾವೂರಿನಲ್ಲಿ ಡಿಸೆಂಬರ್ 22 ರಂದು ಜಾಥಾವನ್ನು ಮುಕ್ತಾಯಗೊಳಿಸಲಾಯಿತು. ಮುಷ್ಕರಕ್ಕೆ ಜಿಲ್ಲಾದ್ಯಂತ ಬೆಂಬಲ ಜಾಥಾದ ವೇಳೆ ಕಂಡು ಬಂದಿದೆ.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಸಮಾವೇಶ, ಜಾಥಾಗಳ ಬಳಿಕ ಇತರ ಸಾಮೂಹಿಕ ಸಂಘಟನೆಗಳೂ, ವಿವಿಧ ಕಾರ್ಮಿಕ ಸಂಘಟನೆಗಳೂ ಜತೆಗೂಡಿ ತಮ್ಮ ತಮ್ಮ ಸಮಾವೇಶ ನಡೆಸಿ ಅಖಿಲ ಭಾರತ ಮುಷ್ಕರವನ್ನು ಬೆಂಬಲಿಸಲು ನಿರ್ಣಯ ಕೈಗೊಂಡಿದ್ದು, ಈ ಬಗ್ಗೆ ಜನಜಾಗೃತಿ ಕಾರ್ಯಕ್ರಮ ನಡೆಸುತ್ತಿವೆ. ತಾಲೂಕು ಹಾಗೂ ವಲಯಗಳಲ್ಲಿ ಜಂಟಿ ಸಮಾವೇಶಗಳು ನಡೆದಿವೆ. ಸಿಐಟಿಯು ಮಾತ್ರವೇ ಇರುವಲ್ಲಿಯೂ ಸಮಾವೇಶ ನಡೆಸಲಾಗಿದೆ.

ವಿವಿಧ ಕಾರ್ಮಿಕ ಸಂಘಟನೆಗಳ ಸಿದ್ಧತೆಗಳು:

ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ದ.ಕ.ಜಿಲ್ಲಾ ಸಮಿತಿ ವಿಸ್ತೃತ ಸಭೆ ನಡೆಸಿ, ಕರೆ ಕೊಟ್ಟ ಮೇರೆಗೆ, ವಲಯವಾರು ಘಟಕಗಳು ಕಟ್ಟಡ ಕಾರ್ಮಿಕರ ಸಮಾವೇಶಗಳನ್ನು ನಡೆಸಿ ಮುಷ್ಕರ ಯಶಸ್ಸಿಗೆ ತಯಾರಿ ಮಾಡಿಕೊಳ್ಳುತ್ತಿವೆ. ಮೂಡಬಿದರೆಯಲ್ಲಿ ಡಿಸೆಂಬರ್ 31 ರಂದು ನಡೆದ ಕಟ್ಟಡ ಕಾರ್ಮಿಕರ ಸಮಾವೇಶದಲ್ಲಿ ಸಂಘಟನೆಯ ರಾಜ್ಯಾಧ್ಯಕ್ಷರಾದ ಮಹಾಂತೇಶ್ ಭಾಗವಹಿಸಿ ಮಾರ್ಗದರ್ಶನ ನೀಡಿದರು. ಜಿಲ್ಲಾ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು ಹೆಚ್ಚಿನ ಸಮಾವೇಶಗಳಲ್ಲಿ ಭಾಗವಹಿಸಿದ್ದರು.

ಸಿಐಟಿಯು ನೇತೃತ್ವದ ಜಿಲ್ಲೆಯ ಬೀಡಿ ಕಾರ್ಮಿಕ ಸಂಘಟನೆಗಳು ತಮ್ಮ ಬಹುಕಾಲದ ಬಾಕಿ ವೇತನ ಮತ್ತು ಬಾಕಿ ತುಟ್ಟಿಭತ್ತೆಯ ಬೇಡಿಕೆಯ ಹೋರಾಟವನ್ನು ಮುಂದುವರಿಸುವ ಸಂಬಂಧ ಮಾಲಿಕರಿಗೆ ಮುಷ್ಕರ ನೋಟೀಸ್ ನೀಡಲು ಸಿದ್ಧತೆ ನಡೆಸಿದ್ದು ಜನವರಿ 8, 9ರ ಮಹಾಮುಷ್ಕರವನ್ನು ಯಶಸ್ವಿಗೊಳಿಸಲು ಸಿದ್ಧತೆ ನಡೆಸುತ್ತಿವೆ. ಬೀಡಿ ಕಾರ್ಮಿಕ ಫೆಡರೇಶನ್ನಿನ ಜಿಲ್ಲಾ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ಇವರಿಗೆ ಮಾರ್ಗದರ್ಶನ ನೀಡಿರುತ್ತಾರೆ.

ತಲೆಹೊರೆ ಕಾರ್ಮಿಕರು ಬಂದರು ಶ್ರಮಿಕ ಸಂಘ ಹಾಗೂ ಬಂದರು ಮಹಿಳಾ ಕಾರ್ಮಿಕರು ಸಮಾವೇಶಗಳನ್ನು ನಡೆಸಿದ್ದು, ಅಖಿಲ ಭಾರತ ಮುಷ್ಕರ ಯಶಸ್ವಿಗೊಳಿಸಲು ಸಿದ್ಧತೆ ನಡೆಸಿದ್ದರು. ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ ಅವರು ಈ ಸಂಘಟನೆಗಳಿಗೆ ಮಾರ್ಗದರ್ಶನ ನಿಡಿರುತ್ತಾರೆ. ಅದೇ ರೀತಿ ವಸಂತ ಆಚಾರಿಯವರು ಜಿಲ್ಲೆಯ ಬಿಸಿಯೂಟ ಕಾರ್ಮಿಕರ ಜಿಲ್ಲಾ ಸಂಘದ ಸಭೆಗೆ ಮಾರ್ಗದರ್ಶನ ನೀಡಿದ್ದು ಮಾತ್ರವಲ್ಲದೆ, ವಲಯ ಘಟಕಗಳ ಸಮಾವೇಶಗಳಲ್ಲೂ ಭಾಗವಹಿಸಿ ಮುಷ್ಕರ ಯಶಸ್ವಿಗೊಳಿಸಲು ಮಾರ್ಗದರ್ಶನ ನೀಡಿರುತ್ತಾರೆ. ಜಿಲ್ಲಾಧ್ಯಕ್ಷರಾದ ಪದ್ಮಾವತಿ ಶೆಟ್ಟಿಯವರು ಈ ಸಭೆಗಳಲ್ಲಿ ಭಾಗವಹಿಸಿರುತ್ತಾರೆ.

ಅಂಗನವಾಡಿ ನೌಕರರ ಸಂಘಟನೆಗಳು ಸಿಐಟಿಯು ವ್ಯಾಪ್ತಿಯಲ್ಲಿ ಎಲ್ಲಾ ತಾಲೂಕುಗಳಲ್ಲಿ ಇಲ್ಲದಿದ್ದರೂ, ನಿಷ್ಕ್ರಿಯವಾಗಿದ್ದ ಕಡೆಗಳಲ್ಲಿ ಅಖಿಲ ಭಾರತ ಮುಷ್ಕರ ಕರೆಯ ಕಾರಣವಾಗಿ ಅದನ್ನು ಚುರುಕುಗೊಳಿಸಲು ಸಾಧ್ಯವಾಯಿತು. ವಲಯ ಸಮಾವೇಶಗಳು ನಡೆದಿವೆ. ಬೆಳ್ತಂಗಡಿಯಲ್ಲಿ ಸಂಘ ಪುನಶ್ಚೇತನಗೊಂಡಿದ್ದು ಮುಖಂಡರಾದ ಶಿವಕುಮಾರ್ ಅವರಿಗೆ ಮಾರ್ಗದರ್ಶನ ನೀಡಿರುತ್ತಾರೆ.

ಮಂಗಳೂರಿನ ಬೀದಿ ಬದಿ ಕಾರ್ಮಿಕರು ಬಿ.ಕೆ.ಇಮ್ತಿಯಾಜ್, ಯೋಗೀಶ್ ಜಪ್ಪಿನಮೊಗರು ಮಾರ್ಗದರ್ಶನದಲ್ಲಿ ಸಭೆ ನಡೆಸಿ ಮುಷ್ಕರವನ್ನು ಯಶಸ್ವಿಗೊಳಿಸಲು ನಿರ್ಧರಿಸಿರುತ್ತಾರೆ.

ರೈತ ಸಂಘಟನೆಗಳ ಜಂಟಿ ಪ್ರತಿಭಟನೆ:

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ರೈತ ಸಂಘಟನೆಗಳ ಸಭೆ ಸೇರಿಸಿ ಚರ್ಚಿಸಿ, ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಜನವರಿ 8, 9ರ ಮುಷ್ಕರವನ್ನು ಯಶಸ್ವಿಗೊಳಿಸಲು ಬೆಂಬಲ ನೀಡಲು ಕರೆ ನೀಡಿದ ಮೇರೆಗೆ ಜನವರಿ 3 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಧರಣಿ ನಡೆಸಿತು. ಈ ಪ್ರತಿಭಟನೆಯಲ್ಲಿ ಪ್ರಾಂತ ರೈತ ಸಂಘದೊಂದಿಗೆ ಕರ್ನಾಟಕ ರಾಜ್ಯ ರೈತ ಸಂಘ, ದ 2 ಬಣಗಳು, ಕಾಂಗ್ರೆಸ್ ಕಿಸಾನ್ ಘಟಕ ಮತ್ತು ಜನತಾದಳ ಕಿಸಾನ್ ಘಟಕ ಪಾಲ್ಗೊಂಡು ಯಶಸ್ವಿಯಾದ ಪ್ರತಿಭಟನೆ ನಡೆಸಲಾಯಿತು. ರೈತ ಸಾಲ ಸಂಪೂರ್ಣ ಮನ್ನಾ ಮಾಡಬೇಕು, ಸ್ವಾಮಿನಾಥನ್ ವರದಿ ಜಾರಿಗೊಳಿಸಬೇಕು, ರೈತರ ಸಮಸ್ಯೆಗಳ ಬಗ್ಗೆ ಪ್ರತ್ಯೇಕ ಸಂಸದಧಿವೇಶನ ಕರೆಯಬೇಕೆಂದು ಕೇಂದ್ರ ಸಮನ್ವಯ ಸಮಿತಿಯ ಬೇಡಿಕೆಯನ್ನು ಆಗ್ರಹಿಸಿದ್ದಲ್ಲದೆ, ಮೋದಿ ಸರಕಾರದ ಜನವಿರೋಧಿ ನೀತಿಗಳನ್ನು ಖಂಡಿಸಲಾಯಿತು. ಮತ್ತು ಜನವರಿ 8, 9ರ ಮುಷ್ಕರವನ್ನು ಯಶಸ್ವಿಗೊಳಿಸಲು ಕರೆ ನೀಡಲಾಯಿತು.

ಸಾಮೂಹಿಕ ಸಂಘಟನೆಗಳ ಸಿದ್ಧತೆಗಳು:

ಜನವಾದಿ ಮಹಿಳಾ ಸಂಘಟನೆಯ ದ.ಕ.ಜಿಲ್ಲಾ ಸಮಿತಿ ಸೇರಿ ಮುಷ್ಕರ ಯಶಸ್ವಿಗೊಳಿಸಲು ಕರೆ ನಿಡಿದ್ದಲ್ಲದೆ, ಮಹಿಳಾ ಸಂರಕ್ಷಣೆಯ ನೆಲೆಯಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪುಗಳನ್ನು ಜಾರಿಗೊಳಿಸಲು ಆಗ್ರಹಿಸಲಾಯಿತು. ಈ ಸಂಬಂಧ ಘಟಕಗಳೂ ಸಭೆ–ಸಮಾವೇಶ ನಡೆಸಿ ಮುಷ್ಕರದ ಮಹತ್ವವನ್ನು ವಿವರಿಸುತ್ತಿದೆ.

ಡಿವೈಎಫ್ಐ ಮತ್ತು ಎಸ್ಎಫ್ಐ ಜಂಟಿಯಾಗಿ ನಮ್ಮ ಉದ್ಯೋಗ ಎಲ್ಲಿದೆ ಎಂಬ ಕೇಳಿಕೆಯೊಂದಿಗೆ ದೆಹಲಿಯಲ್ಲಿ ಮೊಳಗಿಸಿದ ಘೋಷಣೆಯನ್ನು ಜಿಲ್ಲೆಯಲ್ಲೂ ಪ್ರತಿಧ್ವನಿಸಲು ಮುಂದಾಗಿದೆ. ಜನವರಿ 4 ರಂದು ಸಾಯಂಕಾಲ ಮಂಗಳೂರು ನಗರದಲ್ಲಿ ದೊಂದಿ ಮೆರವಣಿಗೆ ನಡೆಯಲಿದೆ. ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಕಾರ್ಯಕ್ರಮವನ್ನು ಉದ್ಘಾಟಿಸಲಿರುವರು. ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್ ಮೆರವಣಿಗೆಗೆ ನೇತೃತ್ವ ನೀಡುವರು.

ಮಳವಳ್ಳಿ: ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಶಸ್ಸಿಗೊಳಿಸಲು ಸಿಐಟಿಯು ಮತ್ತು ಹಲವು ಸಾಮೂಹಿಕ ಸಂಘಟನೆಗಳು ಮಳವಳ್ಳಿಯಲ್ಲಿ ಸಭೆ ಸೇರಿದ್ದವು. ಜನವರಿ 7ರಂದು ಸಂಜೆ 6 ಗಂಟೆ ಪಂಜಿನ ಮೆರವಣಿಗೆ, ಜನವರಿ 8ರಂದು ಮಳವಳ್ಳಿ ಬಂದ್ ಮಾಡಲು, ಜನವರಿ 9ರಂದು ಬೆಳಿಗ್ಗೆ 10 ಗಂಟೆಗೆ ಮಳವಳ್ಳಿ ಪಟ್ಟಣದ ತಾಲ್ಲೂಕು ಪಂಚಾಯಿತಿ ಆವರಣದಿಂದ ಮೆರವಣಿಗೆ ನಡೆಸಲು ನಿರ್ಧರಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಸಾರ್ವತ್ರಿಕ ಮುಷ್ಕರದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಕುಂದಾಪುರ: ಸಾರ್ವತ್ರಿಕ ಮುಷ್ಕರ ಪ್ರಚಾರ ಜಾಥ ಜನವರಿ 3ರಂದು ಕುಂದಾಪುರದ ಶಾಸ್ತ್ರಿ ಸರ್ಕಲ್ ನಲ್ಲಿ ಜೆಸಿಟಿಯು ಮುಖಂಡರಾದ ಎಚ್ ನರಸಿಂಹ ಉಧ್ಘಾಟಿಸಿದರು. ಇಂಟಕ್ ಅಧ್ಯಕ್ಷರಾದ ಲಕ್ಷಣ ಶೆಟ್ಟಿ, ಮಾಣಿ ಉದಯಕುಮಾರ್, ಸಿಐಟಿಯು ಸುರೇಶ್ ಕಲ್ಲಾಗರ, ಆಟೊರಿಕ್ಷಾ ಸಂಘಟನೆಯ ರಾಜುದೇವಾಡಿಗ, ಡಿವೈಎಫ್.ಐ. ಮುಖಂಡರಾದ ರಾಜೇಶ್ ವಡೇರಹೋಬಳಿ ಇದ್ದರು. ಕಟ್ಟಡ ಕಾರ್ಮಿಕ ಸಂಘಟನೆಯ ಮುಖಂಡರಾದ ರಮೇಶ್ ಗುಲ್ವಾಡಿ ಸ್ವಾಗತಿಸಿ ಪ್ರಸ್ತಾವನೆ ಮಾಡಿದರು. ರಮೇಶ್.ವಿ ವಂದಿಸಿದರು.

ಕುಣಿಗಲ್ ನಲ್ಲಿ ಸಂತೆ ಪ್ರಚಾರ, **ಬಾಗೇಪಲ್ಲಿ**ಯಲ್ಲಿ ಬೈಕ್ ರ್ಯಾಲಿ ಮತ್ತು **ಅತ್ತಿಬೆಲೆ** ಕೈಗಾರಿಕಾ ಪ್ರದೇಶದಲ್ಲಿ ಆಟೋ ಪ್ರಚಾರದ ಹಾಗೂ ಬೈಕ್ ರ್ಯಾಲಿ ನಡೆಸಲಾಯಿತು.


ಜೆಸಿಟಿಯು ಜಾಥಾ – ಬಿ ಸಿ ರೋಡ್


ಕುಂದಾಪುರ ಜೆಸಿಟಿಯು ಪ್ರಚಾರ


ಮಳವಳ್ಳಿ ಸಭೆ


ಕುಣಿಗಲ್ ಸಂತೆ ಪ್ರಚಾರ



ಅತ್ತಿಬೆಲೆ ಬೈಕ್ ರ್ಯಾಲಿ


ಬಾಗೇಪಲ್ಲಿ ಬೈಕ್ ರ್ಯಾಲಿ



ಕುವೆಂಪು ಹುಟ್ಟು ಹಬ್ಬದಂದು ಸಾಮೂಹಿಕ ವಿವಾಹ

ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಹಾಗೂ ಜ್ಯೋತಿ ಬಸು ಸ್ಮಾರಕ ಸಾಮಾಜಿಕ ಶಿಕ್ಷಣ ದತ್ತಿ ಇವರ ಆಶ್ರಯದಲ್ಲಿ ರಾಷ್ಟ ಕವಿ ಕುವೆಂಪು ಅವರ ಹುಟ್ಟು ಹಬ್ಬದ ಅಂಗವಾಗಿ ಡಿಸೆಂಬರ್ 29 ರಂದು ರಂದು ಹಗರಿಬೊಮ್ಮನಹಳ್ಳಿಯಲ್ಲಿ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನೆಡೆಯಿತು. ಸಾವಿರಾರು ಜನರು ಭಾಗವಹಿಸಿದ್ದರು. ಮುರುಘಾ ಮಠದ ಶಾಖಾ ಮಠ ದಾವಣಗೆರೆ ಯ ಬಸವ ಪ್ರಭು ಶರಣರು ಪ್ರತಿಜ್ಞಾ ವಚನ ಬೋಧಿಸಿದರು.



ಅತಿಥಿ ಅಂಕಣ

ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ

ಮೃಣಾಲ್ ಸೇನ್ ಹಿಂದಿಯಲ್ಲಿ ಮಾಡಿದ ಭುವನ್ ಶೋಮ್ ನಿಂದ ಹಿಡಿದು 'ಕಲ್ಕತ್ತ ತ್ರಿವಳಿ' ಎಂದು ಗುರುತಿಸುವ 'ಇಂಟರ್‌ವ್ಯೂ', 'ಕಲ್ಕತ್ತ–71' ಮತ್ತು 'ಪದಾತಿಕ್' ಚಿತ್ರಗಳಲ್ಲಿ, ಪ್ರೇಮ್‌ಚಂದ್ ಅವರ 'ಕಫನ್' (ಹೆಣದ ಬಟ್ಟೆ) ಕತೆಯನ್ನು ಆಧರಿಸಿ ತೆಲುಗಿನಲ್ಲಿ ಮಾಡಿದ 'ಒಕ ಊರಿ ಕಥ' ಚಿತ್ರದಲ್ಲೂ, ಅವರು ಚಿತ್ರಿಸುವ ಪ್ರಪಂಚ, ವರ್ಗತಾರತಮ್ಯದಲ್ಲಿ ಸಿಕ್ಕಿ ನರಳುವ, ನಲುಗುವ, ಕ್ರೋಧಗೊಳ್ಳುವ, ಪ್ರತಿಭಟಿಸುವ, ಸೋಲುವ, ಸೋತರೂ ಹಿಂದೆಗೆಯದೆ ಮುಂದೆ ಸಾಗುವ ಸಾಮಾನ್ಯ ಮನುಷ್ಯರ ಪ್ರಪಂಚ. ಸಿನೆಮಾ ಸಮಾಜವನ್ನು ಬದಲಾಯಿಸುತ್ತದೆ ಎಂಬರ್ಥದ ಗೊಡಾರ್ಡ್ ನ ಮಾತನ್ನು ಫ್ರೆಂಚ್ ಮತ್ತು ಇಟಾಲಿಯನ್ ವಾಸ್ತವವಾದದ ಪ್ರತಿಪಾದಕರಾದ ಮೃಣಾಲ್ ಸೇನ್ ಒಪ್ಪುವುದಿಲ್ಲ. ಸಿನೆಮಾ ಜನರನ್ನು ಎಚ್ಚರಿಸುತ್ತದೆ, ಸಾಮಾಜಿಕ ಬದಲಾವಣೆಗೆ ಪ್ರಚೋದಿಸುತ್ತದೆ ಎಂಬ ಅಭಿಪ್ರಾಯ ಅವರದು.

ಮೃಣಾಲ್ ಸೇನ್ : ಭಾರತೀಯ ಸಿನೆಮಾದ ಬೀದಿ ಹೋರಾಟಗಾರ

ಭಾರತೀಯ ಸಿನೆಮಾ ಎಂದಾಗಲೆಲ್ಲಾ ಮುಂಬಯಿ ಚಿತ್ರೋದ್ಯಮವು ತಯಾರಿಸಿದ ಹಿಂದಿ ಸಿನೆಮಾ ಎಂದೂ, ಉಳಿದ ಯಾವುದೇ ಭಾರತೀಯ ಭಾಷೆಯಲ್ಲಿ ಅಥವಾ ಪ್ರಾಂತ್ಯದಲ್ಲಿ ತಯಾರಾದ ಸಿನೆಮಾವನ್ನು ಪ್ರಾಂತೀಯ ಸಿನೆಮಾ ಎಂದೂ ಗುರುತಿಸುವ ತಪ್ಪು ಪರಿಪಾಠ ರೂಢಿಗೆ ಬಂದುಬಿಟ್ಟಿದೆ. ಇದರ ಹಿಂದೆ ಅಜ್ಞಾನಕ್ಕಿಂತ ಉದ್ದೇಶಪೂರ್ವಕವಾದ ಕೇಂದ್ರೀಕೃತ ಬಂಡವಾಳಶಾಹಿ ನಿಯಂತ್ರಣದ ರಾಜಕೀಯವಿದೆ. ಈ ಕಾರಣದಿಂದಲೇ ಬೆಂಗಾಲಿಯಲ್ಲಿ ಮಾತ್ರವಲ್ಲ ಹಿಂದಿ, ಒರಿಯಾ, ತೆಲುಗು ಭಾಷೆಗಳಲ್ಲಿ ಚಿತ್ರಗಳನ್ನು ಮಾಡಿದ್ದರೂ ಸಹ ಮೃಣಾಲ್ ಸೇನ್ ನಿಧನರಾದಾಗ 'ಬಹುದೊಡ್ಡ ಬೆಂಗಾಲಿ ನಿರ್ದೇಶಕರ ನಿಧನ' ಎಂದೇ ಬಹುತೇಕ ರಾಷ್ಟ್ರೀಯ ಸುದ್ದಿವಾಹಿನಿಗಳು ಬಿಂಬಿಸಿದವು.


ಯಾವುದೇ ಲೇಖಕ/ಲೇಖಕಿ, ಚಿಂತಕ/ಚಿಂತಕಿ, ಕಲಾವಿದ/ಕಲಾವಿದೆ ಮತ್ತು ಚಿತ್ರನಿರ್ದೇಶಕ/ನಿರ್ದೇಶಕಿಯರು ಭಾರತೀಯ ಎನಿಸಿಕೊಳ್ಳಬೇಕಿದ್ದರೆ ರಾಜಧಾನಿ ದೆಹಲಿಯಿಂದಲೇ ಅಥವಾ ಆಳುವ ಮತ್ತು ಸಂಪರ್ಕ ಭಾಷೆಗಳಾದ ಹಿಂದಿ/ಇಂಗ್ಲಿಷಿನ ಹಿನ್ನೆಲೆಯಿಂದಿಂದಲೇ ಬರಬೇಕೆಂದಿಲ್ಲ. ಸಾಂಸ್ಕೃತಿಕವಾಗಿ ಇಷ್ಟೊಂದು ವೈವಿಧ್ಯಮಯವಾದ, ಭೌಗೋಲಿಕವಾಗಿ ವಿಶಾಲವಾದ ಈ ಉಪಖಂಡದ ವಿವಿಧ ಪ್ರದೇಶಗಳಿಂದ, ಒಟ್ಟಿನಲ್ಲಿ ಭಾರತದ ವಿವಿಧ ಮೂಲೆಗಳಿಂದ, ಪ್ರತಿಭಾವಂತರು ತಮ್ಮ ತಮ್ಮ ಕ್ಷೇತ್ರಗಳಾದ ಸಾಹಿತ್ಯ, ಸಂಗೀತ, ಚಿತ್ರಕಲೆ, ಛಾಯಾಗ್ರಹಣ ಮತ್ತು ರಂಗಭೂಮಿಗಳ ಹಿನ್ನೆಲೆಯಿಂದ ಬಂದವರಾಗಿರುವುದು ವಾಸ್ತವ. ಇವೆಲ್ಲವನ್ನೂ ಒಳಗೊಂಡು, ತನ್ನದೇ ಆದ ಭಾಷೆ, ವ್ಯಾಕರಣ, ನುಡಿಗಟ್ಟನ್ನು ಹೊಂದಿರುವ ಸಿನೆಮಾ ವಿವಿಧ ಕ್ಷೇತ್ರಗಳ ಪ್ರತಿಭಾವಂತರನ್ನು ಸಹಜವಾಗಿ ಭಾರತೀಯರೆಂದು ಗುರುತಿಸಲು ಹೇಳಿ ಮಾಡಿಸಿದ ಸಾಂಸ್ಕೃತಿಕ ಚೌಕಟ್ಟು. ಇಂಥ ಸಿನೆಮಾ ಭಾಷೆಯಲ್ಲಿ ಭಾರತದ ಜನಸಮುದಾಯದ ಬಗ್ಗೆ ಐದು ದಶಕಗಳಿಗೂ ಮಿಕ್ಕಿದ ಜೀವನಾವಧಿಯಲ್ಲಿ ಚಿಂತಿಸುತ್ತಿದ್ದ ಮೃಣಾಲ್ ಸೇನ್ ಪೂರ್ಣಾರ್ಥದಲ್ಲಿ ಭಾರತೀಯ ಚಲನಚಿತ್ರ ಚಿಂತಕರಾಗಿ ಸ್ಮರಣಾರ್ಹರು.

ಭಾರತೀಯ ಸಿನಿಮಾ ಬಗ್ಗೆ ಮಾತನಾಡುವಾಗ ಮುಖ್ಯವಾಹಿನಿ ಸಿನೆಮಾ ಮತ್ತು ಪರ್ಯಾಯ ಸಿನೆಮಾ ಎಂದು ವಿಭಾಗಿಸಿಕೊಳ್ಳುವುದು ರೂಢಿಯಲ್ಲಿರುವ ಮತ್ತೊಂದು ಪರಿಪಾಠ. ಮೊದಲನೆಯದು ಪ್ರಧಾನವಾಗಿ ಹಿಂದಿ ಸಾಹಿತ್ಯಭಾಷೆಯನ್ನು ಸಿನೆಮಾದ ಅಂಗವನ್ನಾಗಿ ಬಳಸುವ, ಸಿನಿಮಾ ಭಾಷೆಯನ್ನು ಕೆಳಕ್ಕೆ ಹಾಕಿ ಸಾಹಿತ್ಯಭಾಷೆಯೇ ಹಾಡು–ನೃತ್ಯಗಳ ಒರಟು ರೂಪದಲ್ಲಿ ಚಿತ್ರೋದ್ಯಮದ ಸರಕಾಗಿ ಮನರಂಜನೆಯ ಮಾರುಕಟ್ಟೆಯನ್ನು ನಿರ್ಮಿಸಿಕೊಂಡಿರುವ ಸಿನೆಮಾ. ಎರಡನೆಯದು, ಅದರ ಸಾಹಿತ್ಯಭಾಷೆಯು ಪ್ರಾದೇಶಿಕವಾಗಿರಲಿ ಅಥವಾ ಆಳುವ/ಸಂಪರ್ಕದ ಮಾಧ್ಯಮವಾಗಿರಲಿ ಸಿನೆಮಾದ ಒಂದು ಅಂಗವನ್ನಾಗಿ ಮಾತ್ರ ಅದನ್ನು ಬಳಸಿಕೊಂಡು, ಕೃತಿಕಾರನ ಚಿಂತನೆಯನ್ನು ರಾಷ್ಟ್ರೀಯವಾಗಿ ಮಾತ್ರವಲ್ಲ, ಜಾಗತಿಕವಾಗಿಯೂ ಚಿತ್ರಸಹೃದಯರೊಂದಿಗೆ ಹಂಚಿಕೊಳ್ಳಲೆತ್ನಿಸುವ ಸಂವಾದಿಸಬಯಸುವ ಕಲಾಕೃತಿಯಾಗಿರುವ ಸಿನೆಮಾ.

ಈ ಅರ್ಥದಲ್ಲಿ ಮೃಣಾಲ್ ಸೇನ್ ಎರಡನೆಯ ಬಗೆಯ ಸಿನೆಮಾ ಮಾಡಿದವರು. ತಮ್ಮ 25ಕ್ಕೂ ಮಿಕ್ಕಿದ ಚಿತ್ರಗಳ ಮೂಲಕ ಭಾರತದ ಕೆಳಮಧ್ಯಮವರ್ಗದ ಜನರ ಜೀವನವನ್ನು ಸಾಂಸ್ಕೃತಿಕವಾಗಿ ಅರ್ಥೈಸಿಕೊಳ್ಳಲು, ಸಾಮಾನ್ಯ ಜನರ ಬಗ್ಗೆ ಅವರ ಅರಿವನ್ನು ಹೆಚ್ಚಿಸಿಲು ಅವರೊಂದಿಗೆ ರಾಜಕೀಯವಾಗಿ ಸಂವಾದಿಸಲು ಯತ್ನಿಸಿದರು.

ಸ್ವಾತಂತ್ರ್ಯಪೂರ್ವದ ಭಾರತದಲ್ಲಿ, ಭಾರತದ ರಾಜಕೀಯದಲ್ಲಿ ಎರಡು ಪ್ರಧಾನ ಧಾರೆಗಳಿದ್ದವು. ಗೋಖಲೆ, ತಿಲಕ್, ಗಾಂಧಿ, ಸುಭಾಸ್‌ಚಂದ್ರ ಬೋಸ್ ಮುಂದಾಳತ್ವದ, ಬ್ರಿಟಿಷರ ರಾಜಕೀಯ ಆಳ್ವಿಕೆಯಿಂದ ಬಿಡುಗಡೆ ಪಡೆಯಬೇಕೆಂಬ ರಾಷ್ಟ್ರೀಯ ಧೋರಣೆಯ ಕಾಂಗ್ರೆಸ್ ಮತ್ತು ಅದರ ಉಪಶಾಖೆಗಳ ಒಂದು ಧಾರೆ. ಭಾರತದ ಭೂಮಾಲೀಕರು, ಸಾಂಪ್ರದಾಯಿಕ ಶ್ರೀಮಂತರು ಮತ್ತು ವ್ಯಾಪಾರೋದ್ಯಮಿಗಳ ವರ್ಗ ಹಿನ್ನೆಲೆಯಲ್ಲಿ ರಾಜಕೀಯವಾಗಿ ಸ್ವತಂತ್ರವಾದ ಬಂಡವಾಳಶಾಹಿ ಆಳುವರ್ಗವಾಗಿ ಹೊಮ್ಮಲು ಬ್ರಿಟಿಷರೊಂದಿಗೆ ನಡೆಸಿದ ಹೋರಾಟ ಅದು. ಅದನ್ನು ಭಾರತದ ಸ್ವಾತಂತ್ರ್ಯಹೋರಾಟದ ಪ್ರಧಾನಧಾರೆ ಎಂದೂ ಕರೆಯಬಹುದು.

ಅದರೊಟ್ಟಿಗೆ, ಬ್ರಿಟಿಷ್ ವಸಾಹತಾಗಿ ಮಾತ್ರವಲ್ಲ ಜಾಗತಿಕ ಬಂಡವಾಳದಿಂದ ಬಿಡುಗಡೆ ಪಡೆಯಲು ಸಂಘರ್ಷದ ಮೂಲಕವೇ ಸಂಘಟನೆಗೊಳ್ಳುತ್ತಿದ್ದ ಕಮ್ಯುನಿಸ್ಟ್ ಹೋರಾಟವು ಕಾಂಗ್ರೆಸ್ ಮುಖಂಡತ್ವದ ರಾಷ್ಟ್ರೀಯ ಹೋರಾಟದ ಪರ್ಯಾಯ ಧಾರೆಯಾಗಿತ್ತು. ಇದರಲ್ಲಿ, ನಗರ–ಪಟ್ಟಣಗಳಲ್ಲಿ ಕಂಡುಬರುತ್ತಿದ್ದ ನಾಗರಿಕ ಸಂಘರ್ಷಗಳಲ್ಲದೆ ಕುಗ್ರಾಮ–ಕಾಡು–ಮೇಡುಗಳ ತೆರೆ–ಮರೆಗಳಲ್ಲಿ ತಮ್ಮದೇ ಆದ ರೂಪಗಳನ್ನು ಪಡೆದಿದ್ದ ಆದಿವಾಸಿ ಸಂಘರ್ಷಗಳೂ ಇದ್ದವು. ಉತ್ತರದ ಬಿರ್ಸಾ ಮುಂಡ, ಕೊಮರಂ ಭೀಮ ಮೊದಲಾದವರ ಮುಂದಾಳತ್ವದಲ್ಲಿ ನಡೆದ ಸಂಘರ್ಷಗಳು ಈ ಬಗೆಯವು. ಕರ್ನಾಟಕದಲ್ಲಿ ಕಮ್ಯುನಿಸ್ಟ ಪಕ್ಷದ ಸಾಂಸ್ಕೃತಿಕ ಸಂಘಟನೆ, ಇಪ್ಟಾ ವನ್ನು ಪ್ರಾರಂಭಿಸಿದ ಎಂ.ಎಸ್. ಸತ್ಯು ತಮ್ಮ ಕನ್ನೇಶ್ವರರಾಮ ಚಿತ್ರದ ಮೂಲಕ ರಾಜಕೀಯ ಬಿಡುಗಡೆಗಾಗಿ ರಾಷ್ಟ್ರೀಯವಾದಿ ಬೂರ್ಷ್ವಾವರ್ಗ ನಡೆಸಿದ ಹೋರಾಟ ಮತ್ತು ಸಂಪೂರ್ಣ ಬಿಡುಗಡೆಯ ವಾಂಛೆಹೊಂದಿದ್ದ ನ್ಯಾಯನಿಷ್ಠ ದಂಗೆಕೋರನೊಬ್ಬನ ತೊಳಲಾಟಗಳ ಮೂಲಕ ಇಂಥ ಸಂಘರ್ಷದ ಕಡೆ ಗಮನ ಸೆಳೆಯುತ್ತಾರೆ. ಪರ್ಯಾಯ ಸಿನೆಮಾದ ಮೂಲಕ ಮೃಣಾಲ್ ಸೇನ್ ಮಾಡಿದ್ದೂ ಇಂಥದೇ ಯತ್ನ. ಈ ಕಾರಣಕ್ಕಾಗಿಯೇ ಅವರು 'ಭಾರತದ ಮೊದಲ ರಾಜಕೀಯ ಸಿನೆಮಾದ ನಿರ್ದೇಶಕ' ಎಂಬ ಮೆಚ್ಚುಗೆ ಪಡೆಯುತ್ತಾರೆ. 'ಮೊದಲ' ಅಲ್ಲದಿದ್ದರೂ ರಾಜಕೀಯ ಸಿನೆಮಾ ಹಿನ್ನೆಲೆಯ ನಿರ್ದೇಶಕ ಎಂಬುದು ಸತ್ಯ. ಪಶ್ಚಿಮ ಬಂಗಾಳದ ಪ್ರತಿಭಾವಂತ ಚಿತ್ರನಿರ್ದೇಶಕ ತ್ರಿವಳಿಗಳಲ್ಲಿನ ಮೃಣಾಲ್ ಸೇನ್ ಅಲ್ಲದೆ, ರಿತ್ವಿಕ್ ಘಟಕ್ ಮತ್ತು ಸತ್ಯಜಿತ್ ರಾಯ್ ಸಹ ರಾಜಕೀಯ ಸಿನೆಮಾ ನೆಲೆಯ ನಿರ್ದೇಶಕರೇ. ಅವರ ಚಿತ್ರನಿರ್ಮಿಸುವ ಶೈಲಿಗಳಲ್ಲಿನ ವ್ಯತ್ಯಾಸಗಳಿಂದಾಗಿ ಮತ್ತು ರಾಜಕೀಯ ನಿಲುವಿನ ಕೋನಗಳಿಂದಾಗಿ ಮೂವರೂ ತಮ್ಮದೇ ಆದ ರೀತಿಗಳಲ್ಲಿ ವಿವಿಧ ಸ್ಥಾನಗಳಲ್ಲಿ ಗುರುತಿಸಲ್ಪಡುತ್ತಾರೆ.





ಮೃಗಯಾ ಫಿಲಂನ ಒಂದು ದೃಶ್ಯ


ಈ ಎರಡು ಪ್ರಧಾನ ಧಾರೆಗಳಲ್ಲದೆ ತಮ್ಮ ದರ್ಶನ–ಉದ್ದೇಶಗಳಲ್ಲಿ ವಿಭಿನ್ನವಾಗಿದ್ದ ಇನ್ನೆರಡು ದೃಷ್ಟಿಕೋನಗಳನ್ನು ಇಲ್ಲಿ ಗುರುತಿಸಬೇಕು. ಸ್ವಾತಂತ್ರ್ಯವು, ಸಮಾನತೆ ಮತ್ತು ವ್ಯಕ್ತಿ ಘನತೆಯ ಆಚೆ ಇರುವುದು ಸಾಧ್ಯವಿಲ್ಲವಾದ್ದರಿಂದ ಮೇಲ್ಜಾತಿ ಜನರ ಸಾಮಾಜಿಕ ದೌರ್ಜನ್ಯದಿಂದ ಬಿಡುಗಡೆಗೊಂಡಲ್ಲದೆ ಅಸ್ಪೃಶ್ಯರಿಗೆ ನಿಜವಾದ ಸ್ವಾತಂತ್ರ್ಯ ಸಾಧ್ಯವಿಲ್ಲ ಎಂದು ಗುರುತಿಸಿಕೊಂಡು ಪ್ರಜ್ಞಾಪೂರ್ವಕವಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಪರಿಧಿಯಲ್ಲುಳಿದ ಡಾ. ಅಂಬೇಡ್ಕರ್ ಜಾತಿ ನಿರ್ಮೂಲನೆಯನ್ನು ತಮ್ಮ ಸಂಘರ್ಷದ ಕೇಂದ್ರಬಿಂದುವಾಗಿಸಿಕೊಂಡರು. ಇದರ ಇನ್ನೊಂದು ಕೊನೆಯಲ್ಲಿ ಬ್ರಾಹ್ಮಣಜಾತಿಯ ಶಾಸ್ತ್ರಾಧಾರಿತ ಉತ್ತಮಿಕೆ ಮತ್ತು ಸನಾತನ ಜ್ಞಾನವನ್ನು ಮೇಲುವರ್ಗದ ಶ್ರೀಮಂತಿಕೆ ಮತ್ತು ಕ್ಷಾತ್ರಗುಣದೊಂದಿಗೆ ಮೇಳೈಸಿ ಸಂಘಟಿಸುವ ಆಳುವವರ್ಗವು ಭಾರತವನ್ನಷ್ಟೇ ಅಲ್ಲ ವಿಶ್ವವನ್ನೇ ಆಳುವ ಶಕ್ತಿ ಪಡೆದಿದೆಯೆಂದು ನಂಬುವ ರಾಷ್ಟ್ರೀಯ ಸೇವಾ ಸಂಘವು ತನ್ನ ಛಾಯಾ ಸಂಘಟನೆಗಳೊಂದಿಗೆ ಸ್ವಾತಂತ್ರ್ಯ ಹೋರಾಟದ ಮುಖ್ಯ ವಾಹಿನಿಗಳಿಂದ ಪ್ರತ್ಯೇಕವಾಗುಳಿಯಿತು. ನಾಝಿ ಜರ್ಮನಿಯ ಜನಾಂಗ ದ್ವೇಷವನ್ನು ಮತ್ತು ಚಿಂತನೆ–ಆದರ್ಶಗಳನ್ನು, ಮುಸೋಲಿನಿಯ ರಾಷ್ಟ್ರೀಯತೆಯನ್ನು ತನ್ನದಾಗಿಸಿಕೊಂಡಿತು. ಮೃಣಾಲ್ ಸೇನ್, ರಿತ್ವಿಕ್ ಘಟಕ್ ಮತ್ತು ಸತ್ಯಜಿತ್ ರಾಯ್ ತಮ್ಮ ಚಿತ್ರಗಳಲ್ಲಿ ಭಾರತದ ರಾಜಕೀಯ ಸಂಘರ್ಷಗಳ ಈ ಎರಡು ಪರಸ್ಪರ ವಿರುದ್ಧವಾದ ಉಪಧಾರೆಗಳನ್ನು ಲಕ್ಷಿಸಿದಂತೆ ತೋರುವುದಿಲ್ಲ. ಅವನ್ನು ನಿರ್ಲಕ್ಷಿಸಿದರು ಎನ್ನುವುದಕ್ಕಿಂತ ಭಾರತದ ರಾಜಕೀಯವನ್ನು ವರ್ಗಸಂಘರ್ಷದ ದೊಡ್ಡ ಚೌಕಟ್ಟಿನಲ್ಲಿ ನೋಡಿದರು ಎನ್ನುವುದು ಸೂಕ್ತ.

ಫ್ರಾನ್ಜ್ ಆಸ್ಟೆನ್ನರ 'ಅಚೂತ್‌ಕನ್ಯೆ'ಯಂಥ ಹಿಂದಿ ಚಿತ್ರದಲ್ಲಿ, 'ಚಂಡಿದಾಸ್'ನಂಥ ಬೆಂಗಾಲಿ ಚಿತ್ರದಲ್ಲಿ ಸಿಗುವ ಜಾತಿಮೂಲದ ಅಸ್ಪೃಶ್ಯತೆಯ–ನೋವು–ಅವಮಾನಗಳು ಸಂಗೀತದ ಹಿನ್ನೆಲೆಯಲ್ಲಿ, ರಾಯ್ ಅವರ 'ಅಪು ತ್ರಿವಳಿ'ಯಲ್ಲಿನ ವರ್ಗಮೂಲದ ತೀವ್ರ ದಾರಿದ್ರ್ಯದ ನೋವು–ಅವಮಾನಗಳು ಸುಂದರ ಚಿತ್ರಿಕೆಗಳ ಮೂಲಕ ಬಿಂಬಿತಗೊಳ್ಳುತ್ತವೆ. ಮೃಣಾಲ್ ಸೇನ್‌ರ ಕಲ್ಕತ್ತ–71 ಚಿತ್ರದಲ್ಲಿ ನಡುರಾತ್ರಿಯಲ್ಲಿ ಧಾರಾಕಾರವಾಗಿ ಬೀಳುವ ಮಳೆಯಿಂದಾಗಿ ಎಲ್ಲೆಲ್ಲೂ ಸೋರುವ ಗುಡಿಸಿಲಿನ ಬಡವರ ಬವಣೆ, ರೈಲಿನ ಚಕ್ರಕ್ಕೆ ಅಂಟಿಕುಳಿತು ಪ್ರಾಣವನ್ನು ಪಣವಿಟ್ಟು ಅಕ್ಕಿ ಸ್ಮಗಲ್ ಮಾಡುವ ಎಳೆಯಹುಡುಗರ ಆರ್ಥಿಕ ಹಿನ್ನೆಲೆಯಾಗಿ ಬಡತನ ಚಿತ್ರಿತವಾಗುತ್ತದೆ.

ಸ್ವಾತಂತ್ರ್ಯ ಹೋರಾಟವಿರಲಿ ಅಥವಾ ಅಧಿಕಾರ ಕೇಂದ್ರಗಳಿಗಾಗಿ ನಡೆಯುವ ಚುನಾವಣೆಗಳಿರಲಿ, ಜನಸಮುದಾಯದ ಪಾತ್ರವು ಆ ಹೋರಾಟದ ಅಥವಾ ಅಧಿಕಾರದ ಗುಣಮಟ್ಟವನ್ನು, ಸಾಫಲ್ಯವನ್ನು ನಿರ್ಧರಿಸುತ್ತದೆ. ಜನಸಮುದಾಯದ ಮತಗಳಲ್ಲಿ ಸುಪ್ತವಾಗಿರುವ ರಾಜ್ಯಾಧಿಕಾರವನ್ನು ಪಡೆಯುವಾಗ ಸಾಮಾನ್ಯಜನರು, ಸಂಖ್ಯೆಯಲ್ಲೂ, ಸುಪ್ತ ಅಧಿಕಾರದಲ್ಲೂ ಮುಖ್ಯರಾಗುತ್ತಾರೆ. ಸಂಖ್ಯೆಯಲ್ಲಿ ಅಲ್ಪರಾದ ಮೇಲುವರ್ಗ ಮತ್ತು ಜಾತಿಗಳವರು ತಾತ್ಕಾಲಿಕವಾಗಿ ತಗ್ಗಿ ನಡೆಯುತ್ತಾರೆ. ರಾಜ್ಯಾಧಿಕಾರವನ್ನು ಪಡೆದ ಮೇಲೆ ಆಳುವ ವರ್ಗವು ಮುಖ್ಯವಾಗುತ್ತದೆ. ಅಧಿಕಾರಸ್ಥರು ಅಧಿಕಾರಬಲದಿಂದ ಜನಸಾಮಾನ್ಯರ ಕೈಗೆಟುಕದಂತಾಗುತ್ತಾರೆ. ಜನರು ತಾವೇ ಕೊಟ್ಟ ಮತಗಳಿಂದಾಗಿ ಕುಬ್ಜರೂ ಬಲವಿಲ್ಲದವರೂ ಆಗುತ್ತಾರೆ. ವರ್ಗಸಮಾನತೆಗಾಗಿ ನಡೆಯುವ ಸಂಘರ್ಷಗಳಲ್ಲಿ ಅಧಿಕಾರ ಕೇಂದ್ರವು ನಿರ್ದೇಶಿಸುವ ದೌರ್ಜನ್ಯ–ಹಿಂಸೆಗಳ ಬಲಿಪಶುಗಳಾಗುತ್ತಾರೆ. ನ್ಯಾಯದ ಪರಿಕಲ್ಪನೆಯನ್ನು ಆಳುವವರ್ಗದವರೇ ನಿರ್ವಚಿಸುವುದರಿಂದ ಆ ಚೌಕಟ್ಟಿನಲ್ಲಿ ನ್ಯಾಯವನ್ನು ನಿಷ್ಕರ್ಷಿಸುವ ನ್ಯಾಯಾಧೀಶರು ಯಾರೋ ಆಡಿಸುವ ಸೂತ್ರದ ಬೊಂಬೆಗಳಂತೆ ಅಸಹಾಯಕರೂ, ಅಸ್ವತಂತ್ರರಾಗಿರುತ್ತಾರೆ.

ವರ್ಗತಾರತಮ್ಯದ ಅಡಿಪಾಯ ಹೊಂದಿದ

ಪುಟ 15 ಕ್ಕೆ



ಕಲ್ಕತ್ತಾ – 71 ಫಿಲಂನ ಒಂದು ದೃಶ್ಯ

ಓಳು ಬರೀ ಓಳು, ಸುಳ್ಳು ಬರೀ ಸುಳ್ಳು...

ಪ್ರಧಾನಿ ಮೋದಿ ಬಿಚ್ಚಿಟ್ಟಿದ್ದಕ್ಕಿಂತ ಬಚ್ಚಿಟ್ಟಿದ್ದೇ ಹೆಚ್ಚು

ಪುಟ 3 ರಿಂದ

ಲೂಟಿಯಾದ ಬಗ್ಗೆ ಪ್ರಧಾನಿ ಒಂದು ಮಾತನ್ನೂ ಆಡಿಲ್ಲ. 2014–2019ರ ನಡುವೆ ಕಾರ್ಪೊರೇಟ್ ವಲಯದವರು ಪಡೆದ ಸಾಲ ನಾಲ್ಕು ಪಟ್ಟು ಹೆಚ್ಚಿದೆ. ಸಾಲವನ್ನು ಮರುಪಾವತಿಸದೆ ದೇಶದಿಂದ ಓಡಿ ಹೋದವರನ್ನು ವಾಪಸ್ ಕರೆ ತರುವುದಾಗಿ ಪ್ರಧಾನಿ ಭರವಸೆ ನೀಡಿದ್ದರು. ಆದರೆ ಇದುವರೆಗೆ ಅಂಥವರಲ್ಲಿ ಒಬ್ಬರನ್ನೂ ಕರೆತಂದಿಲ್ಲ. ಅವರ ಆಸ್ತಿಪಾಸ್ತಿ ಮುಟ್ಟುಗೋಲು ಹಾಕಿ ಅಂಥ ಕಾರ್ಪೊರೇಟ್‌ಗಳ ಸಾಲವನ್ನು ವಸೂಲಿ ಮಾಡುವ ಬದಲು ಇಂಥ ಕಾರ್ಪೊರೇಟ್ ಸಾಲಗಳನ್ನು ಬಿಜೆಪಿ ಸರಕಾರ ನಿರಂತರವಾಗಿ ಮನ್ನಾ ಮಾಡುತ್ತಿದೆ. ಅಷ್ಟು ಸಾಲದೆಂಬಂತೆ, ಈ ರೀತಿಯ ಸಾಲ ಪಡೆದು ಮರುಪಾವತಿಸದ ಕಂಪೆನಿಗಳನ್ನು ಬಹಿರಂಗ ಹರಾಜು ಮೂಲಕ ಹೆಚ್ಚು ಬಿಡ್ ಮಾಡಿದವರಿಗೆ ವಹಿಸಿಕೊಡಲು ಮುಂದಾಗುತ್ತಿದೆ. ಸರಕಾರಿ ರಂಗದ ಬ್ಯಾಂಕ್‌ಗಳನ್ನು 'ಹೇರ್ ಕಟ್' ನೀತಿ ಎಂದು ಹೇಳಲಾಗುವ ಈ ಕ್ರಮವನ್ನು ಅನುಸರಿಸಲು ಬಲವಂತ ಮಾಡಲಾಗುತ್ತಿದೆ. ಯಾವ ಬ್ಯಾಂಕ್‌ಗಳಿಗೆ ಅಡವಿಡಲಾಗಿದೆಯೋ ಅವುಗಳಿಂದ ಅಡಮಾನವಾದ ಕಂಪೆನಿಗಳ ಒಟ್ಟು ಆಸ್ತಿಯ ಇಪ್ಪತ್ತು ಶೇಕಡಾ ಅಥವಾ ಅದಕ್ಕಿಂತ ಕಡಿಮೆ ಮೊತ್ತ ಪಾವತಿಸಿ ಆ ಕಂಪೆನಿಗಳನ್ನು ಕಾರ್ಪೊರೇಟ್‌ಗಳು ವಶಕ್ಕೆ ಪಡೆಯುತ್ತವೆ. ಇಷ್ಟು ಕಡಿಮೆ ಮೊತ್ತದಲ್ಲಿ ಇಂಥ ಆಸ್ತಿಪಾಸ್ತಿ ಖರೀದಿಸುವ ಆ ಕಾರ್ಪೊರೇಟ್ ಕಂಪೆನಿಗಳಾದರೂ ಯಾವುವು?. ಪ್ರಧಾನಿ ಮತ್ತು ಅವರ ಸರಕಾರದ ಚಮಚಾಗಳು ಇಂಥ 'ಹೇರ್ ಕಟ್' ನೀತಿಯ ಪ್ರಧಾನ ಫಲಾನುಭವಿಗಳಾಗಿದ್ದಾರೆ.

ಈ ರೀತಿಯಾಗಿ ಬೇಕಾಬಿಟ್ಟಿಯಾಗಿ ಸಾಲ ನೀಡಿದ್ದ ಬ್ಯಾಂಕ್‌ಗಳು ಈಗ ಬಿಕ್ಕಟ್ಟಿನಲ್ಲಿವೆ. ಈ ಬ್ಯಾಂಕ್‌ಗಳಿಗೆ ಬಂಡವಾಳ ಮರುಪೂರಣ ಮಾಡಲಿಕ್ಕಾಗಿ ಸಾರ್ವಜನಿಕ ಹಣವನ್ನು ಅವುಗಳಿಗೆ ನೀಡಲಾಗುತಿದೆ. ಇದು ಸಾರ್ವಜನಿಕ ಹಣದ ಹಗಲು ದರೋಡೆಯಲ್ಲದೆ ಬೇರೇನೂ ಅಲ್ಲ. ಮೊದಲಿಗೆ ಇಂಥ ಸಾಲಗಳನ್ನು ಮಂಜೂರು ಮಾಡುವ ಮೂಲಕ ಕೋಟ್ಯಂತರ ಭಾರತೀಯರ ಠೇವಣಿಗಳನ್ನು ಲೂಟಿ ಮಾಡಲಾಯಿತು. ಆನಂತರ, ಸಾಲ ಮರುಪಾವತಿಯಾಗದೆ ಬ್ಯಾಂಕ್‌ಗಳು ಎದುರಿಸುವ ಬಿಕ್ಕಟ್ಟನ್ನು ಪರಿಹರಿಸಲು ಮತ್ತೆ ಸಾರ್ವಜನಿಕ ಹಣವನ್ನು ಲೂಟಿ ಮಾಡಲಾಯಿತು, ಬ್ಯಾಂಕ್‌ಗಳಿಗೆ ಹಣ ಮರುಪೂರಣ ಮಾಡಲಿಕ್ಕಾಗಿ.

ರಫೇಲ್ ಹಗರಣ

ವಿವಾದಾತ್ಮಕ ರಫೇಲ್ ವ್ಯವಹಾರವನ್ನು ಸಮರ್ಥಿಸಿಕೊಂಡ ಪ್ರಧಾನಿ, ಈ ವ್ಯವಹಾರಕ್ಕೆ ಸುಪ್ರೀಂ ಕೋರ್ಟ್ ಸಮ್ಮತಿ ಕೊಟ್ಟಿದೆ, ಹೀಗಾಗಿ ಇದರಲ್ಲಿ ಭ್ರಷ್ಟಾಚಾರ ಅಥವಾ ಹಗರಣ ಇರುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು. ಇದೊಂದು ಸ್ವಚ್ಛ ವ್ಯವಹಾರವಾಗಿದ್ದು, ಯಾರಿಗಾದರೂ ಕಮಿಷನ್ ಹಣ ನೀಡಲಾಗಿದೆ ಎಂಬುದರ ಬಗ್ಗೆ ಹಣದ ಹರಿವಿನ ದಾಖಲೆ ಯಾವುದು ಇಲ್ಲ ಎಂದರು. ಆದರೆ ಯಾರಿಗಾದರೂ ಹಣ ನೀಡಲಾಯಿತೆ ಎನ್ನುವುದನ್ನು ಇನ್ನೆಂದೂ ಪತ್ತೆ ಹಚ್ಚಲು ಈಗ ಸಾಧ್ಯವಿಲ್ಲವಾಗಿದೆ ಎಂಬುದು ನಿಜ. ಯಾಕೆಂದರೆ ಪ್ರಧಾನಿ ಮತ್ತು ಅವರ ಸರಕಾರ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವುದಕ್ಕೆ ಸಂಬಂಧಿಸಿದ ಕಾನೂನುಗಳನ್ನು ತಿದ್ದುಪಡಿ ಮಾಡಿದೆ ಹಾಗೂ ಚುನಾವಣಾ ಬಾಂಡ್‌ಗಳ ಬಳಕೆಯನ್ನು ಆರಂಭಿಸಿದೆ. ಬ್ಯಾಂಕ್‌ಗಳಿಂದ ಯಾರು ಕೂಡ ಈ ಬಾಂಡ್‌ಗಳನ್ನು ಖರೀದಿಸಬಹುದಾಗಿದೆ ಹಾಗೂ ಯಾವುದೇ ರಾಜಕೀಯ ಪಕ್ಷಕ್ಕೆ ಕೊಡಬಹುದಾಗಿದೆ. ಆ ಪಕ್ಷ ಅದನ್ನು ನಗದೀಕರಿಸಕೊಳ್ಳಬಹುದು. ಆ ಬಗ್ಗೆ ಯಾವುದೇ ಪ್ರಶ್ನೆಗಳನ್ನು ಕೇಳಲಾಗುವುದಿಲ್ಲ ಹಾಗೂ ಯಾವುದೇ ಉತ್ತರವನ್ನೂ ಕೊಡಬೇಕಿಲ್ಲ. ಈ ರೀತಿಯಾಗಿ ಪ್ರಧಾನಿ ಮತ್ತು ಬಿಜೆಪಿ ಸರಕಾರ ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಿದೆ. ಬಿಜೆಪಿಯೇ ಈ ದೊಡ್ಡ ಹಗರಣದ ಪ್ರಮುಖ ಫಲಾನುಭವಿ ಎನ್ನುವುದು ಬ್ಯಾಂಕ್‌ಗಳು ಬಿಡುಗಡೆ ಮಾಡಿದ 222 ಕೋಟಿ ರೂಪಾಯಿಗಳ ಚುನಾವಣೆ ಬಾಂಡ್‌ಗಳ ಮೊದಲ ಕಂತಿನ ಪೈಕಿ 210 ಕೋಟಿ ರೂಪಾಯಿ, ಅಂದರೆ 94.5 ಶೇಕಡಾದಷ್ಟು ಬಿಜೆಪಿಗೆ ಸೇರಿತ್ತು ಅಂದಾಗಲೇ ಗೊತ್ತಾಗಿತ್ತು.

ಹಾಗಾದರೆ ರಫೇಲ್ ವ್ಯವಹಾರ ಪಾರದರ್ಶಕವಾದುದು ಎನ್ನುವುದೇ ಆದಲ್ಲಿ ಈ ಬಗ್ಗೆ ತನಿಖೆ ನಡೆಸಲು ಜಂಟಿ ಸಂಸದೀಯ ಸಮಿತಿಯನ್ನು (ಜೆಪಿಸಿ) ರಚಿಸಬೇಕೆಂಬ ಬೇಡಿಕೆಯನ್ನು ಪ್ರಧಾನಿ ತಿರಸ್ಕರಿಸುತ್ತಿರುವುದು ಯಾಕೆ? ಪ್ರಧಾನಿಯವರಿಗೆ ಅಷ್ಟು ಭರವಸೆಯಿದ್ದರೆ, ಜೆಪಿಸಿ ತನಿಖೆ ನಡೆಸಿ ಈ ವ್ಯವಹಾರ ಪಾರದರ್ಶಕವಾಗಿದೆ ಎಂದು ರುಜುವಾತು ಮಾಡಿದರೆ ಒಳ್ಳೆಯದೇ ಅಲ್ಲವೇ? ಈ ಬೇಡಿಕೆಯನ್ನು ಬಿಜೆಪಿ ಖಡಾಖಂಡಿತವಾಗಿ ವಿರೋಧಿಸುತ್ತಿರುವುದರಿಂದ ಅದು ಸಂಸತ್ತಿನಿಂದ ಹಾಗೂ ದೇಶದ ಜನತೆಯಿಂದ ಏನನ್ನೋ ಮುಚ್ಚಿಡುತ್ತಿದೆ ಎಂದೇ ಅರ್ಥ.

ಭಾರತೀಯ ರಿಸರ್ವ್ ಬ್ಯಾಂಕ್

ಆರ್‌ಬಿಐ ಗವರ್ನರ್ ಊರ್ಜಿತ್ ಪಟೇಲ್ ನಿಜವಾಗಿಯೂ ರಾಜಿನಾಮೆ ಸಲ್ಲಿಸುವುದಕ್ಕೂ ಆರರಿಂದ ಏಳು ತಿಂಗಳ ಮುಂಚೆಯೇ ಆ ಬಗ್ಗೆ ಇಂಗಿತ ವ್ಯಕ್ತಪಡಿಸಿದ್ದರು ಎಂದು ಪ್ರಧಾನಿ ಬಹಿರಂಗ ಪಡಿಸಿದ್ದಾರೆ. ಹಿಂದಿನ ಗವರ್ನರ್ ರಘುರಾಮ ರಾಜನ್‌ರನ್ನು ತೆಗೆದು ಹಾಕಿದ ನಂತರ ಪ್ರಧಾನಿಯವರ ಆಯ್ಕೆಯೇ ಆಗಿದ್ದ ಹೊಸ ಗವರ್ನರ್‌ಗೆ ಈ ಸರಕಾರದ ಕಾರ್ಯವೈಖರಿಯೊಂದಿಗೆ ಏಗಲು ಆಗಲಿಲ್ಲ. ಯಾಕೆಂದರೆ ಅದು ಆರ್‌ಬಿಐನ ಸ್ವಾತಂತ್ರ್ಯ ಮತ್ತು ಸ್ವಾಯತ್ತೆಯನ್ನು ಹಾಗೂ ಪ್ರಧಾನ ಆರ್ಥಿಕ ನಿಬಂಧಕನ ಪಾತ್ರವನ್ನು ಬುಡಮೇಲು ಮಾಡುತ್ತಿತ್ತು ಎನ್ನುವುದನ್ನು ಇದು ದೃಢಪಡಿಸುತ್ತದೆ.

ಭಾರಿ ಪ್ರಮಾಣದ ಹಣವನ್ನು ವಾಪಸ್ ಪಡೆಯಲು ಆರ್‌ಬಿಐನ ಕೇಂದ್ರೀಯ ಮೀಸಲು ನಿಧಿಯನ್ನು (ರಿಸರ್ವ್ ಫಂಡ್) ಪ್ರಧಾನಿ ಮತ್ತು ಸರಕಾರ ಗುರಿ ಮಾಡಿಕೊಂಡಿತ್ತು. ಕುಸಿಯುತ್ತಿರುವ ತೆರಿಗೆ ಆದಾಯವನ್ನು ಸರಿದೂಗಿಸಲಿಕ್ಕಾಗಿ ಇದು ಅಗತ್ಯ ಎನ್ನುವುದು ಸರಕಾರದ ವಾದ. ಜಿ.ಎಸ್.ಟಿ.ಯ ನಂತರ, ವಾರ್ಷಿಕ ಬಜೆಟಿನ ಹಣಕಾಸು ಕೊರತೆಯ ಗುರಿ ಈ ಹಣಕಾಸು ವರ್ಷದ ಮೊದಲ ಏಳು ತಿಂಗಳಲ್ಲೇ ಮೀರಿ ಹೋಗಿತ್ತು. ಎರಡನೆಯದಾಗಿ, ಬ್ಯಾಂಕ್‌ಗಳ ಪೂರ್ಣ ಮರುಬಂಡವಾಳಕ್ಕೆ ಹೆಚ್ಚು ಹಣ ಬೇಕು. ಈ ಎರಡೂ ಕಾರಣಗಳಿಗಾಗಿ ಆರ್‌ಬಿಐನ ಮೀಸಲು ನಿಧಿಯ ಅತಿಕ್ರಮಣ ಮಾಡಲು ಸರಕಾರ ಉದ್ದೇಶಿಸಿತ್ತು. ಇದರಿಂದ ಆರ್ಥಿಕತೆಯ ನಿಬಂಧಕ ಸಂಸ್ಥೆ ಅಸ್ಥಿರಗೊಂಡು ನಮ್ಮ ಆರ್ಥಿಕತೆಯ ಮೂಲಭೂತ ಅಂಶಗಳ ಮೇಲೆಯೇ ಪರಿಣಾಮ ಉಂಟಾಗುತ್ತಿತ್ತು. ಇದು ಹಣಕಾಸು ಮಾರುಕಟ್ಟೆಗಳ ಮೇಲೆ ಗಂಭೀರ ಪರಿಣಾಮಗಳನ್ನು ಬೀರಿ ದೇಶದಲ್ಲಿ ಹೊಸದೊಂದು ಹಣಕಾಸು ಹಾಗೂ ಆರ್ಥಿಕ ಬಿಕ್ಕಟ್ಟಿನ ಅಲೆಗೆ ಕಾರಣವಾಗಬಹುದಾಗಿದೆ.

ಕೋಮುವಾದದ ಧ್ರುವೀಕರಣ

ಅಯೋಧ್ಯೆಯ ವಿವಾದಿತ ಜಾಗದಲ್ಲಿ ರಾಮ ಮಂದಿರ ನಿರ್ಮಿಸುವ ವಿಚಾರದಲ್ಲಿ ಪ್ರಧಾನಿಯವರು ಅತಿ ಕುಟಿಲ ಹೇಳಿಕೆ ನೀಡಿದ್ದಾರೆ. ಈಗ ನಡೆಯುತ್ತಿರುವ ವ್ಯಾಜ್ಯದ ಸಂಬಂಧ ಸುಪ್ರೀಂ ಕೋರ್ಟ್ ತೀರ್ಪು ಬಂದ ನಂತರವಷ್ಟೆ, ಮಂದಿರ ನಿರ್ಮಾಣದ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಬೇಕೋ ಅಥವಾ ಕಾನೂನು ರಚಿಸಬೇಕೋ ಎಂಬ ಕಾನೂನಾತ್ಮಕ ಕ್ರಮವನ್ನು ಸರಕಾರ ಪರಿಶೀಲಿಸಲಿದೆ ಎಂದು ಅವರು ಹೇಳಿದ್ದಾರೆ. ಇದು ನ್ಯಾಯಾಲಯದ ಮೇಲೆ ಒತ್ತಡ ಹೇರುವುದಕ್ಕೆ ಸಮನಾಗುತ್ತದೆ. ಒಂದು ವೇಳೆ ಪ್ರತಿಕೂಲ ತೀರ್ಪು ಬಂದರೆ ಅದನ್ನು ನಿರರ್ಥಕಗೊಳಿಸಲು ಸರಕಾರ ಕಾನೂನಾತ್ಮಕ ಉಪಕ್ರಮಗಳಿಗೆ ಮುಂದಾಗುತ್ತದೆ. ನ್ಯಾಯಾಲಯದ ತೀರ್ಪಿಗೆ ಸರಕಾರ ಬದ್ಧವಾಗಿರುತ್ತದೆ ಎಂದು ಮಾತ್ರ ಪ್ರಧಾನಿ ಹೇಳಲೇ ಇಲ್ಲ. ನ್ಯಾಯಾಲಯದ ತೀರ್ಪು ಏನೇ ಇದ್ದರೂ ಮಂದಿರವನ್ನು ನಿರ್ಮಿಸಲಾಗುವುದು ಎನ್ನುವುದು ಅವರ ಮಾತಿನ ಅರ್ಥವಾಗಿದೆ.

ಇದು ಒಟ್ಟಾರೆಯಾಗಿ ಚುನಾವಣೆಗಳ ಸಂದರ್ಭದಲ್ಲಿ ಒಟ್ಟಾರೆ ಕೋಮು ಧ್ರುವೀಕರಣದ ಪ್ರಯತ್ನಗಳಿಗೆ ಇಂಬು ನೀಡುತ್ತದೆ. ಇದು ಹಿಂದೂತ್ವ ಕೋಮುವಾದಿ ಮತ ಬ್ಯಾಂಕನ್ನು ಕ್ರೋಢೀಕರಿಸುವ ಸರಕಾರದ ಮುಖ್ಯ ಪ್ರಯತ್ನವಾಗಿದೆ.

ಜನಜಂಗುಳಿ ಹತ್ಯೆ (mob lynching)ಗಳಿಗೆ ಸಂಬಂಧಿಸಿ ಪ್ರಧಾನಿ ಮಾಡಿದ ಟಿಪ್ಪಣಿಗಳು ಇದನ್ನು ಇನ್ನಷ್ಟು ಪುಷ್ಟೀಕರಿಸುತ್ತವೆ. ಮೌಖಿಕವಾಗಿ ಅಂಥ ಘಟನೆಗಳನ್ನು ಪ್ರಧಾನಿ ಖಂಡಿಸಿದ್ದರೂ, ವಿಶೇಷವಾಗಿ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಯಂತ್ರ ಯಾಕೆ ಇಂಥ ಕೃತ್ಯಗಳಲ್ಲಿ ಭಾಗವಹಿಸಿದವರನ್ನು ಬಂಧಿಸುತ್ತಿಲ್ಲ ಅಥವಾ ಕಾನೂನುಗಳನ್ನು ಯಾವುದೇ ಅಡೆತಡೆಗಳಿಲ್ಲದೆ ಉಲ್ಲಂಘಿಸುವವರ ವಿರುದ್ಧ ಕ್ರಮಗಳನ್ನು ಕೈಗೊಳ್ಳುತಿಲ್ಲ ಎಂಬ ಬಗ್ಗೆ ಪ್ರಧಾನಿ ಪೂರ್ಣ ಮೌನಕ್ಕೆ ಮೊರೆ ಹೋಗಿದ್ದಾರೆ. ಕೆಲವು ರಾಜ್ಯಗಳಲ್ಲಿ ಬಿಜೆಪಿ ಅನುಮೋದನೆ ಹಾಗೂ ಪೋಷಣೆಯೊಂದಿಗೆ ಗೋ ರಕ್ಷಣೆ ಅಥವಾ ನೈತಿಕ ಪೊಲೀಸ್‌ಗಿರಿಯ ಹೆಸರಿನಲ್ಲಿ ಖಾಸಗಿ ಸೇನೆಗಳು ತಲೆ ಎತ್ತಿವೆ. ಖಾಸಗಿ ಸೇನೆಗಳು ಒಂದಲ್ಲ ಒಂದು ನೆಪವೊಡ್ಡಿ ಮುಸ್ಲಿಮರು ಅಥವಾ ದಲಿತರನ್ನು ಕೊಲ್ಲುತ್ತಿರುವ ಬಗ್ಗೆ ಪ್ರಧಾನಿ ಒಂದು ಮಾತನ್ನೂ ಆಡಿಲ್ಲ. ಗುಂಪುಗಳು ಕೊಚ್ಚಿ ಕೊಲೆ ಮಾಡುವುದಕ್ಕೆ ಕಾರಣವಾಗುವ ದ್ವೇಷ ಹರಡುವ ಹಾಗೂ ಹಿಂಸೆಯ ಈ ವಾತಾವರಣದ ಬಗ್ಗೆ ಅವರೂ ಏನನ್ನೂ ಹೇಳಿಲ್ಲ.



ವ್ಯಂಗ್ಯ ಚಿತ್ರ ಕೃಪೆ: ಸತೀಶ್ ಆಚಾರ್ಯ

ಮಹಿಳೆಯರ ಮೇಲೆ ದೌರ್ಜನ್ಯಗಳು, ಮಕ್ಕಳ ಮೇಲೆ ಬರ್ಬರ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಗಳ ಬಗ್ಗೆ ಪ್ರಧಾನಿಯವರಿಂದ ಒಂದು ಮಾತೂ ಇಲ್ಲ. ಮುಸ್ಲಿಮರು, ದಲಿತರು ಮತ್ತು ಮಹಿಳೆಯರ ಮೇಲಿನ ಇಂಥ ದಾಳಿಗಳ ಆರೋಪಿಗಳ ಮೇಲಿನ ಮೊಕದ್ದಮೆಗಳನ್ನು ಬಿಜೆಪಿ ಸರಕಾರಗಳು ಯಾಕೆ ವಾಪಸ್ ಪಡೆದವು ಎಂಬ ಬಗ್ಗೆಯೂ ಪ್ರಧಾನಿಯವರಿಂದ ಚಕಾರವಿಲ್ಲ. ಆ ದೌರ್ಜನ್ಯಗಳ ಸಂತ್ರಸ್ತರನ್ನು ಅವರ ಮೇಲೆ ಹೂಡಲಾದ ಮೊಕದ್ದಮೆಗಳ ಮೂಲಕ ಏಕೆ ಬೇಟೆಯಾಡಲಾಗುತ್ತಿದೆ ಎಂಬುದರ ಬಗೆಗೂ ಮೌನವೇ.

ತ್ರಿವಳಿ ತಲಾಖ್ ಮತ್ತು ಶಬರಿಮಲೆ

ಸಂಸತ್ತಿನಲ್ಲಿ ಮಂಡಿಸಿದ ತ್ರಿವಳಿ ತಲಾಖ್ ಮಸೂದೆ ಲಿಂಗ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ವಿಚಾರವಾಗಿದೆ ಹಾಗೂ ಮುಸ್ಲಿಂ ಮಹಿಳೆಯರಿಗೆ ಸಮಾನತೆಯ ಸಾಂವಿಧಾನಿಕ ಹಕ್ಕನ್ನು ನೀಡಲು ತನ್ನ ಸರಕಾರ ಕ್ರಮಕೈಗೊಳ್ಳುತ್ತಿದೆ ಎಂದು ಪ್ರಧಾನಿ ಹೇಳಿಕೊಂಡಿದ್ದಾರೆ. ಆದರೆ ಶಬರಿಮಲೆ ದೇವಸ್ಥಾನ ವಿಚಾರವಾಗಿ ಇದೇ ಲಿಂಗ ಸಮಾನತೆ ವಿಷಯವನ್ನು ಎತ್ತಿದಾಗ ಅವುಗಳು ನಂಬಿಕೆಯ ವಿಚಾರಗಳು ಎಂದು ಪ್ರತಿಪಾದಿಸಿದರು. ಈ ಮೂಲಕ ಅವರು, ಮಹಿಳೆಯರ ಸಮಾನತೆಯ ಮೂಲಭೂತ ಹಕ್ಕಿಗೆ ಅನುಗುಣವಾಗಿ ಈ ವರೆಗೆ ನಿರಾಕರಿಸಲಾಗಿದ್ದ ಶಬರಿಮಲೆ ದೇವಸ್ಥಾನಕ್ಕೆ ಪ್ರವೇಶವನ್ನು ಅವರಿಗೆ ನೀಡಬೇಕೆಂಬ ಸುಪ್ರೀಂ ಕೋರ್ಟ್‌ನ ತೀರ್ಪನ್ನು ವಸ್ತುಶಃ ಅಲ್ಲಗಳೆದಿದ್ದಾರೆ. ಪ್ರಧಾನಿಯವರ ಈ ಎರಡು ನಾಲಿಗೆಯ ಮಾತು ಕೋಮುವಾದಿ ಧ್ರುವೀಕರಣದ ಅಜೆಂಡಾವನ್ನು ಸ್ಪಷ್ಟವಾಗಿ ದೃಢಪಡಿಸುತ್ತದೆ. ತಳಮಟ್ಟದಲ್ಲಿ ಅಶಾಂತಿ ಮತ್ತು ಹಿಂಸೆಯನ್ನು ಹರಡುವ ಮೂಲಕ ಕೇರಳದಲ್ಲಿ ಬಿಜೆಪಿ ಅದನ್ನೇ ಮಾಡುತ್ತಿದೆ.

2019ರ ಚುನಾವಣೆಗಳು

ಮುಂದಿನ ದಾರಿ ಏನೆಂಬುದನ್ನು 2019ರ ಚುನಾವಣೆಗಳಲ್ಲಿ ಜನರು ನಿರ್ಧರಿಸುತ್ತಾರೆ ಎಂದು ಪ್ರಧಾನಿಯವರು ಹೇಳಿದ್ದಾರೆ. ಹೌದು, ಅವರು ಅದನ್ನು ಎಲ್ಲಾ ಚುನಾವಣೆಗಳಲ್ಲಿ ಮಾಡುತ್ತಾರೆ!. ಭಾರತದ ಜನರು ಬದಲಾವಣೆಯನ್ನು ಬಯಸುತ್ತಿದ್ದಾರೆ, ಮತ್ತು ಏನಾದರೂ ಮಾಡಿ ಈ ಸರಕಾರವನ್ನು ಹೊರಗಿಡಬೇಕೆಂಬುದು ಅವರ ಇಚ್ಛೆಯಾಗಿದೆ. ತಳ ಮಟ್ಟದಲ್ಲಿ ಇರುವ ಈ ಅಭಿಪ್ರಾಯವೇ ದೇಶದ ಎಲ್ಲಾ ಜಾತ್ಯತೀತ ಪಕ್ಷಗಳು ಮುಂದೆ ಬಂದು ಮುಂಬರುವ ಚುನಾವಣೆಯಲ್ಲಿ ಈ ಸರಕಾರವನ್ನು ಮತ್ತು ಬಿಜೆಪಿಯನ್ನು ಸೋಲಿಸಲು ಕೆಲಸ ಮಾಡಬೇಕೆಂಬ ಒತ್ತಡವನ್ನು ಸೃಷ್ಟಿಸುತ್ತಿದೆ. ಸರಕಾರದ ನೀತಿಗಳ ವಿರುದ್ಧ ಹೆಚ್ಚುತ್ತಿರುವ ಅತೃಪ್ತಿ ಮತ್ತು ಇತ್ತೀಚಿನ ದಿನಗಳಲ್ಲಿ ನಡೆಯುತಿರುವ ವ್ಯಾಪಕ ಹೋರಾಟಗಳ ಹಿನ್ನೆಲೆಯಿಂದಾಗಿ ಮೂಲಭೂತವಾಗಿ ಈ ಪರಿಸ್ಥಿತಿ ಉಂಟಾಗಿದೆ. ಜನವರಿ ಎಂಟು ಮತ್ತು ಒಂಬತ್ತರಂದು ನಡೆಯಲಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಮತ್ತೊಮ್ಮೆ ಭಾರತದ ದುಡಿಯುವ ಜನತೆಯ ಒಗ್ಗಟ್ಟನ್ನು ಪ್ರದರ್ಶಿಸಲಿದೆ. ಈ ಎರಡು ದಿನಗಳಂದು ರೈತ ಮತ್ತು ಕೃಷಿಕೂಲಿಗಾರರ ಸಂಘಟನೆಗಳು ನೀಡಿರುವ 'ಗ್ರಾಮೀಣ ಭಾರತ ಬಂದ್' ಕರೆ ಕೂಡ ಮೋದಿ ಸರಕಾರವನ್ನು ಅಧಿಕಾರದಿಂದ ಕೆಳಗಿಳಿಸುವ ಹಾಗೂ ಸರಕಾರದ ನೀತಿಗಳನ್ನು ಜನಪರವಾಗಿ ಪರಿವರ್ತಿಸುವತ್ತ ಜನತೆಯ ಸಂಕಲ್ಪದ ಸಂಕೇತವಾಗಿದೆ.

ಭಾರತದ ಜನರಿಗೆ ಬೇಕಿರುವುದು ನೇತಾ (ನಾಯಕ) ಅಲ್ಲ, ಅವರಿಗೆ ಬೇಕಿರುವುದು ನೀತಿಗಳು.

2019ರ ಚುನಾವಣೆ ಪ್ರಧಾನಿ ಮತ್ತವರ ಸರಕಾರ ಹಾಗೂ ಭಾರತದ ಜನರ ನಡುವಿನ ಸ್ಪರ್ಧೆಯಾಗಲಿದೆ.

ಮಾನ್ಯ ಪ್ರಧಾನ ಮಂತ್ರಿಯವರೇ.

ಷೇಕ್ಸ್‌ಪಿಯರ್ ಒಮ್ಮೆ ಹೇಳಿರುವಂತೆ 'ಅರೇಬಿಯಾದ ಎಲ್ಲಾ ಸುಗಂಧ ದ್ರವ್ಯ ಒಟ್ಟು ಸೇರಿದರೂ ನಿಮ್ಮ ಕೈ ಮೇಲಿನ ರಕ್ತವನ್ನು ತೊಳೆಯಲಾರದು'.

ಅನು: ವಿಶ್ವ



ಸ್ವಾತಂತ್ರ್ಯ ಮತ್ತು ಸಮಾನತೆಯ 'ಮಹಿಳಾ ಕೋಟೆ'ಯಾಗಿ

ಇತಿಹಾಸ ನಿರ್ಮಿಸಿದ ಕೇರಳದ 'ಮಹಿಳಾ ಗೋಡೆ'





2019 ರ ಮೊದಲ ದಿನ. ಈ ಹಿಂದೆ ಐಕ್ಯತೆಯ ಹಲವು ಮಾನವ ಸರಪಳಿಗಳನ್ನು ಕಂಡ ಕೇರಳದಲ್ಲಿ, ಈ ಬಾರಿ ಇನ್ನೂ ಮುಂದೆ ಹೋಗಿ, ಅದರ ನವೋತ್ಥಾನ ಮೌಲ್ಯಗಳ ರಕ್ಷಣೆಗೆ, 'ವನಿತಾ ಮದಿಲ್' ಅಂದರೆ ಮಹಿಳಾ ಗೋಡೆಯನ್ನು ನಿರ್ಮಿಸುವ ಕರೆ ನೀಡಲಾಗಿತ್ತು. ಅದು ಗೋಡೆಯಾಗದಂತೆ ಮಾಡಲು ಹಲವೆಡೆ ನವೋತ್ಥಾನದ ಮಾನವೀಯ ಮೌಲ್ಯಗಳನ್ನು ವಿರೋಧಿಸುವ ಪ್ರತಿಗಾಮಿ ಶಕ್ತಿಗಳು ಪ್ರಯತ್ನ ನಡೆಸಿದರೂ ಫಲಕಾರಿಯಾಗದೆ, ಅದು ಹಲವೆಡೆಗಳಲ್ಲಿ ಮಹಿಳಾ ಕೋಟೆಯೇ ಆಗಿ ಬಿಟ್ಟಿತು.

ಉತ್ತರ ತುದಿಯಲ್ಲಿರುವ ಕಾಸರಗೋಡಿನಿಂದ ದಕ್ಷಿಣ ತುದಿಯಲ್ಲಿರುವ ತಿರುವಂತಪುರದ ವರೆಗಿನ 620 ಕಿ.ಮೀ.ಉದ್ದದ ಸುಮಾರು 55ಲಕ್ಷ ಮಹಿಳೆಯರು, ಹೆಣ್ಣುಮಕ್ಕಳು ರಚಿಸಿದ ಮಾನವ ಗೋಡೆ ಹಲವು ಪಟ್ಟಣಗಳಲ್ಲಿ ಒಂದಕ್ಕಿಂತ ಹೆಚ್ಚು ಗೋಡೆಗಳನ್ನು ರಚಿಸಬೇಕಾಗಿ ಬಂದುದರಿಂದ ಕೋಟೆಯೇ ಆಯಿತು–ಮಾನವತೆಯ, ಸಮಾನತೆಯ, ಐಕ್ಯತೆಯ ಕೋಟೆಯಾಯಿತು. ಕೇರಳ, ಅದರಲ್ಲೂ ಕೇರಳದ ಮಹಿಳೆಯರು ಇನ್ನೊಂದು ಚಾರಿತ್ರಿಕ ಗರಿಯನ್ನು ತಮ್ಮ ಮುಡಿಗೆ ಏರಿಸಿಕೊಂಡರು.

ಕೃಷಿ ಕೆಲಸಗಾರ್ತಿಯರು, ಶಿಕ್ಷಕಿಯರು, ಶುಶ್ರೂಷಕಿಯರು, ಕುಡುಂಬಶ್ರೀ ಮಹಿಳೆಯರು, ನಾರು–ಗೇರು ಉದ್ದಿಮೆಗಳ ಮತ್ತು ಇತರ ಮಹಿಳಾ ಕಾರ್ಮಿಕರು, ವಿದ್ಯಾರ್ಥಿನಿಯರು, ಜತೆಗೆ ಲೇಖಕಿಯರು, ಕಲಾವಿದೆಯರು, ಒಟ್ಟಿನಲ್ಲಿ ಎಲ್ಲ ರಂಗಗಳ ಮಹಿಳೆಯರು ರಾಷ್ಟ್ರೀಯ ಹೆದ್ದಾರಿಯ ಪಶ್ಚಿಮ ಭಾಗದಲ್ಲಿ ಭುಜಕ್ಕೆ ಭುಜಕೊಟ್ಟು ನಿಂತು, ಈ ರಾಜ್ಯದ ನವೋತ್ಥಾನ ಆಂದೋಲನದ ಮಾನವೀಯ ಮೌಲ್ಯಗಳ ರಕ್ಷಣೆಯ ಪ್ರತಿಜ್ಞೆ ಕೈಗೊಂಡರು. ಗಮನಾರ್ಹ ಸಂಖ್ಯೆಯಲ್ಲಿ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯಗಳ ಮಹಿಳೆಯರೂ ಭಾಗವಹಿಸಿದರು. ಹೆದ್ದಾರಿಯ ಇನ್ನೊಂದೆಡೆಯಲ್ಲಿ, ಅಥವ ಅವರ ಹಿಂದೆ ಸುಮಾರಾಗಿ ಅಷ್ಟೇ ಸಂಖ್ಯೆಯಲ್ಲಿ ನೆರೆದು ಪುರುಷರು ಆ ಪ್ರತಿಜ್ಞೆಗೆ ದನಿಗೂಡಿಸಿದರು.

ಇದು ಕೇರಳದ ಸಮಾಜವನ್ನು ಹಿಂದಕ್ಕೆ, ನವೋತ್ಥಾನ ಆಂದೋಲನವು ಇತಿಹಾಸದ ಕಸಬುಟ್ಟಿಗೆ ಎಸೆದ ಕರಾಳ ಮಧ್ಯಯುಗಕ್ಕೆ ನೂಕಲು ನಡೆಸಿರುವ ಪ್ರಯತ್ನಗಳ ವಿರುದ್ಧ ರಚಿಸಿದ್ದ ಪ್ರತಿರೋಧದ ಗೋಡೆಯಾಗಿತ್ತು. ಇದನ್ನು ಸಂಘಟಿಸಿದ್ದ ನವೋತ್ಥಾನದ ಸಂರಕ್ಷಣಾ ಸಮಿತಿ ಮೂರು ಘೋಷಣೆಗಳನ್ನು ಎತ್ತಿತ್ತು–ಕೇರಳ ಮತ್ತೊಮ್ಮೆ ಹುಚ್ಚರ ಸಂತೆಯಾಗುವುದಿಲ್ಲ, ನವೋತ್ಥಾನ ಚಳುವಳಿಯ ಮಾನವೀಯ ಮೌಲ್ಯಗಳನ್ನು ರಕ್ಷಿಸುತ್ತದೆ ಮತ್ತು ಸಮಾನತೆಯನ್ನು ಎತ್ತಿ ಹಿಡಿಯುತ್ತದೆ ಎಂದು. 620 ಕಿಲೋಮೀಟರ್ ಉದ್ದಕ್ಕೂ ಜನವರಿ 1,2019ರ ಸಂಜೆ 4 ಗಂಟೆಯಿಂದ 4–15ರ ವರೆಗೆ ಈ ಘೋಷಣೆಗಳು ಮೊಳಗಿದವು.

ಉತ್ತರ ತುದಿಯಿಂದ ದಕ್ಷಿಣ ತುದಿಯವರೆಗಿನ ರಾಷ್ಟ್ರೀಯ ಹೆದ್ದಾರಿಯ ಉದ್ದಕ್ಕೂ 3–30ರ ವೇಳೆಗೆ ಸಾವಿರ–ಸಾವಿರ ಸಂಖ್ಯೆಯಲ್ಲಿ ಮಹಿಳೆಯರು ಒಟ್ಟುಗೂಡಲಾರಂಭಿಸಿದರು, ಜತೆಗೆ ಅವರ ಈ ಪ್ರಯತ್ನವನ್ನು ಬೆಂಬಲಿಸುವ ಪುರುಷರೂ ಕೂಡ. 3.45ಕ್ಕೆ ಒಂದು ರಿಹರ್ಸಲ್ ಆರಂಭವಾಯಿತು. 4ಗಂಟೆಗೆ ಸರಿಯಾಗಿ ಸಾಮೂಹಿಕ ಪ್ರತಿಜ್ಞೆ ಸ್ವೀಕಾರ, ಅದನ್ನನುಸರಿಸಿ 4–15ರ ವರೆಗೂ ಘೋಷಣೆಗಳು ಮೊಳಗಿದವು.

ಎಲ್‌ಡಿಎಫ್ ಸರಕಾರದ ಆರೋಗ್ಯಮಂತ್ರಿಯಾದ ಕೆ.ಕೆ. ಶೈಲಜಾ, ಈ ಮಾನವಗೋಡೆಯ ಉತ್ತರ ತುದಿಯಲ್ಲಿ, ಕಾಸರಗೋಡಿನಲ್ಲಿ, ಮೊದಲ ವ್ಯಕ್ತಿಯಾಗಿದ್ದರೆ, ದಕ್ಷಿಣದ ತುದಿಯಲ್ಲಿ ತಿರುವನಂತಪುರದಲ್ಲಿ ಈ ಗೋಡೆಯ ಈ ಕೊನೆಯಲ್ಲಿದ್ದವರು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಅವರು. ನಡುವೆ ಕೊಚ್ಚಿಯಲ್ಲಿ ಇನ್ನೊಬ್ಬ ಮಹಿಳಾ ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಆಲಿ, ಮತ್ತು ಮಲ್ಲಪ್ಪುರಂನಲ್ಲಿ ಜನವಾದಿ ಮಹಿಳಾ ಸಂಘಟನೆಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾದ ಮರಿಯಂ ಧವಳೆ ಇತರ ಮಹಿಳೆಯರೊಂದಿಗೆ ಭುಜಕ್ಕೆ ಭುಜಕೊಟ್ಟು ನಿಂತರು.

ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಹಿಂದಿನ ಎಲ್‌ಡಿಎಫ್ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್, ಇತರ ಸಂಪುಟ ಸಚಿವರು ಮತ್ತು ಎಲ್‌ಡಿಎಫ್ ಮುಖಂಡರು ಈ ಸಂದರ್ಭದಲ್ಲಿ ಹಾಜರಿದ್ದರು.

ಈ ಗೋಡೆ ತಿರುವನಂತಪುರದ ವಳ್ಳಯ್‌ಬಲವಂನಲ್ಲಿರುವ ಕೇರಳದ ಜಾತಿ–ವಿರೋಧಿ ಚಳುವಳಿಯ ಪ್ರಖ್ಯಾತ ನೇತಾರ ಅಯ್ಯಂಕಳಿಯವರ ಪ್ರತಿಮೆಯ ಬಳಿ ಮುಕ್ತಾಯಗೊಂಡದ್ದು ಅರ್ಥಗರ್ಭಿತವಾಗಿತ್ತು.

ಸಿಪಿಐ(ಎಂ) ಕೇಂದ್ರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ ಹೇಳಿರುವಂತೆ "ಪ್ರಾಚೀನ ಕಾಲಕ್ಕೆ ಹಿಂದಿರುಗುವ ಪ್ರಶ್ನೆಯೇ ಇಲ್ಲ ಎಂದು ಮಹಿಳಾ ಗೋಡೆ ಒಂದು ಸ್ಪಷ್ಟವಾದ, ಬಲವಾದ ಸಂದೇಶವನ್ನು ನೀಡಿದೆ. ಎಲ್ಲ ಎಡ, ಸಾಮಾಜಿಕ ಮತ್ತು ಮಹಿಳಾ ಸಂಗಟನೆಗಳು ಈ ಅದ್ಭುತ ಗೋಡೆಯ ಬಗ್ಗೆ ಹೆಮ್ಮೆ ಪಟ್ಟುಕೊಳ್ಳಬಹುದು. ಸಿಪಿಐ(ಎಂ) ಪಕ್ಷವಂತೂ, ತನಗೆ ಇದೊಂದು ತತ್ವಕ್ಕಾಗಿ ನಡೆಸುವ ಹೋರಾಟದ ಪ್ರಶ್ನೆ, ಅದು ಚುನಾವಣಾ ಲೆಕ್ಕಾಚಾರಗಳನ್ನು ಆಧರಿಸಿರಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ."

ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಕಾಸರಗೋಡಿನ ಬಳಿ ಒಂದು ಕಡೆ ಹಿಂದುತ್ವ ಮಂದಿ ಗೋಡೆಯನ್ನು ಒಡೆಯಲು ಹಿಂಸಾಚಾರಕ್ಕೆ ಇಳಿದರು. ಆದರೂ ಮೂರು ಅಂತರ್‍ರಾಷ್ಟ್ರೀಯ ಏಜೆನ್ಸಿಗಳಾದ ಯುನಿವರ್ಸಲ್ ರೆಕಾರ್ಡ್ಸ್ ಫೋರಂ, ಅಮೆರಿಕನ್ ಬುಕ್ ಆಫ್ ರೆಕಾರ್ಡ್ಸ್ ಮತು ಅಫಿಶಿಯಲ್ ಬುಕ್ ಆಫ್ ರೆಕಾರ್ಡ್ಸ್ ಇದೊಂದು ವಿಶ್ವದಾಖಲೆ ಎಂದು ಪ್ರಕಟಿಸಿವೆ. 50ಲಕ್ಷಕ್ಕೂ ಹೆಚ್ಚು ಮಹಿಳೆಯರು ಇದರಲ್ಲಿ ಭಾಗವಹಿಸಿದರು ಎಂದು ಈ ಮೂರೂ ಸಂಸ್ಥೆಗಳು ಹೇಳಿವೆ.











ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಬುನಾದಿಯ ಮೇಲೆ ನವಕೇರಳ ನಿರ್ಮಾಣದ ಕಣ್ಣೋಟದಲ್ಲಿ ....

'ವನಿತಾ ಮದಿಲ್' ಅಥವ ಮಹಿಳಾ ಗೋಡೆಯ ಬಗ್ಗೆ ಕಳೆದ ನಾಲ್ಕೂವರೆ ವರ್ಷಗಳ 'ಅಚ್ಛೇ ದಿನ್'ಗಳಲ್ಲಿ ಶಕ್ತಿಗೂಡಿಸಿಕೊಂಡಿರುವ ಪ್ರತಿಗಾಮಿ, ಕೋಮುವಾದಿ ಶಕ್ತಿಗಳು ಇದು ಸರಕಾರಿ ಪ್ರಾಯೋಜಿತ ಕೆಲಸ ಎಂದು ಅಪಪ್ರಚಾರ ನಡೆಸಿದ್ದಾರೆ. ವಾಸ್ತವವಾಗಿ ಇದು ಕೇರಳದ ಸಾಮಾಜಿಕ ಸುಧಾರಣಾ ಆಂದೋಲನದಲ್ಲಿ ಮತ್ತು ನವಕೇರಳ ನಿರ್ಮಾಣದಲ್ಲಿ ಮಹಿಳೆಯರ ಪಾತ್ರವನ್ನು ಎತ್ತಿ ಹಿಡಿಯಲು, ಮತ್ತು ಕೇರಳವನ್ನು ಧ್ರುವೀಕರಿಸಲು ಪ್ರಯತ್ನಿಸುತ್ತಿರುವ ಕೋಮುವಾದಿ ಶಕ್ತಿಗಳ ನಿರಾಕರಣೆಯ ಚಿಂತನೆಯಲ್ಲಿ ಮೂಡಿಬಂದ ವಿಚಾರವಾಗಿತ್ತು, ಮಹಿಳಾ ಸ್ವಾತಂತ್ರ್ಯದ, ಮಹಿಳಾ ಸಮಾನತೆಯ ಆಶಯ–ಆಕಾಂಕ್ಷೆಗಳ ಘೋಷಣೆಯಾಗಿತ್ತು. ಎಲ್ಲ ಅಪಪ್ರಚಾರಗಳನ್ನೂ ಲೆಕ್ಕಿಸದೆ ಇದರಲ್ಲಿ ಭಾಗವಹಿಸಿದ ಕೇರಳದ 55ಲಕ್ಷ ಮಹಿಳೆಯರು, ಹಿರಿಯ ಮಹಿಳಾ ಹೋರಾಟಗಾರರಾದ ಬೃಂದಾ ಕಾರಟ್ ವರ್ಣಿಸಿರುವಂತೆ, ಕೇರಳದ ಮಹಿಳೆಯರಿಗೆ ಮಾತ್ರವಲ್ಲ, ಇಡೀ ದೇಶದ ಮಹಳೆಯರಿಗೆ ನೀಡಿರುವ ಒಂದು ಬಲವಾದ ಸಂದೇಶ.

ಈ ವಿಚಾರದ ಮೊದಲ ಕಿಡಿ ಸ್ಫುರಿಸಿದ್ದು, 'ನಾಂ ಮುನ್ನೋಟ್ಟ್'(ಒಟ್ಟಾಗಿ ನಡೆಯೋಣ ಮುಂದೆ) ಚರ್ಚೆಯಲ್ಲಿ. ಇದು ಕೇರಳದಲ್ಲಿ ಎಲ್‌ಡಿಎಫ್ ಸರಕಾರ ಬಂದ ಮೇಲೆ ಆರಂಭಿಸಲಾದ ಮುಖ್ಯಮಂತ್ರಿಗಳೊಂದಿಗೆ ಸಂವಾದದ ವಾರದ ಕಾರ್ಯಕ್ರಮ. ಈ ಸರಣಿಯ ಒಂದು ಸಂವಾದದಲ್ಲಿ ಕೇರಳ ಪುಲಯ ಮಹಾಸಭಾ(ಕೆಪಿಎಂಎಸ್) ಪ್ರಧಾನ ಕಾರ್ಯದರ್ಶಿ ಪುನ್ನಲ ಶ್ರೀಕುಮಾರ್ ಕೇರಳದ ಸಾಮಾಜಿಕ ಸುಧಾರಣೆಗಳ ಹರಿಕಾರನಾದ ನವೋತ್ಥಾನದ ಆಂದೋಲನದ ಮೌಲ್ಯಗಳನ್ನು ಮುಂದೊಯ್ಯಲು ಈ ಪರಂಪರೆಯ ಎಲ್ಲ ಸಂಗಟನೆಗಳನ್ನು ಒಂದುಗೂಡಿಸುವ ನಗ್ಗೆ ಸರಕ/ಅರದ ನಿಲುವೇನು ಎಂದು ಕೇಳಿದರು. ಇದಕ್ಕೆ ಸ್ಪಂದಿಸಿದ ಪಿಣರಾಯಿ ವಿಜಯನ್ ಇಂತಹ ಪ್ರಯತ್ನಗಳಿಗೆ ತಮ್ಮ ಸರಕಾರದ ಬೆಂಬಲವಿದೆ ಎಂದರು.

ಇದನ್ನನುಸರಿಸಿ ಅವರು ಡಿಸೆಂಬರ್1 ರಂದು ಈ ಮೌಲ್ಯಗಳಲ್ಲಿ ನಂಬಿಕೆಯಿರುವ ಎಲ್ಲ ಸಾವಾಜಿಕ–ಧಾರ್ಮಿಕ ಸಂಘಟನೆಗಳ ಂದು ಸಭೆಯನ್ನು ಕರೆದರು. ಆ ಸಭೆಯಲ್ಲಿ ನಡೆದ ಚರ್ಚೆಯಲ್ಲಿ ಈ 'ವನಿರಾವುದಿಲ್' ಅಥವ ಮಹಿಳಾ ಗೋಡೆಯ ವಿಚಾರ ರೂಪುಗೊಂಡಿತು.

ಹೀಗೆ ಮಹಿಳಾ ಗೋಡೆಯನ್ನು ನಿರ್ಮಿಸಲು ಸಿದ್ಧತೆ ಒಮದು ಸಆಮೂಹಿಕ ಚಟುವಟಿಕೆಯಾಗಿ ಆರಂಭವಾಯಿತು. ವಿವಿಧ ಮಟ್ಟಗಳಲ್ಲಿ ಇದಕ್ಕೆ ಪೂರಕವಾಗಿ ಚಟುವಟಿಕೆಗಳನ್ನು ನಡೆಸಲು ಈ ಮೌಲ್ಯಗಳನ್ನು ಎತ್ತಿ ಹಿಡಿಯುವ ಸಂಘಟನೆಗಳ, ವ್ಯಕ್ತಿಗಳ ಸಂಘಟನಾ ಸಮಿತಿಗಳನ್ನು ರಚಿಸಲು ಸರಕಾರ ಮುತುವರ್ಜಿ ವಹಿಸಿತು.

ಈ ಚಟುವಟಿಕೆಗಳು ಶಬರಿಮಲೆ ತೀರ್ಪಿನ ನಂತರ ಅದಕ್ಕೆ ಬಲಪಂಥೀಯ ಶಕ್ತಿಗಳ ಕಡುವಿರೋಧ ಜತೆಗೆ ಅದಕ್ಕೆ ಕಾಂಗ್ರೆಸಿನ ಬೆಂಬಲವೂ ಇರುವ ಹಿನ್ನೆಲೆಯಲ್ಲಿ ಮೂಡಿ ಬಂದಿದೆ ಎಂಬುದು ಹಲವರ ಅನಿಸಿಕೆ. ಇದು ನಿಜವಲ್ಲ ಎನ್ನುತ್ತಾರೆ ಇದರ ಸಂಘಟಕರು. ಅದು ಮೂಡಿ ಬಂದದ್ದು ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಬುನಾದಿಯ ಮೇಲೆ ನವಕೇರಳ ನಿರ್ಮಾಣದ ಕಣ್ಣೋಟದಿಂದ. ಈ ಮೌಲ್ಯಗಳಿಗೆ ರಾಜ್ಯದಲ್ಲಿ, ಮತ್ತು ಇಡೀ ದೇಶದಲ್ಲಿ, ಬೆದರಿಕೆ ಬಂದಿರುವುದು ಕೋಮುವಾದಿ ಶಕ್ತಿಗಳಿಂದ. ಶಬರಿಮಲೆ ತೀರ್ಪಿಗೆ ವಿರೋಧ ನವೋತ್ಥಾನ–ವಿರೋಧಿ ಶಕ್ತಿಗಳಿಂದಲೇ ಬಂದಿರುವುದು ಆಕಸ್ಮಿಕವೇನಲ್ಲ ಎಂದೂ ಅವರು ಹೇಳುತ್ತಾರೆ. ದುರದೃಷ್ಟವಶಾತ್ ಕಾಂಗ್ರೆಸ್ ಕೂಡ ಇವರ ಜತೆ ಕೈಜೋಡಿಸಿದೆ.

ಸಹಜವಾಗಿಯೇ ಈ ಕೋಮುವಾದಿ ಶಕ್ತಿಗಳು ಮತ್ತು ಕಾಂಗ್ರೆಸ್ ಕೂಡ ರಾಜ್ಯದಲ್ಲಿ, ಮತ್ತು ಮುಖ್ಯಧಾರೆಯ ಮಾಧ್ಯಮಗಳಲ್ಲಿ ಈ ಕಾರ್ಯಕ್ರಮದ ವಿರುದ್ಧ ಅಪಪ್ರಚಾರವನ್ನು ಆರಂಭಿಸಿದರು. ಈ ಗೋಡೆ ಸಂಪೂರ್ಣ ವಿಫಲವಾಗುತ್ತದೆ ಎಂದೂ ಕೆಲವರು ಸವಾಲುಗಳನ್ನೂ ಹಾಕಿದರು. ಈ ನಿಟ್ಟಿನಲ್ಲಿ ಹಲವು ಆರೋಪಗಳನ್ನೂ ಹಾಕಿದರು. ಇದರಲ್ಲಿ ಸರಕಾರೀ ನಿಧಿಗಳ ದುರುಪಯೋಗ ಮಾಡಲಾಗುತ್ತಿದೆ ಎಂದು ಕೋರ್ಟ್‌ಗೂ ಹೋದರು. ಈ ಕಾರ್ಯಕ್ರಮಕ್ಕೆ ಸರಕಾರದ ನಿಧಿಗಳನ್ನು ಬಳಕೆಯಾಗುತ್ತಿಲ್ಲ ಎಂದು ಕೋರ್ಟಿನಲ್ಲಿ ಸ್ಪಷ್ಟಪಡಿಸಿದ ಸರಕಾರ, ನವೋತ್ಥಾನ ಮೌಲ್ಯಗಳ ಪ್ರಸಾರ ಈ ಸರಕಾರದ ಒಂದು ಧೋರಣಾ ನಿರ್ಣಯ ಎಂಬುದನ್ನೂ ನೆನಪಿಸಿತು. ರಾಜ್ಯ ಸರಕಾರದ ಈ ಧೋರಣೆಯ ಅಡಿಯಲ್ಲಿ ಜನಗಳಲ್ಲಿ ಅರಿವು ಮೂಡಿಸಲು ಹಲವು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ, ಸಹಜವಾಗಿಯೇ ಅವಕ್ಕೆ ಸಾರ್ವಜನಿಕ ಸಂಪರ್ಕಗಳ ಇಲಾಖೆ ಸಂಬಂಧಪಟ್ಟ ಸರಕಾರದ ನಿಧಿಗಳನ್ನು ಬಳಸುತ್ತದೆ ಎಂದೂ ಸ್ಪಷ್ಟಪಡಿಸಲಾಗಿದೆ. ಈ ಕಾರ್ಯಕ್ರಮಗಳು ಮಹಿಳಾ ಗೋಡೆಯ ಕರೆಯನ್ನು ಬಲಗೆಡಿಸಿವೆ, ಇದಕ್ಕೆ ಪ್ರತಿಯಾಗಿ ಮಹಿಳಾ ಗೋಡೆಯ ಸಿದ್ಧತಾ ಕಾರ್ಯಕ್ರಮಗಳೂ ಸರಕಾರದ ಧೋರಣೆಗೆ ಬಲತುಂಬಿವೆ.

ಸರಕಾರದ ಸ್ಪಷ್ಟೀಕರಣದ ನಂತರವೂ ಕೋಮುವಾದಿ ಶಕ್ತಿಗಳು ಮತ್ತು ಅವರ ಬಾಲ ಹಿಡಿದ ಕಾಂಗ್ರೆಸಿನ ಅಪಪ್ರಚಾರಗಳು ಮುಂದುವರೆದವು. ಆದರೆ ಕೇರಳದ ಲಕ್ಷಾಂತರ ಮಹಿಳೆಯರು ಅವನ್ನೆಲ್ಲ ತಿರಸ್ಕರಿಸಿದ್ದಾರೆ, ಈ ನವೋತ್ಥಾನ–ವಿರೋಧಿ ಶಕ್ತಿಗಳಿಗೆ ತಕ್ಕ ಪ್ರತ್ಯುತ್ತರ ನೀಡಿದ್ದಾರೆ.

55ಲಕ್ಷ ಮಹಿಳೆಯರ ಪ್ರತಿಜ್ಞೆ

* ನವೋತ್ಥಾನ ಮೌಲ್ಯಗಳನ್ನು ಎತ್ತಿ ಹಿಡಿಯುವೆವು * ಕೇರಳವನ್ನು ಇನ್ನೊಮ್ಮೆ ಹುಚ್ಚರ ನಾಡಾಗಿಸುವ ಪ್ರಯತ್ನಗಳನ್ನು ಸೋಲಿಸುವೆವು * ಜಾತ್ಯತೀತತೆಯನ್ನು ಸಂರಕ್ಷಿಸಲು ಹೋರಾಡುವೆವು



ಜನವರಿ 1 ರಂದು ಕೇರಳದ 55 ಲಕ್ಷಕ್ಕೂ ಹೆಚ್ಚು ಮಹಿಳೆಯರು ಕೈಗೊಂಡ ಪ್ರತಿಜ್ಞೆಯ ಪೂರ್ಣಪಾಟ:

ಹೊಸ ವರ್ಷದ ಮೊದಲ ದಿನ ನವೋತ್ಥಾನ ಮೌಲ್ಯಗಳನ್ನು ಸಂರಕ್ಷಿಸುವ ಗೋಡೆಯಾಗಿ ನಾವೆಲ್ಲರೂ ಇಲ್ಲಿ ನೆರೆದಿರುತ್ತೇವೆ. ಮಹಿಳೆಯರು ಮತ್ತು ಪುರುಷರು ಸಮಾನರೆಂಬ ಭಾರತದ ಸಂವಿಧಾನದ ಘೋಷಣೆಯನ್ನು ಬೆಂಬಲಿಸುತ್ತೇವೆ, ಮತ್ತು ಕೇರಳವನ್ನು ಇನ್ನೊಮ್ಮೆ ಹುಚ್ಚರ ಸಂತೆಯಾಗಿ ಮಾಡುವ ಪ್ರಯತ್ನಗಳನ್ನು ಸೋಲಿಸುತ್ತೇವೆ ಎಂದು ಘೋಷಿಸಲು ನಾವಿಲ್ಲಿ ಸೇರಿರುತ್ತೇವೆ.

ಹಿಂದೆ ಹುಚ್ಚರ ಆಶ್ರಯ ತಾಣ ಎಂದು ಕರೆಯಲ್ಪಟ್ಟಿದ್ದ ನಮ್ಮ ನಾಡಿಂದು ದೇವರ ಸ್ವಂತ ನಾಡೆಂದು ಕರೆಯಲ್ಪಡುವ ಇಲ್ಲಿ ನಡೆದ ತ್ಯಾಗ, ಬಲಿದಾನಗಳ ಉಜ್ವಲ ಹೋರಾಟಗಳು ಇದಕ್ಕೆ ಕಾರಣವೆಂದು ನಾವು ನೆನಪಿಸುತ್ತೇವೆ.

ಎದೆ ಮುಚ್ಚುವ ಹಕ್ಕಿಗಾಗಿ ಮತ್ತು ಮೊಲೆ ಕರವನ್ನು ವಿರೋಧಸಿ, ನಡೆದ ಹೋರಾಟ, ಕಲ್ಲು ಮಾಲೆ ಕಡಿದು ಬಿಸಾಡಿದ ಹೋರಾಟಗಳನ್ನು



ಅಡುಗೆ ಕೋಣೆಯಿಂದ ಸಮಾಜದ ಮುಖ್ಯ ವಾಹಿನಿಗೆ ಬರಲು ನಡೆಸಿದ ಹೋರಾಟಗಳೆಂದು ಹೆಮ್ಮೆಯಿಂದ ನಾವಿಂದು ಸ್ಮರಿಸುತ್ತೇವೆ.

ಚರಿತ್ರೆಯಲ್ಲಿ ದಾಖಲಿಸದಿರುವ ಇಂತಹ ನೂರಾರು ಬವಣೆಗಳ ಸಹನೆಯನ್ನು ಉಜ್ವಲ ಹೋರಾಟಗಳನ್ನು ನಾವಿಂದು ಎತ್ತಿ ತೋರುತ್ತೇವೆ.

ಸಾಮಾಜಿಕ ಮುನ್ನಡೆಯ ಯಾತ್ರೆಯನ್ನು ಹಿಂದೂಡಲು ಅಂದು ಯತ್ನಿಸಿದ ಯಥಾಸ್ಥಿತಿವಾದಿಗಳ ಇಂದಿನ ಮುಖವಾಡಗಳನ್ನು ನಾವು ತಿಳಿಸಿರುತ್ತೇವೆ. ಅವರ ಪ್ರಚಾರ ಕುತಂತ್ರಗಳಿಗೆ ಅಂದೂ ನೂರಾರು ಮಂದಿ ದಾರಿ ತಪ್ಪಿದರು. ಅದನ್ನೆಲ್ಲಾ ಧೀರತೆಯಿಂದ ಸಹಿಸಿ, ಎದುರಿಸಿ ನಾವಿಂದು ಇಂದಿನ ಸ್ಥಿತಿಗೆ ತಲುಪಿರುವುದು. ಪರಸ್ಪರ ಸಹಕರಿಸುವ ಸಹಭಾಗಿತ್ವವಿರುವ ಪ್ರಪಂಚದಲ್ಲಿ ಮಹಿಳೆಯರ – ಪುರುಷರ ಜೀವನ ಸ್ವರ್ಗ ಸಂತೋಷದಾಯಕವಾಗಿರುವುದು. ಸ್ತ್ರೀ ಸಮಾನತೆಯು ಸಾಮಾಜಿಕ ವಿವೇಚನೆಯ ಭಾಗವಾಗಿದೆ. ನಾಡನ್ನು ಪ್ರೀತಿಸುವವರು ಈ ಆಶಯವನ್ನು ಬೆಂಬಲಿಸುವವರು ಈ ಹೋರಾಟಕ್ಕೆ ಬೆಂಬಲ ನೀಡುತ್ತಿರುವ ಕೇರಳ ಸರ್ಕಾರದ ನೀತಿಯನ್ನು ನಾವು ಗೌರವಿಸುತ್ತೇವೆ. ಮಹಿಳಾ ಸಮಾನತೆಯೆಂಬ ಘೋಷಣೆಯೊಂದಿಗೆ ನವೋತ್ಥಾನ ಮೌಲ್ಯಗಳನ್ನು ಎತ್ತಿ ಹಿಡಿಯುವೆವು ಎಂದೂ, ಕೇರಳವನ್ನು ಇನ್ನೊಮ್ಮೆ ಹುಚ್ಚರ ನಾಡಾಗಿ ಪರಿವರ್ತಿಸುವ ಪ್ರಯತ್ನಗಳನ್ನು ವಿರೋಧಿಸಿ ಸೋಲಿಸುವೆವು ಎಂದೂ, ಜಾತ್ಯತೀತತೆಯನ್ನು ಸಂರಕ್ಷಿಸಲು ಹೋರಾಡುವೆವು ಎಂದೂ ಪ್ರತಿಜ್ಞೆ ಮಾಡುತ್ತೇವೆ.

ಶಬರಿಮಲೆ 'ಶುದ್ಧೀಕರಣ' ಮಹಿಳೆಯರಿಗೆ ಮಾಡಿರುವ ಘೋರ ಅವಮಾನ, ಪ್ರಜಾಪ್ರಭುತ್ವದ ಮೇಲಿನ ಹಲ್ಲೆ, ಕಾನೂನುಬಾಹಿರ ಕೃತ್ಯ– ಬೃಂದಾ ಕಾರಟ್

(ಎನ್‌ಡಿಟಿವಿ.ಕಾಂ, ನಲ್ಲಿ ಪ್ರಕಟವಾದ ಅವರ ಲೇಖನದಿಂದ)

ಕೇರಳದಲ್ಲಿನ ಬೆಳವಣಿಗೆಗಳು ದೇಶಾದ್ಯಂತ ನಾಗರಿಕರಲ್ಲಿ ಆತಂಕ ಉಂಟುಮಾಡಿರುವ ಒಂದು ಸಂಗತಿ.

ಸ್ವಾಮಿ ವಿವೇಕಾನಂದರು ತಮ್ಮ ಕಾಲದಲ್ಲಿ ಕೇರಳ ಸಮಾಜದಲ್ಲಿದ್ದ ಅಮಾನುಷ, ಕಡು ಜಾತಿ–ಆಧಾರಿತ ನಿಯಮಗಳನ್ನು, ಆಚರಣೆಗಳನ್ನು ಕಂಡು ತತ್ತರಿಸಿ ಅದೊಂದು 'ಹುಚ್ಚರ ಸಂತೆ' ಎಂದು ಕರೆದರು. ಅಯ್ಯಂಕಳಿ, ಶ್ರೀನಾರಾಯಣ ಗುರು, ಚಟ್ಟಂಬಿ ಸ್ವಾಮಿ ಮತ್ತಿತರ ವಿವಿಧ ಸಮುದಾಯಗಳಿಂದ ಬಂದ ಸಾಮಾಜಿಕ ಸುಧಾರಕರ ನೇತೃತ್ವದ ನವೋತ್ಥಾನ, ಅಪಾರ ಧೈರ್ಯ ಮತ್ತು ತ್ಯಾಗದೊಂದಿಗೆ ಧಾರ್ಮಿಕ



ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಸಂಪ್ರದಾಯ, ಮತ್ತು ನಂಬಿಕೆಯ ಹೆಸರಿನಲ್ಲಿ ಕಾರ್ಯಾಚರಿಸುತ್ತಿದ್ದ ರೂಢಿಗ್ರಸ್ತ, ಸಂಪ್ರದಾಯಶರಣ ಶಕ್ತಿಗಳನ್ನು ಪ್ರತಿರೋಧಿಸಿ, ಸೋಲಿಸಿತು. ಈ ನೇತಾರರ ಧೀರೋದ್ದಾತ್ತ, ದೂರದೃಷ್ಟಿಯ ಪರಿಶ್ರಮಗಳು ಜಾತಿ ಭೇದಭಾವಗಳ ಸಂಕೋಲೆಗಳನ್ನು ಸಡಿಲಗೊಳಿಸಿದವು. ಇವು ದಲಿತರಿಗೆ, ಅವರ್ಣೀಯರಿಗೆ, ಮಹಿಳೆಯರಿಗೆ ಘನತೆ ಮತ್ತು ಹಕ್ಕುಗಳಿಗಾಗಿ ಹೋರಾಡುವ ವಿಶ್ವಾಸ ತುಂಬಿದವು. ಕಮ್ಯುನಿಸ್ಟರು, ಪ್ರಗತಿಶೀಲರು, ಪ್ರಜಾಪ್ರಭುತ್ವವಾದಿಗಳು ಈ ಪರಂಪರೆಯನ್ನು ಮುಂದುವರೆಸಿದರು, ದುಡಿಯುವ ಜನಗಳಿಗೆ ಆರ್ಥಿಕ ನ್ಯಾಯ ಮತ್ತು ಹಕ್ಕುಗಳನ್ನು ಸೇರಿಸಿ ಇದನ್ನು ವಿಸ್ತರಿಸಿದರು, ಕೇರಳವನ್ನು ದೇಶದಲ್ಲಿ ಎಲ್ಲ ಸಾಮಾಜಿಕ ಸೂಚ್ಯಂಕಗಳಲ್ಲಿ ಮೊದಲಿನ ಸ್ಥಾನಕ್ಕೆ ತಂದ ಒಂದು ಅಭಿವೃದ್ಧಿ ಮಾದರಿಯನ್ನು ಅಂಗೀಕರಿಸಿದರು.

ಇಂದು, ಕೇರಳವನ್ನು ಹುಚ್ಚರ ಸಂತೆಯಾಗಿಸಿದ್ದ ಆ ಕರಾಳ ಶಕ್ತಿಗಳು ಮತ್ತೆ ಅವತರಿಸಿವೆ.......... ಭಾರತವನ್ನು ಆಳುತ್ತಿರುವ ರಾಜಕೀಯ ಪಕ್ಷದ ಸದಸ್ಯರು ಸಂಘಟಿಸಿರುವ ಗೂಡಾಗಿರಿ ನಾಗರಿಕರ ಆತಂಕಕ್ಕೆ ಕಾರಣವಾಗಿದೆ ....

ಇಬ್ಬರು ಮಹಿಳೆಯರು ಶಬರಿಮಲೆ ದೇವಸ್ಥಾನವನ್ನು ಪ್ರವೇಶಿಸಿದುದರಿಂದ ಮೈಲಿಗೆ ಆಯಿತು ಎಂದು ದೇವಸ್ಥಾನದ 'ತಂತ್ರಿ' ಅಂದರೆ ಪ್ರಧಾನ ಅರ್ಚಕರು ದೇವಸ್ಥಾನವನ್ನು ಮುಚ್ಚಿ 'ಶುದ್ಧೀಕರಣ' ಆಚರಣೆಯನ್ನು ಮಾಡಿದರು. ಈ ಮಹಾನುಭಾವರು ಬಿಜೆಪಿ ರಾಜ್ಯ ಅಧ್ಯಕ್ಷ ಪಿ ಎಸ್ ಶ್ರೀಧರನ್ ಪಿಳ್ಳೆಯವರಿಂದ ಸಲಹೆ ಪಡೆಯುತ್ತಿರುವವರು. ಇದು ಅವರ ಸಂವಾದದ ಧ್ವನಿಮುದ್ರಣವು ಪ್ರಸಾರಗೊಂಡಾಗ ಸಾರ್ವಜನಿಕಗೊಂಡಿತು. ಅದರಲ್ಲಿ ಈ ಬಿಜೆಪಿ ಮುಖಂಡರು ಅರ್ಚಕರಿಗೆ ಸರ್ವ ರಕ್ಷಣೆಯನ್ನು ನೀಡುವ ಭರವಸೆ ಕೊಟ್ಟಿರುವುದು ಕೇಳ ಬಂದಿದೆ. ಈ ತಂತ್ರಿಗಳು ಮಾಡಿರುವ ಕೆಲಸ ಅವರ ಸಲಹೆಯ ಮೇರೆಗೆ ಇರಬಹುದೇ? ಇದು ಮಹಿಳೆಯರನ್ನು ಕೀಳಾಗಿ ಕಾಣುವ ಆಕ್ರೋಶಕಾರಿ ಕ್ರಿಯೆ. ದಲಿತರು ದೇವಸ್ಥಾನಗಳಲ್ಲಿ ಎದುರಿಸುತ್ತ ಬಂದಿರುವ, ಹಲವೆಡೆಗಳಲ್ಲಿ ಈಗಲೂ ಎದುರಿಸುತ್ತಿರುವಂತಹುದೇ ಅವಮಾನ. ಶಬರಿಮಲೆ ದೇವಸ್ಥಾನದಲ್ಲಿ ನಡೆಸಿರುವ ಶುದ್ಧೀಕರಣ ಆಚರಣೆ ಸಂಪೂರ್ಣವಾಗಿ ಕಾನೂನುಬಾಹಿರವಾದ ಕೃತ್ಯ, ಮಹಿಳೆಯರಿಗೆ ಮಾಡಿರುವ ಗಂಭೀರ ಅವಮಾನದ ಕೃತ್ಯ, ಮತ್ತು ಪ್ರಜಾಪ್ರಭುತ್ವದ ಮೇಲೆ ಮಾಡಿರುವ ಹಲ್ಲೆ. ಸರಕಾರವು ಈ ಕೃತ್ಯದ ವಿರುದ್ಧ ಕಾನೂನು ಕ್ರಮಗಳನ್ನು ಖಂಡಿತವಾಗಿಯೂ ಪರಿಶೀಲಿಸುತ್ತದೆ.

ಮಹಿಳೆಯರು ದೇವಸ್ಥಾನ ಪ್ರವೇಶಿಸಿದ್ದು ಅವರು ಕೈಗೊಂಡಿರುವ ಒಂದು ನಿರ್ಧಾರ. ಇದು ಪೂಜಾ ಸ್ವಾತಂತ್ರ್ಯವೂ ಸೇರಿದಂತೆ ಎಲ್ಲ ರಂಗಗಳಲ್ಲಿ ಮಹಿಳೆಯರ ಹಕ್ಕುಗಳನ್ನು ಎತ್ತಿ ಹಿಡಿಯುವ ಪ್ರಚಾರಾಂದೋಲನ ಕೇರಳದಲ್ಲಿ ವ್ಯಾಪಕವಾಗಿ ನಡೆದಿರುವ ಹಿನ್ನೆಲೆಯಲ್ಲಿ ಬಂದಿದೆ. ಈ ಪ್ರಚಾರಾಂದೋಲನ ಮಹಿಳೆಯರು ದೇವಸ್ಥಾನವನ್ನು ಪ್ರವೇಶಿಸಬೇಕು ಎಂದೇನೂ ಆಗ್ರಹಿಸಲಿಲ್ಲ. ಇವು ಅವರವರ ವೈಯಕ್ತಿಕ ನಿರ್ಧಾರಗಳು ಎಂದು ಅದು ಹೇಳಿತು. ಆದರೆ ಈ ಆಂದೋಲನ ಮುಟ್ಟಿನ ಬಗ್ಗೆ ಇರುವ ಪ್ರತಿಗಾಮಿ ವಿಚಾರವನ್ನು ಬಲವಾಗಿ ಟೀಕಿಸಿತು. ಮುಟ್ಟು ಸೃಷ್ಟಿಕ್ರಿಯೆ, ಅದು ಅಪರಾಧವಲ್ಲ. ಅದಕ್ಕಾಗಿ ಮಹಿಳೆಯರನ್ನು ಶಿಕ್ಷಿಸಬೇಕೇಕೆ ಎಂದು ಸಾವಿರಾರು ಕಾರ್ಯಕರ್ತರು ಮನೆಮನೆಗಳಿಗೆ ಹೋದಾಗ, ಸಾರ್ವಜನಿಕ ಸಭೆಗಳಲ್ಲಿ ಕೇಳಿದರು, ಈ ಮೂಲಕ ಇಂತಹ ವಿಷಯಗಳನ್ನು ಸಾರ್ವಜನಿಕವಾಗಿ 'ಚರ್ಚಿಸಬಾರದು' ಎಂದಿದ್ದ ನಿಷೇಧವನ್ನು ಮುರಿದರು.

ಎರಡು ತಿಂಗಳ ಕಾಲ, ಈ ಸ್ಫೂರ್ತಿದಾಯಕ ಪ್ರಚಾರಾಂದೋಲನ ಕೇರಳದ ಸಾಮಾಜಿಕ ಸುಧಾರಣಾ ಆಂದೋಲನದ ಬಗ್ಗೆ, ನವೋತ್ಥಾನದ ಇತಿಹಾಸ ಮತ್ತು ಅದರ ನೇತಾರರುಗಳ ಬಗ್ಗೆ ಪ್ರೀತಿ ಮತ್ತು ಗೌರವವನ್ನು ಮತ್ತೆ ಜಾಗೃತಗೊಳಿಸಿತು. ಈ ಪರಂಪರೆಯನ್ನು ಧ್ವಂಸ ಮಾಡಬಯಸುವವರು ಸಮಾಜವನ್ನು ಮತ್ತೆ ಆ ಕರಾಳ ಯುಗಗಳಿಗೆ ನೂಕುವ ಅಪಾಯದ ಬಗ್ಗೆ ಕೇರಳೀಯರಿಗೆ ನೆನಪು ಮಾಡಿಕೊಟ್ಟರು. ಇದೊಂದು ಅಭೂತಪೂರ್ವ ಆಂದೋಲನ. ಪ್ರಸಕ್ತ ಘಟ್ಟದಲ್ಲಿ ಮಹಿಳಾ ಸಮಾನತೆಗಾಗಿ, ನವೋತ್ಥಾನ ಮೌಲ್ಯಗಳ ಸಂರಕ್ಷಣೆಗಾಗಿ ಚಾರಿತ್ರಿಕ ಮಹಿಳಾ ಗೋಡೆಯೊಂದಿಗೆ ಸಂಪನ್ನಗೊಂಡಿದೆ. ಈ ದೇಶದ ಚರಿತ್ರೆಯಲ್ಲಿ ಮಾತ್ರವಲ್ಲ, ಜಗತ್ತಿನ ಚರಿತ್ರೆಯಲ್ಲೂ, ಹಿಂದೆಂದೂ 50 ಲಕ್ಷ ಮಹಿಳೆಯರು ಭುಜಕ್ಕೆ ಭುಜ ಕೊಟ್ಟು, ಕೇರಳದ ಉತ್ತರ ತುದಿಯಿಂದ ದಕ್ಷಿಣ ತುದಿಯ ವರೆಗೆ 620ಕಿ.ಮೀ.ಉದ್ದಕ್ಕೂ ನಿಂತ ಘಟನೆ ಕಂಡು ಬಂದಿರಲಿಲ್ಲ. ಅವರು ಎಲ್ಲ ಸಮುದಾಯಗಳಿಂದ, ಎಲ್ಲ ರಂಗಗಳಿಂದ ಬಂದಿರುವ ಎಲ್ಲ ವಯಸ್ಸಿನ, ಆನಂದೋತ್ಸಾಹಗಳಿಂದ ತುಂಬಿದ್ದ ಜನಗಳು, ಕೇರಳ ಮತ್ತೊಮ್ಮೆ ಹುಚ್ಚುಸಂತೆಯಾಗಲು ಬಿಡುವುದಿಲ್ಲ ಎಂದು ಪಣ ತೊಟ್ಟರು. ○

371(ಜೆ) ಕಲಂ ಸಮರ್ಪಕ ಜಾರಿಗಾಗಿ ಪ್ರತಿಭಟನೆ

ಗುರುರಾಜ ದೇಸಾಯಿ

ಜನವರಿ 01, 2013 ನ್ನು ಹೈದ್ರಾಬಾದ್ ಕರ್ನಾಟಕದ ಜನ ಎಂದು ಮರೆಯದ ದಿನಾಂಕವದು. ಪ್ರಾದೇಶಿಕ ಅಸಮಾನತೆ ನಿವಾರಿಸುವ ಮೂಲಕ ಈ ಭಾಗದ ಜನರ ಬದುಕು ಹಸನಾಗುತ್ತದೆ ಎಂದು 371(ಜೆ) ಕಲಂ ನ ವಿಶೇಷ ಸ್ಥಾನಮಾನ ಈ ಭಾಗದ 6 ಜಿಲ್ಲೆಗಳಿಗೆ ದೊರಕಿದ ದಿನವದು. ಶಿಕ್ಷಣ, ಉದ್ಯೋಗದ ಸಮಸ್ಯೆ ನಿವಾರಣೆಯಾಗುತ್ತದೆ ಎಂದು ಈ ಭಾಗದ ಜನ ಸಂಭ್ರಮಿಸಿದರು. ಆದರೆ ಆ ಸಂಭ್ರಮ ಇನ್ನೂ ಜನರ ಕೈಗೆ ಸಿಕ್ಕಿಲ್ಲ. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು 2000 ರಲ್ಲಿ ರಚನೆಯಾಗಿದ್ದ ಡಾ. ಎಂ ನಂಜುಂಡಪ್ಪ ಸಮಿತಿಯ ವರದಿ ನೀಡಿ 18 ವರ್ಷ ಕಳೆದಿವೆ. ಅಸಮಾನತೆಯ ಕೂಗು ಇನ್ನು ನಿಂತಿಲ್ಲ.

ಹೈದರಾಬಾದ್ ಕರ್ನಾಟಕ ಜಿಲ್ಲೆಗಳಿಗೆ 371(ಜೆ) ಅನ್ವಯ ಕೇಂದ್ರ ಸರ್ಕಾರ ವಿಶೇಷ ಸ್ಥಾನಮಾನ ನೀಡಿ ಐದು ವರ್ಷ ಪೂರ್ಣಗೊಂಡು ಆರನೇ ವರ್ಷಕ್ಕೆ ಕಾಲಿಡುತ್ತಿದ್ದೇವೆ. (ಜನವರಿ 01,2013) ಆದರೆ ಅಭಿವೃದ್ಧಿ ಮಾತ್ರ ಮರೀಚಿಕೆಯಾಗಿದೆ. ಈ ಭಾಗದ ರಾಜಕಾರಣಿಗಳಿಗೆ 371(ಎ) ಕಲಂ ರಾಜಕೀಯ ದಾಳವಾಗಿದೆಯೇ ಹೊರತು ಇದರಲ್ಲಿರುವ ನ್ಯೂನ್ಯತೆಯನ್ನು ಸರಿಪಡಿಸಲು ಮುಂದಾಗುತ್ತಿಲ್ಲ. ಈ ಭಾಗದಲ್ಲಿ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಖಾಲಿ ಇವೆ. ಶಿಕ್ಷಣ ಇನ್ನೂ ಅಭಿವೃದ್ಧಿ ಕಾಣುತ್ತಿಲ್ಲ. ಶಾಲೆ ಬಿಡುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಲೆ ಇದೆ. ಸಹಜವಾಗಿ ಯಾರಿಗೆ ಮೀಸಲಾತಿ? ಎಲ್ಲಿದೆ ಅಭಿವೃದ್ಧಿ ಎಂಬ ಪ್ರಶ್ನೆ ಮೂಡುತ್ತಿದೆ.

ಖಾಲಿ ಖಾಲಿ ಹುದ್ದೆಗಳು

ಆಡಳಿತ ಇಲಾಖೆಯ ವ್ಯಾಪ್ತಿಗೊಳಪಡುವ 12 ಸರ್ಕಾರಿ ಇಲಾಖೆಗಳು ಮತ್ತು ಇವುಗಳ ಅಧೀನದಲ್ಲಿರುವ ನಿಗಮ, ಮಂಡಳಿ, ಪ್ರಾಧಿಕಾರಗಳಲ್ಲಿ ಈ ವರೆಗೂ ಹುದ್ದೆಗಳನ್ನು ಗುರುತಿಸಿ, ಸ್ಥಳೀಯ ವೃಂದ ರಚಿಸಿ ಅಧಿಸೂಚನೆ ಹೊರಡಿಸಿಲ್ಲ. ನೇರ ನೇಮಕಾತಿ ಹುದ್ದೆಗಳ ಪೈಕಿ, 12 ಇಲಾಖೆಗಳಲ್ಲಿ 35 ಸಾವಿರಕ್ಕೂ ಹುದ್ದೆಗಳನ್ನು ಖಾಲಿ ಇವೆ. ಹುದ್ದೆಗಳ ಭರ್ತಿ ಪ್ರಕ್ರಿಯೆಗೆ ಇನ್ನೂ ಚಾಲನೆ ಸಿಕ್ಕಿಲ್ಲ. ಅದೇ ರೀತಿ, ಬಡ್ತಿ ಮೂಲಕ 37 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ತುಂಬಬೇಕಿದೆ.

ಕಳೆದ ಐದು ವರ್ಷಗಳಿಂದಲೂ ಸ್ಥಳೀಯ ವೃಂದ ರಚನೆ ಮಾಡದ ಇಲಾಖೆಗಳ ಪಟ್ಟಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ, ಕೃಷಿ, ಹಿಂದುಳಿದ ವರ್ಗಗಳ ಕಲ್ಯಾಣ, ಉನ್ನತ ಶಿಕ್ಷಣ, ಒಳಾಡಳಿತ ಸಾರಿಗೆ, ಆರೋಗ್ಯ, ಕುಟುಂಬ ಕಲ್ಯಾಣ, ಆರ್.ಡಿ.ಪಿ.ಆರ್, ಕೃಷಿ, ಪ್ರಾಥಮಿಕ, ಪ್ರೌಢಶಿಕ್ಷಣ, ಪಶುಸಂಗೋಪನೆ,, ಮೀನುಗಾರಿಕೆ, ನಗರಾಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿನ ವಿವಿಧ ನಿಗಮ, ಮಂಡಳಿ, ಪ್ರಾಧಿಕಾರ, ಆಯೋಗಗಳು ಇವೆ.

ನೇರ ನೇಮಕಾತಿ ನಡೆಸಬೇಕಿರುವ ಇಲಾಖೆಗಳ ಪೈಕಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯಲ್ಲೇ 6728 ಹುದ್ದೆಗಳು ಭರ್ತಿಯಾಗಬೇಕಿದೆ. ಅದೇ ರೀತಿ, ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆಯಲ್ಲಿ 4780 ಹುದ್ದೆ ಭರ್ತಿಯಾಗಬೇಕಿದೆ. ನಗರಾಭಿವೃದ್ಧಿ ಇಲಾಖೆಯಲ್ಲಿ 4870, ಸಮಾಜ ಕಲ್ಯಾಣ ಇಲಾಖೆಯಲ್ಲಿ 3600 ಹುದ್ದೆಗಳು ಖಾಲಿ ಇವೆ. ಹಾಗೆಯೇ, ಬಡ್ತಿ ಮೂಲಕ ತುಂಬಬೇಕಿರುವ ಇಲಾಖೆಗಳ ಪೈಕಿ ಪ್ರಾಥಮಿಕ, ಪ್ರೌಢಶಿಕ್ಷಣ ಇಲಾಖೆಯೊಂದರಲ್ಲೇ 30,173 ಹುದ್ದೆಗಳಿವೆ.

ಶೇ.80 ಮೀಸಲು ಎಂಬ ಹಗಲುಗನಸು

ಹೈ.ಕ. ವ್ಯಾಪ್ತಿಗೆ ಒಳಪಡುವ ಆರು ಜಿಲ್ಲೆಗಳಲ್ಲಿ ಉದ್ಯೋಗ, ಶಿಕ್ಷಣ ಕ್ಷೇತ್ರಗಳಲ್ಲಿ ಶೇ.80ರಷ್ಟು ಮೀಸಲು ಇದೆ. ಅತಿ ಹಿಂದುಳಿದ ಈ ಜಿಲ್ಲೆಗಳು ಇದರಿಂದ ಅಭಿವೃದ್ಧಿ ಪಥದತ್ತ ಸಾಗುತ್ತಿವೆ. ಇನ್ನು ಹೈ.ಕ. ಜನರಿಗೆ ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಶೇ.8 ರಷ್ಟು ಮೀಸಲು ಇದೆ. ಆದರೆ ಇದರ ಅನ್ವಯ ಉದ್ಯೋಗ ಸಿಕ್ಕಿದೆ ಅಥವಾ ಶಿಕ್ಷಣ ಪಡೆದಿದ್ದೇನೆ ಎಂದು 6 ಜಿಲ್ಲೆಯಲ್ಲಿ ಹುಡುಕಿದರೂ ಯಾರೂ ಸಿಕ್ಕುವುದಿಲ್ಲ.

6 ಜಿಲ್ಲೆಗಳಲ್ಲಿ ಶಿಕ್ಷಣ, ಆರೋಗ್ಯ ಮತ್ತು ಮೂಲ ಸೌಕರ್ಯಗಳ ಅನುಷ್ಠಾನಕ್ಕಾಗಿ ಹೈದ್ರಬಾದ ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸಲಾಗಿದೆ. ಅದಕ್ಕಾಗಿ ಸಾಕಷ್ಟು ಅನುದಾನ ಬರುತ್ತಿದ್ದರೂ ಅದನ್ನು ಸಮರ್ಪಕವಾಗಿ ಬಳಸುವಲ್ಲಿ ರಾಜಕೀಯ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ.

ಕ್ರಿಯೆಯೇ ಇಲ್ಲದ ಕ್ರಿಯಾ ಯೋಜನೆ :

ಸಾವಿರ ಸಾವಿರ ಕೋಟಿ ಹಣ ಬರುತ್ತಿದ್ದರೂ ಈ ಭಾಗ ಅಭಿವೃದ್ಧಿ ಕಾಣುತ್ತಿಲ್ಲ. ಜಿಲ್ಲಾಧಿಕಾರಿಗಳ ನಿರ್ಲಕ್ಷ್ಯ ಇದರಲ್ಲಿ ದೊಡ್ಡದಿದೆ. ಬಹುತೇಕ ಜಿಲ್ಲಾಧಿಕಾರಿಗಳು ಆ ಭಾಗದ ಶಾಸಕರ ಮತ್ತು ಸಚಿವರ ಹಾಗೂ ಲೋಕಸಭಾ ಸದಸ್ಯರ ಕೈಗೊಂಬೆಯಾಗಿದ್ದಾರೆ. ಕ್ರಿಯಾ ಯೋಜನೆ ರಚಿಸಿ ಹೈಕ ಮಂಡಳಿಗೆ ನೀಡಲು ಇವರಿಗೆ ಆಸಕ್ತಿ ಇಲ್ಲ. ಒಂದು ಮಾಹಿತಿಯ ಪ್ರಕಾರ ಕಳೆದ ವರ್ಷ ಉಳಿದ 1000 ಕೋಟಿ ರೂ ಸೇರಿ 2018–19 ನೇ ಸಾಲಿಗೆ ಈ ಕೆಳಗಿನಂತೆ ಹಣ ಬಿಡುಗಡೆಯಾಗಿದೆ. ಬೀದರ 231.17 ಕೋಟಿ ರೂ., ಕಲಬುರ್ಗಿಗೆ 433.67 ಕೋಟಿ ರೂ, ರಾಯಚೂರಿಗೆ 180.99 ಕೋಟಿ ರೂ, 277.76 ಕೋಟಿ ರೂ ಕೊಪ್ಪಳಕ್ಕೆ, ಬಳ್ಳಾರಿ ಜಿಲ್ಲೆಗೆ 256.26 ಕೋಟಿ ರೂ ಹಂಚಿಕೆ ಮಾಡಲಾಗಿದೆ. ಆದರೆ ಇಲ್ಲಿಯ ವರೆಗೆ ಕ್ರಿಯಾಯೋಜನೆ ನೀಡಿಲ್ಲ.



ಮೂಲ ಸೌಲಭ್ಯಗಳ ಕೊರತೆ

ಹೈ.ಕ ಅಭಿವೃದ್ಧಿ ಮಂಡಳಿ ರಚನೆಯಾಗಿದ್ದು ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ, ಶಿಕ್ಷಣ, ಆರೋಗ್ಯದಲ್ಲಿ ಸುಧಾರಣೆಗಳನ್ನು ತರುವುದಕ್ಕಾಗಿ. ಆದರೆ ಇನ್ನೂ ಗ್ರಾಮೀಣ ಪ್ರದೇಶದ ರಸ್ತೆಗಳು ಸುಧಾರಣೆಯಾಗಿಲ್ಲ. ಆರೂ ಜಿಲ್ಲೆಯ ಬಹುತೇಕ ರಸ್ತೆಗಳು ಧೂಳಿನಿಂದ ಕುಡಿವೆ. ಈ ಕಾರಣಕ್ಕಾಗಿ ಅನೇಕ ರೋಗಗಳು ಬರುತ್ತಿವೆ. ಸರಿಯಾಗಿ ಚಿಕಿತ್ಸೆ ಸಿಗದ ಕಾರಣ ಸಣ್ಣವಯಸ್ಸಿನಲ್ಲಿಯೇ ವಿಧವೆ / ವಿಧುರರಾಗುತ್ತಿದ್ದಾರೆ. ಅನೇಕ ಗ್ರಾಮಗಳಲ್ಲಿ ಚರಂಡಿ ವ್ಯವಸ್ಥೆ ಇಲ್ಲ. ಶಾಲೆ, ಕಾಲೇಜು, ಹಾಸ್ಟೇಲ್ ಗಳು ಮೂಲ ಸೌಕರ್ಯಗಳಿಲ್ಲದೆ ಸೊರಗಿ ಹೋಗಿವೆ. ಈ ಸೌಲಭ್ಯವನ್ನು ಜನರಿಗೆ ತಲುಪಿಸಬೇಕಾದ ರಾಜಕಾರಣಿಗಳ ಜೇಬು ತುಂಬಿ ತುಳುಕುತ್ತಿದೆ. ದೊಡ್ಡದೊಡ್ಡದಾದ ಬಂಗಲೆ, ಕಾರು, ಅವರ ಸ್ವಂತದ್ದ ವ್ಯಾಪಾರ ವಹಿವಾಟುಗಳ ಅಭಿವೃದ್ಧಿಗೆ ಉತ್ಸುಕರಾಗಿದ್ದಾರೆ. ಚುನಾವಣೆ ಬಂದಾಗ ಮಾತ್ರ ನೆನಪಾಗುವ 371(ಜೆ) ಕಲಂ ರಾಜಕಾರಣಿಗಳ ಅಸ್ತ್ರದ ಸಂಖ್ಯೆಯಾಗಿದೆ. ಯಾರಿಗೆ ಮೀಸಲಾತಿ? ಎಲ್ಲಿದೆ ಅಭಿವೃದ್ಧಿ ಎಂಬ ಪ್ರಶ್ನೆ ಸಹಜವಾಗಿ ಕಾಡತೊಡಗುತ್ತಿದೆ. ಜನವರಿ 3 ರಂದು ಎಸ್. ಎಫ್.ಐ.ನಿಂದ ಕಲಬುರ್ಗಿಯ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಮಿತಿ ಕಚೇರಿ ಮುಂದೆ ಧರಣಿ ನಡೆಸಲಾಯಿತು.

ಕುವೆಂಪು ವಿ.ವಿ.ಯಲ್ಲಿ ಮಾರ್ಕ್ಸ್ 200–ಕ್ಯಾಪಿಟಲ್ 150

‘ಮಾರ್ಕ್ಸ್‌ವಾದ ವಿಶ್ವದ ದೃಷ್ಟಿಕೋನ, ಎಲ್ಲ ಕಾಲಕ್ಕೂ ಸಲ್ಲುವ ದಾರಿದೀಪ’

ಮಾರ್ಕ್ಸ್ 200–ಕ್ಯಾಪಿಟಲ್ 150 ಆಚರಣೆಯ ಭಾಗವಾಗಿ 'ಸಮಕಾಲೀನ ಸಂದರ್ಭದಲ್ಲಿ ಸಮಾಜ ಮತ್ತು ಸಂಸ್ಕೃತಿ' ಎನ್ನುವ ವಿಷಯದ ಮೇಲೆ ಒಂದು ದಿನದ ವಿಚಾರ ಸಂಕಿರಣವನ್ನು ಶಿವಮೊಗ್ಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಭಾರತಿ, ಸಾಹಿತ್ಯ ಸಮುದಾಯ, ಶಿವಮೊಗ್ಗ, ಮತ್ತು ಕಡೆಕೊಪ್ಪಲ ಪ್ರತಿಷ್ಠಾನ, ಶಿವಮೊಗ್ಗ ಇವರ ಸಂಯುಕ್ತ ಆಶ್ರಯದಲ್ಲಿ ನವೆಂಬರ್ 20ರಂದು ಅದನ್ನು ಸಂಘಟಿಸಲಾಗಿತ್ತು. ಅದರ ಬಗ್ಗೆ ಒಂದು ಕಿರುವರದಿ.

ಪ್ರಭಾಕರನ್ ಕೆ.

ಕಾರ್ಲ್ ಮಾರ್ಕ್ಸ್‌ರವರ ‘ದಾಸ್ ಕ್ಯಾಪಿಟಲ್’ ಮಾತ್ರವೇ ರಾಜಕೀಯ ಅರ್ಥಶಾಸ್ತ್ರದ ಕೊನೆಯ ಮಾತೆಂದು ಯಾವ ಮಾರ್ಕ್ಸ್‌ವಾದಿಯೂ ಹೇಳುವುದಿಲ್ಲ. ಏಕೆಂದರೆ, ಮಾರ್ಕ್ಸ್–ಏಂಗೆಲ್ಸ್‌ರ ನಂತರ ವಿಶ್ವದಲ್ಲಿ ಸಾಕಷ್ಟು ಪರಿವರ್ತನೆಗಳಾಗಿವೆ. ಲೆನಿನ್, ಮಾವೋ, ಹೊಚಿಮಿನ್, ಫಿಡರಲ್ ಕ್ಯಾಸ್ಟ್ರೋ, ಇ.ಎಂ.ಎಸ್. ನಂಬೂದರಿಪಾಡ್, ಬಿ.ಟಿ. ರಣದಿವೆ ಮುಂತಾದವರು ಮಾರ್ಕ್ಸ್‌ವಾದವನ್ನು ಆಯಾಯ ಕಾಲ–ದೇಶಗಳ ಪರಿಸ್ಥಿತಿಗಳಿಗೆ ಅನುಗುಣವಾಗಿ ಮಾರ್ಪಡಿಸಿ ಮುಂದಕ್ಕೆ ಕೊಂಡೊಯ್ದಿದ್ದಾರೆ. ಈ ರೀತಿ ಮಾರ್ಕ್ಸ್‌ವಾದ ಒಂದು ವಿಶ್ವದೃಷ್ಟಿಕೋನವಾಗಿದ್ದು, ಎಲ್ಲ ಕಾಲಕ್ಕೂ ಸಲ್ಲುವ ಒಂದು ದಾರಿದೀಪವೇ ಹೊರತು ಬರೇ ಒಂದು ಡಾಗ್ಮ (Dogma) ಅಲ್ಲ, ಎಂದು "ಸಮಕಾಲೀನ ಸಂದರ್ಭದಲ್ಲಿ ಸಮಾಜ ಮತ್ತು ಸಂಸ್ಕೃತಿ" ವಿಚಾರಸಂಕಿರಣವನ್ನು ಉದ್ಘಾಟಿಸುತ್ತಾ ಹಿರಿಯ ಚಿಂತಕ ಡಾ|. ಜಿ ಭಾಸ್ಕರ ಮಯ್ಯ ಹೇಳಿದರು.

ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಕಬಂಧಬಾಹುಗಳಲ್ಲಿ ನಲುಗುತ್ತಿರುವ ಮೂರನೆಯ ವಿಶ್ವದ ದೇಶಗಳು ತಮ್ಮ ಅಸ್ಮಿತೆಯನ್ನು ಕಳೆದುಕೊಳ್ಳುತ್ತಿವೆ. ಗ್ಯಾಟ್ ಒಪ್ಪಂದದಿಂದಾಗಿ WTO ತನಕ ಬೆಳೆದು ನಿಂತ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ರಾಕ್ಷಸೀಯ ಪ್ರವೃತ್ತಿಯನ್ನು ಡಾ ಮಯ್ಯ ಬಿಡಿಸಿಟ್ಟರು. ಇಂದು ವಿಶ್ವ ಹಣಕಾಸಿನ ದೈತ್ಯರನ್ನು ಎದುರಿಸಲು ಮಾರ್ಕ್ಸ್‌ರವರ "ವಿಶ್ವ ಕಾರ್ಮಿಕರೇ ಒಂದಾಗಿ" ಎಂಬ ಸಂದೇಶದ ಅನಿವಾರ್ಯತೆಯನ್ನು ಅವರು ಸ್ಪಷ್ಟವಾಗಿಯೂ ಮನದಟ್ಟಾಗುವಂತೆಯೂ ವಿವರಿಸಿದರು.

ಸಂಕಿರಣದ ಅಧ್ಯಕ್ಷತೆಯನ್ನು ಪ್ರೊ. ಕೇಶವಶರ್ಮ, ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿ.ವಿ. ಹಾಗೂ ಅಧ್ಯಕ್ಷರು, ಸಾಹಿತ್ಯ ಸಮುದಾಯ, ಶಿವಮೊಗ್ಗ, ಇವರು ವಹಿಸಿದ್ದರು. ಪ್ರೊ. ಶಿವಾನಂದ ಕೆಳಗಿನಮನಿ, ನಿರ್ದೇಶಕರು, ಕನ್ನಡ ಭಾರತಿ, ಕುವೆಂಪು ವಿವಿ, ಇವರು ಮಾರ್ಕ್ಸ್‌ರ ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ. ಮೇಟಿ ಮಲ್ಲಿಕಾರ್ಜುನ ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇವರು ಸಂಕಿರಣದ ಮುನ್ನೋಟದ ಮಾತುಗಳನ್ನು ಆಡಿದರು. ಶ್ರೀ ಲಕ್ಷ್ಮಿನಾರಾಯಣ, ಕಡೆಕೊಪ್ಪಲ ಪ್ರತಿಷ್ಠಾನ, ಶಿವಮೊಗ್ಗ, ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರೊ ಕೇಶವ ಶರ್ಮ, ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿವಿ, ಇವರು ತಮ್ಮ ಅಧ್ಯಕ್ಷೀಯ ಭಾಷಣ ಮಾಡುತ್ತಾ, ಸಮಕಾಲೀನ ಸಂದರ್ಭದಲ್ಲಿ ಮಾರ್ಕ್ಸ್‌ವಾದದ ಅಧ್ಯಯನವು ಬಹಳ ಪ್ರಾಮುಖ್ಯತೆ ಪಡೆದುಕೊಂಡಿದೆ ಎಂದರು. ಜಾಗತೀಕರಣ ಒಂದು ಕಡೆ ಇದ್ದರೆ, ಮತ್ತೊಂದು ಕಡೆಯಲ್ಲಿ ಮೂಲಭೂತವಾದವಿದೆ. ಬಡವರ, ಮಧ್ಯಮ ವರ್ಗಕ್ಕೆ ಸೇರಿದ ಜನಸಾಮಾನ್ಯರ ಪರಿಸ್ಥಿತಿ ಅತ್ಯಂತ ಕಠಿಣವಾಗಿದೆ. ಆದ್ದರಿಂದ ನಮ್ಮ ಗ್ರಹಿಕೆಗಳು ಮತ್ತು ತಾತ್ವಿಕತೆಗಳು ಮಾರ್ಕ್ಸ್‌ವಾದದಿಂದ ರೂಪುಗೊಳ್ಳಬೇಕಾದ ಅನಿವಾರ್ಯತೆಯಿದೆ. ಒಂದು ವೇಳೆ ಹಾಗೆ ರೂಪುಗೊಳ್ಳದೇ ಹೋದರೆ ದುರಂತವು ತಪ್ಪಿದ್ದಲ್ಲ. ನಮ್ಮ ಆಲೋಚನೆಯನ್ನು ಈ ಹಿನ್ನೆಲೆಯಿಂದ ರೂಪಿಸಬೇಕಾಗಿದೆ, ಎಂದು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ತಿಳಿಸಿ ಹೇಳಿದರು.

ಜಾಗತೀಕರಣದಿಂದ ಹೆಚ್ಚುತ್ತಿರುವ ಅಸಮಾನತೆ

ಮೊದಲ ಗೋಷ್ಠಿಯ ಆರಂಭದಲ್ಲಿ ಹೊಸತು ಪತ್ರಿಕೆಯ ಸಂಪಾದಕರಾದ ಡಾ ಸಿದ್ದನಗೌಡ ಪಾಟೀಲರು "ಸಮಕಾಲೀನ ರಾಜಕೀಯ ಪರಿಸ್ಥಿತಿ ಮತ್ತು ಪ್ರಜಾಪ್ರಭುತ್ವದ ನಿರೀಕ್ಷೆಗಳು" ಎನ್ನುವ ವಿಷಯದ ಮೇಲೆ ಮಾತನಾಡುತ್ತಾ ಪ್ರಜಾಪ್ರಭುತ್ವದ ಹೆಸರಿನಲ್ಲಿ ಪ್ರಭುತ್ವವು ಜಾರಿಗೊಳಿಸುತ್ತಿರುವ ಫ್ಯಾಸಿಸ್ಟ್ ಪ್ರವೃತ್ತಿಯ ಬಗ್ಗೆ ಎಚ್ಚರಿಸಿ ಅದರ ವಿರುದ್ಧ ಶಕ್ತವಾಗಿ ಹೋರಾಟವನ್ನು ನೈಜ ಪ್ರಜಾಪ್ರಭುತ್ವವಾದಿಗಳು ನಡೆಸಬೇಕಾಗಿರುವುದರ ಬಗ್ಗೆ ಅರಿವು ಮೂಡಿಸಿದರು.

"ಜಾಗತೀಕರಣ ಮತ್ತು ಪ್ರತಿರೋಧ" ಎನ್ನುವ ಎರಡನೆಯ ವಿಷಯ ಮಂಡನೆ ಮಾಡಿದ ಡಾ ಕೆ. ಪ್ರಕಾಶ್, ಚಿಂತಕರು, ಬೆಂಗಳೂರು, ಇವರು ಮಾತನಾಡುತ್ತಾ, ಜಗತ್ತಿನಾದ್ಯಂತ ಜಾಗತೀಕರಣದ ಪ್ರಭಾವದಿಂದಾಗಿ ಅಸಮಾನತೆ ಹೆಚ್ಚಾಗುತ್ತಿದ್ದು, ಅದಕ್ಕೆ ತೀವ್ರ ಪ್ರತಿರೋಧಗಳೂ ಎದ್ದು ಬರುತ್ತಿರುವುದನ್ನು ಕಾಣಲು ಸಾಧ್ಯವಾಗುತ್ತಿದೆಯೆಂದು ಅಭಿಪ್ರಾಯ ಪಟ್ಟರು. ಇದೀಗ ಶ್ರೀಮಂತರು ಹೆಚ್ಚೆಚ್ಚು ಶ್ರೀಮಂತರಾಗುತ್ತಿದ್ದು ಬಡವರು ಮತ್ತು ಮಧ್ಯಮವರ್ಗದ ಜನರು ಹೆಚ್ಚು ಬಡತನಕ್ಕೆ ನೂಕಲ್ಪಡುತ್ತಿದ್ದು, ಹೆಚ್ಚಿನ ಸಂಕಷ್ಟಗಳನ್ನು ಅನುಭವಿಸುತ್ತಿರುವುದರ ಕಡೆಗೆ ವಿದ್ಯಾರ್ಥಿಗಳ ಗಮನ ಸೆಳೆದರು.



ಜಗತ್ತಿನ 2208 ಡಾಲರು ಬಿಲಿಯಾಧಿಪತಿಗಳು 9.1 ಟ್ರಿಲಿಯನ್ ಡಾಲರ್ಸ್‌ಗಳ, ಅಂದರೆ, 673 ಲಕ್ಷ ಕೋಟಿ ರೂಪಾಯಿಗಳ ಮಾಲೀಕರಾಗಿದ್ದಾರೆ. ಇವರ ಸರಾಸರಿ, 41 ಬಿಲಿಯ ಡಾಲರುಗಳು, ಅಂದರೆ, ತಲಾ ಸರಾಸರಿ 30,340 ಕೋಟಿ ರೂಪಾಯಿಗಳು ಎನ್ನುವ ಅಚ್ಚರಿ ಮೂಡಿಸುವ ವಿವರಗಳ ಕಡೆಗೆ ಬೆಟ್ಟು ಮಾಡಿ ತೋರಿಸಿದರು.

2017ರ ಆಕ್ಸ್‌ಫಾಮ್ ವರದಿಯ ಪ್ರಕಾರ ಜಗತ್ತಿನ ಎಂಟು ಅತಿ ಶ್ರೀಮಂತರ ಹತ್ತಿರ "ಇಡೀ ಮನುಕುಲದ ಅರ್ಧದಷ್ಟು ಬಡವರ 'ಆಸ್ತಿಗೆ ಸಮನಾದಷ್ಟು ಆಸ್ತಿ ಇದೆ ಎನ್ನುವ ಕುತೂಹಲದ ವಿವರವನ್ನು ಬಿಚ್ಚಿಟ್ಟರು. ಹಾಗೆಯೇ, ಭಾರತದ ಶೇಕಡ ಒಂದು ಜನಸಂಖ್ಯೆಯ ಶ್ರೀಮಂತರ ಹತ್ತಿರ ಶೇಕಡ 73ರಷ್ಟು ಸಂಪತ್ತು ಕ್ರೋಢೀಕರಣವಾಗಿರುತ್ತದೆ ಹಾಗೂ 57 ಶ್ರೀಮಂತ ಭಾರತೀಯರ ಸಂಪತ್ತು ದೇಶದ ಶೇಕಡ 70ರಷ್ಟು ಜನರ ಸಂಪತ್ತಿನಷ್ಟಿದೆ, ಎನ್ನುವ ವಾಸ್ತವವನ್ನು ವಿದ್ಯಾಥಿಗಳಿಗೆ ಮನದಟ್ಟು ಮಾಡಿಕೊಟ್ಟರು.

ಜಾಗತೀಕರಣದ ಫಲದ ಬಗ್ಗೆ ಮತ್ತೊಂದು ಅಂಶದ ಕಡೆಗೆ ಗಮನ ಸೆಳೆಯುತ್ತಾ ತಿಳಿಸಿದ್ದೇನೆಂದರೆ, ಐ.ಎಲ್.ಓ ದ ಗ್ಲೋಬಲ್ ವೇಜ್ ರಿಪೋರ್ಟ್ 2016–17ರ ಪ್ರಕಾರ ವೇತನದಲ್ಲಿ ಲಿಂಗ ತಾರತಮ್ಯ ಭಾರತದಲ್ಲಿ ಶೇಕಡ 30ರಷ್ಟು ಹೆಚ್ಚಾಗಿದೆ. ಅತಿಕಡಿಮೆ ಸಂಬಳ ಪಡೆಯುವ ಮಹಿಳೆಯರು ಶೇಕಡ 60ರಷ್ಟಿದ್ದರೆ, ಹೆಚ್ಚಿನ ಸಂಬಳ ಪಡೆಯುವವರು ಕೇವಲ ಶೇಕಡ 15ರಷ್ಟು ಮಾತ್ರ ಇದ್ದಾರೆ, ಎಂದರು.

ಮುಂದುವರಿಯುತ್ತಾ ಅವರು, ದೊಡ್ಡ ಬಂಡವಾಳದಾರರ ಲಾಭದ ಪ್ರಮಾಣ ಹೆಚ್ಚಾಗುತ್ತಾ ಇರುವುದರಿಂದ ಅವರ ಸಂಪತ್ತಿನ ಪ್ರಮಾಣವೂ ಹೆಚ್ಚುತ್ತಲೇ ಇದೆ, ಎಂದರು. ಆದರೆ, ಬಡವರ, ಮಧ್ಯಮ ವರ್ಗದವರ ಶ್ರಮದ ಶೋಷಣೆ ಹೆಚ್ಚಾಗುತ್ತಲೇ ಇದೆ. ಕಾರ್ಪೊರೇಟು ವಲಯಗಳಿಗಾಗಿ ಮತ್ತು ಶ್ರೀಮಂತರಿಗಾಗಿ ಭಾರತವೂ ಸೇರಿದಂತೆ ಎಲ್ಲಾ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಕೆಂಪುಕಂಬಳಿ ಹಾಸಿ ಪ್ರೋತ್ಸಾಹಿಸುತ್ತಾ ಭಾರಿ ತೆರಿಗೆಗಳಲ್ಲಿ, ಅಂದರೆ, ಸುಮಾರು 23.84 ಲಕ್ಷಕೋಟಿಯಷ್ಟು ರಿಯಾಯಿತು ನೀಡಿದೆ. ಆದರೆ ಸಕಾರವು ಭಾರತದ ಬಡ ಕೃಷಿಕರಿಗೆ ಯಾವುದೇ ಇಂತಹ ಆರ್ಥಿಕ ನೆರವು ನೀಡಲು ನಿರಾಕರಿಸುತ್ತಿವೆ.

ಜಾಗತೀಕರಣಕ್ಕೆ ಹೆಚ್ಚುತ್ತಿರುವ ಪ್ರತಿರೋಧ

ಈ ಎಲ್ಲ ಕಾರಣಗಳಿಂದಾಗಿ, ಹೊಸ ಸಾಮಾಜಿಕ ಚಳುವಳಿಗಳು ರೂಪುಗೊಳ್ಳುತ್ತಿರುವುದು ಜಗತ್ತಿನಾದ್ಯಂತದ ವಿದ್ಯಮಾನಗಳಗಳಾಗಿವೆ ಎಂದು ಅವರು ತಿಳಿಸಿದರು. ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಜಾಗತೀಕರಣದ ವಿರುದ್ಧ ಚಳುವಳಿಗಳು ಆರಂಭಗೊಂಡಿದ್ದು, ಸ್ವಾಯತ್ತತೆ, ಪ್ರಜಾಪ್ರಭುತ್ವ, ಶಾಂತಿ, ಪರಿಸರ ಸಂರಕ್ಷಣೆ, ಸಮಾನತೆ, ಸಾಮಾಜಿಕ ನ್ಯಾಯ ಇತ್ಯಾದಿಗಳಿಗೆ ಹೋರಾಟ ನಡೆಯುತ್ತಿರುವದರ ಕಡೆ ಗಮನ ಸೆಳೆದರು.

1990 ರಿಂದಲೂ ಕಾರ್ಪೊರೆಟ್ ಜಾಗತೀಕರಣದ ವಿರುದ್ಧ ಅಂತರಾಷ್ಟ್ರ ಮಟ್ಟದಲ್ಲಿ ಸರಣಿ ಪ್ರತಿಭಟನೆಗಳು ನಡೆಯುತ್ತಿರುವುದನ್ನು ತಿಳಿಸಿ, Battle for Seattle-1999, June 16th. Occupy wall Street, ಮುಂತಾದವುಗಳ ಬಗ್ಗೆ ಮಾಹಿತಿ ಒದಗಿಸಿದರು. ಪ್ರತಿಯೊಂದು ಅಂತರಾಷ್ಟ್ರೀಯ ಸಭೆಗಳು, ಅಂದರೆ, WTO, WET, IMF, G-8 Summit ನಡೆದಾಗಲೂ ಈ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು. ಅಮೇರಿಕಾದಲ್ಲಿ ನಡೆದ 9/11 ಘಟನೆಯ ನಂತರ ಬುಷ್ ಹಾಗೂ ಬ್ಲೇರ್ ಸರ್ಕಾರಗಳ ವಿರುದ್ಧ 2003ರ ಫೆಬ್ರವರಿ 15 ರಂದು ಅರವತ್ತು ದೇಶಗಳಲ್ಲಿ, "ಯುದ್ಧ ವಿರೋಧಿ ಚಳುವಳಿ"ಯನ್ನು ಹಮ್ಮಿಕೊಳ್ಳಲಾಗಿತ್ತು.

ಇವೆಲ್ಲವೂ ಹೊಸ ಚಳುವಳಿಗಳ ಭಾಗವಾಗಿದ್ದು, ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೂಪಗಳನ್ನು ತಳೆದಿದ್ದು, ಮೆಕ್ಸಿಕೊದಲ್ಲಿ ಝಪಾಟಿಸ್ಟ್ ಚಳುವಳಿಯಾಗಿ ಕಾಣಿಸಿಕೊಂಡಿತು. ಆಲ್ಟರ್‌ನೇಟಿವ್ ಗ್ಲೋಬಲೈಸಷನ್, ಗ್ಲೋಬಲ್ ಜಸ್ಟಿಸ್ ಮೂವ್‌ಮೆಂಟ್, ಮೂವ್‌ಮೆಂಟ್ ಆಫ್ ಮೂವ್‌ಮೆಂಟ್ ಮುಂತಾದವುಗಳು ಚಳುವಳಿಗಳ ವಿವಿಧ ರೂಪಗಳೆಂದು ತೋರಿಸಿದರು. ಇವೆಲ್ಲವೂ ಮೂಲತಃ ಜಾಗತೀಕರಣ–ವಿರೋಧದ ಆಧಾರದಲ್ಲಿ ವೈವಿಧ್ಯಮಯವಾದ ಸ್ಥಳಿಯ ಪ್ರತಿರೋಧದ ಚಳುವಳಿಗಳನ್ನು ಒಟ್ಟುಗೂಡಿಸುವ ಪ್ರಯತ್ನಗಳಾಗಿದ್ದು, ಇದರ ಭಾಗವಾಗಿ "ಮತ್ತೊಂದು ಜಗತ್ತು ಸಾಧ್ಯವಿದೆ" ಎನ್ನುವ ವಿಶ್ವ ಸಾಮಾಜಿಕ ವೇದಿಕೆ, 2000ನೇ ಇಸವಿಯಿಂದ ವಿಶ್ವ ಆರ್ಥಿಕ ವೇದಿಕೆಗೆ ಪರ್ಯಾವಾಗಿ ನಡೆಯುತ್ತಿದೆ. ಅಲ್ಲದೆ, ಜಾಗತೀಕರಣಕ್ಕೆ ಪ್ರತಿಗಾಮಿಗಳಿಂದಲೂ ವಿರೋಧವೂ ನಡೆಯುತ್ತಾ ಇದೆ. ಮೂಲಭೂತವಾದ, ಅನ್ಯದ್ವೇಷ, ಫ್ಯಾಸಿಸ್ಟ್ ಗುಂಪುಗಳು ಮುಂತಾದವು ಅವುಗಳಿಗೆ ಉದಾಹರಣೆ.

1990ರ ಸಮಾಜವಾದಿ ಸರಕಾರಗಳ ಪತನದ ನಂತರ ಯುರೋಪಿನಲ್ಲಿ ಫ್ಯಾಸಿಸ್ಟ್ ಗುಂಪುಗಳ, ಉಗ್ರ ರಾಷ್ಟ್ರೀಯವಾದಿಗಳ, ಅನ್ಯದ್ವೇಷದ, ಜೊತೆಗೆ ಎಲ್ಲಾ ಆಧುನಿಕ–ವಿರೋಧಿ ಮೌಲ್ಯಗಳ ಹೆಚ್ಚಳವನ್ನು ವಿಶ್ವದಾದ್ಯಂತ ಕಾಣಬಹುದು, ಎಂದು ಹೇಳುತ್ತಾ ತಮ್ಮ ಮಾತಗಳನ್ನು ಕೊನೆಗಾಣಿಸಿದರು.

ಜಾತಿ ಮತ್ತು ವರ್ಗ ಹೋರಾಟಗಳಲ್ಲಿ ಸಮನ್ವಯ ಸಾಧಿಸಬೇಕು

ಮೊದಲ ಗೋಷ್ಠಿಯ ಸಮನ್ವಯತೆಯನ್ನು ವಹಿಸಿಕೊಂಡಿದ್ದ ಶ್ರೀ ಅವಿನಾಶ್, ಸಹ್ಯಾದ್ರಿ ಕಾಲೇಜು, ಶಿವಮೊಗ್ಗ, ಇವರು ಎರಡೂ ವಿಚಾರಗಳ ಬಗ್ಗೆ ಸಮನ್ವಯದ ಮಾತುಗಳನ್ನಾಡಿದರು.

ಎರಡನೆಯ ಗೋಷ್ಠಿಯಲ್ಲಿ ಭಾಗವಹಿಸಿದ್ದ ಡಾ ಚಲಪತಿ, ಬೆಂಗಳೂರು, ಇವರು 'ಸಮಕಾಲೀನ ವಿಮರ್ಶೆ' ಎನ್ನುವ ವಿಚಾರ ಮಂಡನೆ ಮಾಡುತ್ತಾ ವಿಮರ್ಶಾ ಕ್ಷೇತ್ರದ ಹೊಸ ದೃಷ್ಟಿಕೋನಗಳ ಮೇಲೆ ಬೆಳಕು ಚೆಲ್ಲಿದರು.

'ಅಂಚಿನ ಜನರ ಸಮಸ್ಯೆಗಳು' ಎನ್ನುವ ವಿಚಾರದಲ್ಲಿ ವಿಷಯ ಮಂಡನೆ ಮಾಡಿದ ಶ್ರೀ ಬಿ.ಎಲ್. ರಾಜು, ಪ್ರಾಧ್ಯಾಪಕರು ಇಂದಿರಾಗಾಂಧಿ ಮಹಿಳಾ ಕಾಲೇಜು ಸಾಗರ, ಭಾರತದ ಸಂದರ್ಭದಲ್ಲಿ ವರ್ಗ ಸಮಸ್ಯೆಗಿಂತ ಜಾತಿ ಸಮಸ್ಯೆಯೇ ಮುಂಚೂಣಿಯಲ್ಲಿರುವ ಸಮಸ್ಯೆ ಎಂದು ವಿಶ್ಲೇಷಣೆ ನಡೆಸಿ ಸಾಮಾಜಿಕ ನ್ಯಾಯಕ್ಕಾಗಿ ಡಾ ಅಂಬೇಡ್ಕರ್‌ರವರ ಕೊಡುಗೆಯನ್ನು ಸ್ಮರಿಸಿದರು

ಎರಡನೆಯ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ ಪೂರ್ಣಾನಂದ, ಪತ್ರಿಕೋದ್ಯಮ ವಿಭಾಗ, ಕುವೆಂಪು ವಿ ವಿ, ಇವರು ವಹಿಸಿಕೊಂಡಿದ್ದು, ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಾರ್ಕ್ಸ್‌ರವರು ವಿಶ್ವದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ವಿಶ್ಲೇಷಣೆಗೊಳಪಡಿಸಿದ ಪರಿಯ ಬಗ್ಗೆ ಹಾಗೂ ಸಮಸ್ಯೆಗಳಿಗೆ ಅವರು ಕಂಡುಕೊಂಡ ಪರಿಹಾರದ ಬಗ್ಗೆ ವಿವರಿಸಿದರು.

ಸಮಾರೋಪದಲ್ಲಿ ಪ್ರೊ ಪ್ರಶಾಂತ್ ನಾಯಕ್, ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿವಿ, ಇವರು ಮಾತನಾಡಿ, ಇಂತಹ ವೈಚಾರಿಕ ವಿಚಾರಗೋಷ್ಠಿಗಳಿಂದ ವಿದ್ಯಾರ್ಥಿಗಳು ಹೊರಜಗತ್ತಿಗೆ ತೆರೆದುಕೊಳ್ಳುವುದರ ಕಡೆಗೂ ಅವರ ಅರಿವಿನ ವಿಸ್ತರಣೆಯಾಗುವದರ ಬಗ್ಗೆಯೂ ಗಮನ ಸೆಳೆದರು. ಸಮಾರೋಪದ ಅಧ್ಯಕ್ಷತೆ ವಹಿಸಿದ್ದ ಪ್ರಭಾಕರನ್ ಕೆ, ಸಾಹಿತ್ಯ ಸಮುದಾಯ, ಶಿವಮೊಗ್ಗ, ಇವರು, ಭಾರತದ ಇಂದಿನ ಸಂದರ್ಭಲ್ಲಿ ಜಾತಿ ಮತ್ತು ವರ್ಗ ಹೋರಾಟಗಳಲ್ಲಿ ಸಮನ್ವಯ ಸಾಧಿಸುವುದರ ಅನಿವಾರ್ಯತೆಯ ಕಡೆಗೆ ಗಮನ ಸೆಳೆದು, ಆ ಮೂಲಕ ಸಮಾನತೆಯನ್ನು ಕಾಣಲು ಸಾಧ್ಯ, ಎಂದು ತಿಳಿಸಿದರು. ●

ಬೆಳೆ ವಿಮೆ ಯೋಜನೆ: ರೈತರ ಕಡು ಕಷ್ಟಗಳೆಂದರೆ ವಿಮಾ ಕಂಪೆನಿಗಳಿಗೆ ಹಬ್ಬ!



ರೈತರಿಗೆ ಕೃಷಿಯಲ್ಲಿ ಉಂಟಾದ ನಷ್ಟವನ್ನು ತುಂಬಿಕೊಡುವ ಮುಖ್ಯವಾದ ಹೊಣೆಗಾರಿಯನ್ನು ನೇರವಾಗಿ ನಿರ್ವಹಿಸುವುದು ಇಡೀ ಸಮಾಜದ ಮತ್ತು ಚುನಾಯಿತ ಸರ್ಕಾರದ ಕರ್ತವ್ಯ. ಆದರೆ ಈ ಉದ್ದೇಶಕ್ಕಾಗಿಯೆಂದು ರೂಪಿಸಿರುವ ಪ್ರಧಾನ ಮಂತ್ರಿ ವಿಮಾ ಫಸಲ್ ಯೋಜನೆಯು, ರೈತರು ಬೆವರು ಸುರಿಸಿ ದುಡಿದ ಹಣವನ್ನು ಮತ್ತು ಸಾರ್ವಜನಿಕರಿಕರಿಗೂ ಸೇರಿರುವ ಸರ್ಕಾರದ ಹಣವನ್ನು ಖಾಸಗಿ ವಿಮಾ ಕಂಪೆನಿಗಳಿಗೆ ಹಸ್ತಾಂತರಿಸುವ ಒಂದು ದೊಡ್ಡ ಹಗರಣವಾಗಿ ಪರಿಣಮಿಸಿದೆ. ರೈತರ ಸಂಕಷ್ಟಗಳನ್ನು ಬಳಸಿಕೊಂಡು ನೂರಾರು ಕೋಟಿ ರೂಪಾಯಿಗಳ ಲಾಭ ಮಾಡಿಕೊಳ್ಳಲು ವಿಮಾ ಕಂಪೆನಿಗಳಿಗೆ ಅವಕಾಶ ಕಲ್ಪಿಸಿಕೊಡುವ ದಿಕ್ಕಿನಲ್ಲಿ ಈ ದೇಶವನ್ನು ಕೊಂಡೊಯ್ಯುವುದು ಮೋದಿಯವರ ವಿಚಾರವಾಗಿರಬಹುದು. ಆದರೆ, ಅದು ನ್ಯಾಯಕ್ಕೆ ಮತ್ತು ನೈತಿಕತೆಗೆ ವಿರುದ್ಧವಾಗಿದೆ. ಆದ್ದರಿಂದ, ಪ್ರಧಾನ ಮಂತ್ರಿ ಬಿಮಾ ಫಸಲ್ ಯೋಜನೆಯನ್ನು ತಕ್ಷಣವೇ ರದ್ದುಮಾಡಬೇಕು ಮತ್ತು ಅದರ ಸ್ಥಾನದಲ್ಲಿ ಸರ್ಕಾರವೇ ನೇರವಾಗಿ ಪರಿಹಾರ ಒದಗಿಸುವ ಒಂದು ಸಾರವತ್ತಾದ ವ್ಯವಸ್ಥೆಯನ್ನು ಜಾರಿಗೊಳಿಸಬೇಕು.

ಸುಬೋಧ್ ವರ್ಮ, ಅನು: ಕೆ.ಎಂ.ನಾಗರಾಜ್

ನರೇಂದ್ರ ಮೋದಿ ಸರ್ಕಾರ ಪ್ರಾರಂಭಿಸಿದ ಅಥವಾ ಹಿಂದಿನ ಸರ್ಕಾರದ ಯೋಜನೆಗೇ ಸುಣ್ಣ ಬಣ್ಣ ಬಳಿದು ಅದನ್ನು ತನ್ನದೇ ಯೋಜನೆ ಎಂದು ಬಿಂಬಿಸಿಕೊಂಡ ಯೋಜನೆಗಳ ಪೈಕಿ ಅತಿ ನಂಜಿನಿಂದ ಕೂಡಿರುವ ಯೋಜನೆಯೆಂದರೆ , ಪ್ರಧಾನ ಮಂತ್ರಿ ಬಿಮಾ ಫಸಲ್ ಯೋಜನೆಯೇ. ರೈತರಿಗೆ ಬೆಳೆ ವಿಮೆ ಒದಗಿಸುವುದೇ ಈ ಯೋಜನೆಯ ಉದ್ದೇಶ. ಅಂದರೆ, ಅತಿ ಹೆಚ್ಚು ಮಳೆ ಅಥವಾ ಮಳೆಯೇ ಇಲ್ಲದ ಪರಿಸ್ಥಿತಿಗಳಲ್ಲಿ (ಹವಾಮಾನ ವೈಪರೀತ್ಯ) ಅಥವಾ ನಿವಾರಿಸಲಾಗದ ಪರಿಸ್ಥಿತಿಗಳಲ್ಲಿ ರೈತರಿಗೆ ಉಂಟಾಗುವ ಬೆಳೆ ನಷ್ಟಕ್ಕೆ ವಿಮಾ ಕಂಪೆನಿ ಪರಿಹಾರ ಒದಗಿಸುತ್ತದೆ. ಬೆಳೆ ತೆಗೆಯಲು ಮಳೆಯನ್ನೇ ಪ್ರಧಾನವಾಗಿ ಅವಲಂಬಿಸಿರುವ ನಮ್ಮ ದೇಶದಲ್ಲಿ, ಆಗಾಗ್ಗೆ ಹವಾಮಾನ ವೈಪರೀತ್ಯದಿಂದಾಗಿ ರೈತರಿಗೆ ನಷ್ಟ ಉಂಟಾಗುತ್ತದೆ. ಈ ನಷ್ಟವನ್ನು ಸರ್ಕಾರ ತುಂಬಿಕೊಡುವ ಕ್ರಮ ಅನಿವಾರ್ಯವೂ ಮತ್ತು ಸ್ವಾಗತಾರ್ಹವೂ ಆಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಆದರೆ, ದೊಡ್ಡ ದೊಡ್ಡ ಖಾಸಗಿ ಉದ್ದಿಮೆದಾರರಿಗೆ ಅನುಕೂಲ ಮಾಡಿಕೊಡುವುದನ್ನೇ ಒಂದು ಧ್ಯೇಯುವೆಂದು ನಂಬಿರುರುವ ಮೋದಿ ಸರಕಾರವು, ರೈತರ ಬೆಳೆ ನಷ್ಟವನ್ನೇ ತಮ್ಮ ಲಾಭವಾಗಿ ಮಾರ್ಪಡಿಸಿಕೊಳ್ಳುವ ವಿಮಾ ಕಂಪೆನಿಗಳಿಗೆ ಉತ್ತೇಜನ ಕೊಟ್ಟಿದೆ. ಈ ಖಾಸಗಿ ವಿಮಾ ಕಂಪೆನಿಗಳು ರೂಪಿಸಿರುವ ಬೆಳೆ ವಿಮಾ ಯೋಜನೆ ಮೇಲ್ನೋಟದಲ್ಲಿ ಪ್ರಯೋಜನಕಾರಿಯಾಗಿ ಕಾಣುತ್ತದೆ. ಆದರೆ, ಈ ಯೋಜನೆಯು ರೈತರಿಗೆ ಪ್ರಯೋಜನಕಾರಿಯಾಗಿರುವುದ ಬದಲು, ಖಾಸಗಿ ವಿಮಾ ಕಂಪೆನಿಗಳಿಗೆ ಹೇರಳವಾಗಿ ಲಾಭ ಮಾಡಿಕೊಳ್ಳುವ ಸಾಧನವಾಗಿದೆ. ಖಾಸಗಿ ಕಂಪೆನಿಗಳ ಈ ಲಾಭಕೋರತನವು ಬೆಳೆ ಯೋಜನೆಗೆ ಮಾತ್ರ ಸೀಮಿತವಾಗಿಲ್ಲ. ಜನ ಜೀವನಕ್ಕೆ ಬೇಕಾಗುವ ಎಲ್ಲ ರೀತಿಯ ಸೇವೆಗಳನ್ನು ಒದಗಿಸಲು ಮೋದಿ ಸರ್ಕಾರವು ಖಾಸಗಿ ಕಂಪೆನಿಗಳಿಗೆ ಅನುವುಮಾಡಿಕೊಟ್ಟಿದೆ. ಆರೋಗ್ಯ ರಕ್ಷಣೆಯ ಹೆಸರಿನಲ್ಲಿ 'ಆಯುಷ್ಮಾನ್ ಭಾರತ' ಯೋಜನೆಯಲ್ಲಿ ಲಾಭ ಆಗುತ್ತಿರುವುದು ಇಂತಹ ವಿಮಾ ಕಂಪೆನಿಗಳಿಗೆ. ತಾನು ನಿರ್ವಹಿಸಲೇಬೇಕಾದ ಜವಾಬ್ದಾರಿಯನ್ನು ತ್ಯಜಿಸಿರುವ ಸರ್ಕಾರವು ಅದನ್ನು ಖಾಸಗಿ ಕಂಪೆನಿಗಳಿಗೆ ವಹಿಸುತ್ತಿದೆ. ಹೀಗಾಗಿ, ಅವರು ಲಾಭ ಮಾಡಿಕೊಳ್ಳುತ್ತಿದ್ದಾರೆ. ಅದರ ಬದಲಾಗಿ, ಇಂತಹ ಸೇವೆಗಳನ್ನು ಸರ್ಕಾರವೇ ನೇರವಾಗಿ ಒದಗಿಸಿದರೆ, ರೈತರಿಗೆ ಮತ್ತು ಉಳಿದ ಎಲ್ಲರಿಗೂ ಪ್ರಯೋಜನವಾಗುತ್ತದೆ ಮತ್ತು ಸರ್ಕಾರಕ್ಕೆ ಸಾಕಷ್ಟು ಹಣವೂ ಉಳಿತಾಯವಾಗುತ್ತದೆ.

ಪ್ರಧಾನ ಮಂತ್ರಿ ವಿಮಾ ಫಸಲ್ ಯೋಜನೆಯ ಕಾರ್ಯವೈಖರಿ – ವಿಮಾ ಕಂಪೆನಿಗಳಿಗೆ ಸರ್ಕಾರ 34,859 ರೂ ಕೊಟ್ಟಿದೆ!

ಬೆಳೆ ವಿಮೆ ಪಡೆಯುಲು ರೈತರು ಒಟ್ಟು ಪ್ರೀಮಿಯಂನಲ್ಲಿ (ವಿಮಾ ಕಂತು) ಅದರ 1.5% ನಿಂದ 5% ವರೆಗೆ ಕೊಡುತ್ತಾರೆ. ಉಳಿದ ಭಾಗವನ್ನು ಸಮನಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭರಿಸುತ್ತವೆ. ಹೀಗೆ ಸಂಗ್ರಹಿಸಿದ ಒಟ್ಟು ಪ್ರೀಮಿಯಂ ಹಣದಲ್ಲಿ, ಒಂದು ವೇಳೆ, ಪ್ರಕೃತಿ ವಿಕೋಪದಿಂದಾಗಿ ಬೆಳೆ ನಷ್ಟವಾದರೆ, ವಿಮಾ ಕಂಪೆನಿಗಳು ಆ ನಷ್ಟವನ್ನು ರೈತರಿಗೆ ತುಂಬಿಕೊಡುತ್ತವೆ. ಈ ಪ್ರಧಾನ ಮಂತ್ರಿ ವಿಮಾ ಫಸಲ್ ಯೋಜನೆಯುನ್ನು ಫೆಬ್ರವರಿ 2016ರಲ್ಲಿ ಆರಂಭಿಸಲಾಗಿತ್ತು. ನಂತರ, ಮೂರು ಮುಂಗಾರು ಮತ್ತು ಎರಡು ಹಿಂಗಾರು ಸುಗ್ಗಿಯ ಕಾಲಗಳು ಸಂದಿವೆ. ನಾವೀಗ ಮೂರನೆಯ ಹಿಂಗಾರು ಕಾಲದಲ್ಲಿದ್ದೇವೆ. ಲಭ್ಯವಿರುವ ಮಾಹಿತಿಯ ಪ್ರಕಾರ, 2017ರ ಮುಂಗಾರು ಫಸಲಿನ ಕಾಲದ ವರೆಗೆ ವಿಮಾ ಕಂಪೆನಿಗಳು ಪಡೆದಿರುವ ಪ್ರೀಮಿಯಂ ಹಣ ಎಷ್ಟು ಮತ್ತು ಅವು ರೈತರಿಗೆ ಕೊಟ್ಟಿರುವ ಪರಿಹಾರ ಹಣ ಎಷ್ಟು ಎಂಬ ವಿವರಗಳನ್ನು ಈ ಕೆಳಗಿನ ಕೋಷ್ಟಕ–1ರಲ್ಲಿ ಕೊಡಲಾಗಿದೆ.

ಕೋಷ್ಟಕ–1 (ಕೋಟಿ ರೂಪಾಯಿಗಳಲ್ಲಿ)

ರೈತರ ಪ್ರಿಮಿಯಂ	7255
ಸರ್ಕಾರದ ಸಬ್ಸಿಡಿ	34859
ವಿಮಾ ಕಂಪೆನಿಗಳ ಆದಾಯ	42114
ರೈತರಿಗೆ ಪರಿಹಾರವಾಗಿ ಕೊಟ್ಟದ್ದು	32912
ಖರ್ಚುಗಳು	489
ವಿಮಾ ಕಂಪೆನಿಗಳು ಉಳಿಸಿಕೊಂಡದ್ದು	8713

2016ರ ಮುಂಗಾರು, 2016–17ರ ಹಿಂಗಾರು ಮತ್ತು 2017ರ ಮುಂಗಾರು ಅವಧಿಯಲ್ಲಿ , 18 ವಿಮಾ ಕಂಪೆನಿಗಳು ಸಂಗ್ರಹಿಸಿದ ಪ್ರೀಮಿಯಂನ ಒಟ್ಟು ಮೊತ್ತ 42,114 ಕೋಟಿ ರೂಗಳು. ಅದರಲ್ಲಿ, ರೈತರ ಪ್ರೀಮಿಯಂ 7255 ಕೋಟಿ ರೂ (ಸುಮಾರು17%) ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮನಾಗಿ ಸೇರಿಸಿ ಕೊಟ್ಟ ಸಬ್ಸಿಡಿ 34859 ಕೋಟಿ ರೂಗಳು(83%). ಈ ಒಟ್ಟು ಪ್ರೀಮಿಯಂನ ಹಣದಲ್ಲಿ (42,114 ಕೋಟಿ ರೂಗಳು)18 ವಿಮಾ ಕಂಪೆನಿಗಳು 32912 ಕೋಟಿ ರೂಗಳನ್ನು ರೈತರಿಗೆ ಪರಿಹಾರವಾಗಿ ಕೊಟ್ಟಿವೆ ಮತ್ತು 8713 ಕೋಟಿ ರೂಗಳನ್ನು ಉಳಿಸಿಕೊಂಡಿವೆ. ಹಾಗಾಗಿ ಇದೊಂದು ದೊಡ್ಡ ಹಗರಣವೆಂದೇ ಹೇಳಬಹುದು. ಏಕೆಂದರೆ, ಇದೇ 32912 ಕೋಟಿ ರೂಗಳ ಪರಿಹಾರವನ್ನು ಸರ್ಕಾರವೇ ನೇರವಾಗಿ ರೈತರಿಗೆ ಕೊಡಬಹುದಿತ್ತು ಮತ್ತು ವಿಮಾ ಕಂಪೆನಿಗಳು ಕಬಳಿಸಿರುವ 8713 ಕೋಟಿ ರೂಗಳನ್ನು (ಸುಮಾರು21%) ಸರ್ಕಾರವೇ ಉಳಿಸಿಕೊಳ್ಳಬಹುದಿತ್ತು. ಈ ಹಣ ಕಾರ್ಪಣ್ಯಗಳಿಂದ ನರಳುತ್ತಿರುವ ರೈತರಿಗೆ ಸೇರಿದ್ದು ಅಥವಾ ಜನರಿಂದಲೇ ಪಡೆದ ಹಣ. (ಕೋಷ್ಟಕ–2 ನೋಡಿ)

ಈ ಯೋಜವೆಗೆ ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರವೇ 33,489 ಕೋಟಿ ರೂಗಳನ್ನು ಒದಗಿಸಿದೆ. ಇದು ಪ್ರೀಮಿಯಂ ಬಾಬ್ತು ಹಣವಲ್ಲ. ಈ ಹಣದಲ್ಲಿ, ಸುಮಾರು 21,000 ಕೋಟಿ ರೂಗಳು ಮಾತ್ರ ಪ್ರೀಮಿಯಂ ಬಾಬ್ತು ಹಣ. ಉಳಿದ ಸುಮಾರು 12,000 ಕೋಟಿರೂಗಳಷ್ಟು ಹಣ ಹಿಂದಿನ ವರ್ಷದ ಬಾಕಿ ಮತ್ತು ಇತರ ಆಡಳಿತಾತ್ಮಕ ವೆಚ್ಚಗಳಿಗೆ ಸಂಬಂಧಿಸಿದೆ.

ಒಬ್ಬ ರೈತನಿಗೆ ದೊರೆತ ಸರಾಸರಿ ಪರಿಹಾರ – ಕೇವಲ 11,805 ರೂಗಳು

ಬೆಳೆ ನಷ್ಟವಾದಾಗ ಪರಿಹಾರ ಎಷ್ಟು ಸಿಗುತ್ತದೆ ಎಂಬುದನ್ನು ರಾಜ್ಯ ಸರ್ಕಾರಗಳು ಒಂದು ಸಂಕೀರ್ಣ ಪ್ರಕ್ರಿಯೆಯ ಮೂಲಕ ನಿರ್ಧರಿಸುತ್ತವೆ, ವಿಮಾ ಕಂಪೆನಿಗಳಲ್ಲ. ಈ ಪ್ರಕ್ರಿಯೆಗೆ ತಗಲುವ ವೆಚ್ಚವನ್ನು ಸರ್ಕಾರಗಳು ಭರಿಸುತ್ತವೆ. ಹಾಗಾಗಿ, ವಿಮಾ ಕಂಪೆನಿಗಳ ಲಾಭ ಇನ್ನೂ ಸ್ವಲ್ಪ ಹೆಚ್ಚುತ್ತದೆ. ಬೆಳೆ ನಷ್ಟದ ಪರಿಹಾರ ಎಷ್ಟು ಕೊಡಬೇಕು ಎಂಬುದನ್ನು ನಿರ್ಧರಿಸಲು ದೇಶದ ನಾನಾ ಪ್ರದೇಶಗಳಲ್ಲಿ ಒಂದು ಬೆಳೆ ಕತ್ತರಿಸುವ ಪ್ರಯೋಗ ಮಾಡಲಾಗುತ್ತದೆ. ಒಂದೊಂದು ಸುಗ್ಗಿಯ ಕಾಲದಲ್ಲೂ ಸುಮಾರು 15–20 ಲಕ್ಷ ಇಂತಹ ಬೆಳೆ ಕತ್ತರಿಸುವ ಪ್ರಯೋಗ ಮಾಡಲಾಗುತ್ತದೆ. ಒಂದೊಂದು ಪ್ರಯೋಗದಲ್ಲೂ ಒಂದು ಸ್ಯಾಂಪಲ್ ಹೊಲ ಆಯ್ಕೆ ಮಾಡಿಕೊಂಡು, ಅದರಲ್ಲಿರುವ ಬೆಳೆಯನ್ನು ಕತ್ತರಿಸಿ, ಸ್ಥಳೀಯ ಅಧಿಕಾರಿಗಳು ಮತ್ತು ವಿಮಾ ಕಂಪೆನಿಯ ಪ್ರತಿನಿಧಿಗಳ ಸಮ್ಮುಖದಲ್ಲಿ ಅಳತೆ ಮಾಡಲಾಗುತ್ತದೆ. ಈ ಅಳತೆಯನ್ನು ಹಿಂದಿನ ಏಳು ವರ್ಷಗಳ ಫಸಲಿನೊಂದಿಗೆ ಹೋಲಿಸಿ, ಅದರ ಸರಾಸರಿ ಲೆಕ್ಕ ಹಾಕಿ, ನಷ್ಟ ಎಷ್ಟೆಂಬುದನ್ನು ನಿರ್ಧರಿಸಲಾಗುತ್ತದೆ. ಇಂತಹ ಪ್ರಯೋಗಗಳ ಬಗ್ಗೆ ನಡೆಸಲಾದ ಕೆಲವು ಸಮೀಕ್ಷೆಗಳಿಂದ ಗೊತ್ತಾಗುವುದು ಏನೆಂದರೆ, ಈ ಬೆಳೆ ಕತ್ತರಿಸುವ ಪ್ರಯೋಗದಲ್ಲಿರುವ ಕೆಲವು ನ್ಯೂನತೆಗಳಿಂದಾಗಿ ಮತ್ತು ಓಬಿರಾಯನ ಕಾಲದ ಇಂತಹ ಅಳತೆ ಪದ್ಧತಿಯಿಂದಾಗಿ ರೈತರಿಗೆ ಸಿಗುವ ಪರಿಹಾರ ಕಡಿಮೆಯಾಗುತ್ತದೆ. ಪ್ರಧಾನ ಮಂತ್ರಿ ಬಿಮಾ ಫಸಲ್ ಯೋಜನೆಯ ಮೌಲ್ಯಮಾಪನ ಮಾಡಿರುವ ಅಹಮದಾಬಾದಿನ ಐಐಎಂ ಸಂಸ್ಥೆಯ ಪ್ರಕಾರ, 2016–17 ರಲ್ಲಿ, ಎಲ್ಲ ರಾಜ್ಯಗಳ ಮುಂಗಾರು ಮತ್ತು ಹಿಂಗಾರು ಎರಡೂ ಬೆಳೆಗಳನ್ನು ಪರಿಗಣಿಸಿ, ಒಬ್ಬ ರೈತನಿಗೆ ದೊರೆತ ಬೆಳೆ ನಷ್ಟದ ಸರಾಸರಿ ಪರಿಹಾರ ಕೇವಲ 11,805 ರೂಗಳು.

ಕೋಷ್ಟಕ – 2 (ಕೋಟಿ ರೂಪಾಯಿಗಳಲ್ಲಿ)

ವರ್ಷ	ಯೊಜನೆಗೆ ಒದಗಿಸಿದ ಹಣ
2016–17	11,054.6
2017–18	9,419.8
2018–19	13,014.2
ಒಟ್ಟು	33,488.6

ಪರಿಹಾರ ವಿತರಣೆಯಲ್ಲಿ ವಿಳಂಬ

ಈ ಯೋಜನೆ ಆರಂಭವಾದಾಗಿನಿಂದಲೂ, ಬೆಳೆ ನಷ್ಟಕ್ಕೆ ಸಂಬಂಧಸಿದ ರೈತರ ಆವಾಹಲುಗಳನ್ನು ಸ್ವೀಕರಿಸಿ ಅವುಗಳನ್ನು ಇತ್ಯರ್ಥಗೊಳಿಸುವಲ್ಲಿ ವಿಪರೀತ ವಿಳಂಬವಾಗುತ್ತಿರುವ ಬಗ್ಗೆ ಲೆಕ್ಕವಿಲ್ಲದಷ್ಟು ದೂರುಗಳು ಬಂದಿವೆ. ಪರಿಹಾರ ದೊರೆಯುವಲ್ಲಿ ಮೂರು–ನಾಲ್ಕು ತಿಂಗಳು ತಡವಾಗುವುದು ಸರ್ವೇಸಾಮಾನ್ಯ. ಹಿಂದಿನ ಬೆಳೆ ಕೈಕೊಟ್ಟಿದ್ದರಿಂದ ಅದಾಗಲೇ ನಷ್ಟದಲ್ಲಿರುವ ಮತ್ತು ಮುಂದಿನ ಬೆಳೆಗೆ ಬೇಕಾಗುವ ಬೀಜ ಗೊಬ್ಬರ ಮುಂತಾದ ಅವಶ್ಯಕತೆಗಳಿಗೆ ಹಣ ಹೊಂದಿಸಿಕೊಳ್ಳಲು ಪರದಾಡುತ್ತಿರುವ ರೈತನಿಗೆ ಇಂತಹ ವಿಳಂಬಗಳು ಮಹಾ ದುರಂತವಾಗಿ ಪರಿಣಮಿಸುತ್ತವೆ. ಪರಿಹಾರ ದೊರೆಯುವುದು ಯಾವುದೇ ಕಾರಣದಿಂದ ತಡವಾದರೂ, ಹಣ ಹೊಂದಿಸಿಕೊಳ್ಳಲು ಅನಿವಾರ್ಯವಾಗಿ, ಅತಿ ದುಬಾರಿ ಬಡ್ಡಿಗಾಗಿ ಸಾಲ ಕೊಡುವ ಧನ ಪಿಶಾಚಿಗಳನ್ನೇ ರೈತ ಅವಲಂಬಿಸಬೇಕಾಗುತ್ತದೆ. ಬೆಳೆ ನಷ್ಟದ ಪರಿಹಾರವನ್ನು ತ್ವರಿತವಾಗಿ ಯಾಕೆ ವಿತರಿಸಬೇಕು ಎಂಬುದಕ್ಕೆ ಇದೇ ಖಚಿತವಾದ ಕಾರಣ. ಆದ್ದರಿಂದಲೇ, ಈ ವಿಮಾ ಯೋಜನೆಯು ಬಹಳ ಪ್ರಯೋಜನಕಾರಿ ಎಂಬುದಾಗಿ ಡಂಗುರ ಹೊಡೆಯಲಾಗಿತ್ತು. ಆದರೆ, ಎರಡು ವರ್ಷಗಳ ನಂತರವೂ ಸಮಸ್ಯೆ ಬಗೆಹರಿದಿಲ್ಲ ಎಂಬುದನ್ನು ಅನುಭವಗಳು ಸಾರುತ್ತವೆ.

ಪರಿಹಾರ ವಿತರಿಸುವಲ್ಲಿ ತಡವಾಗುತ್ತಿರುವುದು ಯಾಕೆ? ಈ ಬಗ್ಗೆ ನಡೆಸಿರುವ ಒಂದು ವಿಚಾರಣೆಯ ಪ್ರಕಾರ, ತಡವಾಗುತ್ತಿರುವುದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ, ಬೆಳೆ ಕತ್ತರಿಸುವ ಪ್ರಯೋಗದಲ್ಲಿ ವಿಮಾ ಕಂಪೆನಿಯ ಪ್ರತಿನಿಧಿಯ ಗೈರು ಹಾಜರಿಯೇ ಬಹಳ ಮುಖ್ಯವಾದ ಕಾರಣ. ರೈತನೊಬ್ಬ ಬೆಳೆ ನಷ್ಟದ ಪರಿಹಾರ ಕೋರಿದಾಗ, ತನ್ನ ಪ್ರತಿನಿಧಿಯ ಗೈರು ಹಾಜರಿಯೇ ವಿಮಾ ಕಂಪೆನಿ ಎತ್ತುವ ಮೊದಲನೆಯ ಆಕ್ಷೇಪ. ಕೆಲವೊಮ್ಮೆ ಇದು ಕೋರ್ಟ್ ಕೇಸಿನವರೆಗೂ ಹೋಗುತ್ತದೆ. ನಂತರ, ರಾಜ್ಯ ಸರ್ಕಾರದ ಸಬ್ಸಿಡಿ ವರ್ಗಾವಣೆಯಲ್ಲಿ ವಿಳಂಬವಾಗುತ್ತದೆ. ನಂತರ ಬ್ಯಾಂಕ್ ಮಟ್ಟದಲ್ಲಿ ವಿಳಂಬ. ಈ ಪ್ರಕ್ರಿಯೆಯ ಎಲ್ಲ ಹಂತಗಳಲ್ಲಿ ವಿಮಾ ಕಂಪೆನಿ ತಗಲು ಹಾಕಿಕೊಳ್ಳುವುದರಿಂದಾಗಿಯೇ ಸಮಸ್ಯೆಗಳಾಗುತ್ತಿವೆ ಎಂಬುದು ಸ್ಪಷ್ಟವಾಗುತ್ತದೆ.

ಸರ್ಕಾರದ ನೌಕರಶಾಹಿಯಿಂದಾಗಿ ಪರಿಹಾರ ವಿತರಣೆಯಲ್ಲಿ ತಡವಾಗುತ್ತಿದೆ ಎಂಬ ಮಿಥ್ಯೆಯನ್ನು ಈ ಯೋಜನೆಯ ಅನುಭವಗಳು ಚೂರು ಚೂರು ಮಾಡಿವೆ. ಪರಿಹಾರ ವಿತರಣೆಯಲ್ಲಿ ತಡವಾಗಲು ವಿಮಾ ಕಂಪೆನಿಗಳೇ ಕಾರಣ. ಇದರಲ್ಲಿ ಆಶ್ಚರ್ಯವೇನಿಲ್ಲ. ಅವು ಹುಟ್ಟಿರುವದೇ ಲಾಭಕ್ಕಾಗಿ, ರೈತರ ಕಲ್ಯಾಣಕ್ಕಲ್ಲ. ಹಾಗಾಗಿ, ರೈತರ ನಷ್ಟ ತುಂಬಿಕೊಡುವ ಈ ಪ್ರಕ್ರಿಯೆಯಲ್ಲಿ ಎಷ್ಟು ಸಾಧ್ಯವೋ ಅಷ್ಟು ತಡಮಾಡಲು ಅವು ಪ್ರಯತ್ನಿಸುತ್ತವೆ. ಇಂತಹ ಸ್ವಭಾವ/ಗುಣ ಲಕ್ಷಣಗಳನ್ನು ಜಗತ್ತಿನ ಎಲ್ಲಾ ವಿಮಾ ಕಂಪೆನಿಗಳೂ ಹಂಚಿಕೊಂಡಿವೆ.

ವಿಮಾ ಯೋಜನೆಯ ಬಗ್ಗೆ ರೈತರ ಭ್ರಮನಿರಸನ

ಅತಿ ಕಡಿಮೆ ಪರಿಹಾರ, ಪರಿಹಾರ ವಿತರಣೆಯಲ್ಲಿ ವಿಳಂಬ, ಪರಿಹಾರದ ದಾವೆಗಳ ತಿರಸ್ಕಾರ ಮತ್ತು ಪ್ರೀಮಿಯಂ ಹೆಚ್ಚಳವಾಗುತ್ತಿರುವುದು ಇಂತಹ ಸಮಸ್ಯೆಗಳಿಂದ ಭ್ರಮನಿರಸನಗೊಂಡ ರೈತರು ಪ್ರಧಾನ ಮಂತ್ರಿ ವಿಮಾ ಫಸಲ್ ಯೋಜನೆಯಿಂದ ಹೊರ ಹೋಗುತ್ತಿದ್ದಾರೆ. 2016ರ ಮುಂಗಾರು ಕಾಲದಲ್ಲಿ ಬೆಳೆ ವಿಮೆ ಪಡೆದಿದ್ದ ಸುಮಾರು ನಾಲ್ಕು ಕೋಟಿ ಮಂದಿ ರೈತರ ಸಂಖ್ಯೆಯು 2017ರ ಹಿಂಗಾರು ಕಾಲದ ಹೊತ್ತಿಗೆ 3.47 ಕೋಟಿಗೆ ಇಳಿದಿದೆ. ಈ ವರ್ಷದ ಮುಂಗಾರಿನ ಹೊತ್ತಿಗೆ 3.3 ಕೋಟಿಗೆ ಇಳಿದಿದೆ ಎಂಬುದು ತಾತ್ಕಾಲಿಕ ಅಂದಾಜು. ಮುಂಗಾರು ಕಾಲದ ಎರಡು ವರ್ಷಗಳಲ್ಲಿ, ಸುಮಾರು 70 ಲಕ್ಷ ಮಂದಿ ಯೋಜನೆಯಿಂದ ಹೊರ ಬಂದಿದ್ದಾರೆ.

ಈ ವಿಮಾ ಯೋಜನೆಗೆ ರೈತರನ್ನು ಸೇರಿಸಿಕೊಳ್ಳುವ ಕುತಂತ್ರವನ್ನು ಇಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ಬ್ಯಾಂಕ್‌ನಿಂದ ಸಾಲ ಪಡೆಯುವ ಎಲ್ಲ ರೈತರೂ ಬೆಳೆ ವಿಮೆಯನ್ನು ಕಡ್ಡಾಯವಾಗಿ ಪಡೆಯಬೇಕಾಗುತ್ತದೆ. ಈ ಬಗ್ಗೆ ನೆಡೆಸಿದ ಅಧ್ಯಯನದ ಪ್ರಕಾರ, ಬ್ಯಾಂಕ್ ಸಾಲ ಪಡೆಯುವ ರೈತನಿಂದ ಸಾಲ ವಿತರಿಸುವ ಸಮಯದಲ್ಲಿ ರೈತನ ಒಂದು ಒಪ್ಪಿಗೆ/ಸಮ್ಮತಿ ಪತ್ರಕ್ಕೆ ಬ್ಯಾಂಕ್ ಸಹಿ ಹಾಕಿಸಿಕೊಳ್ಳುತ್ತದೆ. ಹಾಗಾಗಿ, ವಿಮಾ ಯೋಜನೆಗೆ ನೋಂದಣಿಯಾದ ರೈತರ ಸಂಖ್ಯೆಯು (ಕೃತಕವಾಗಿ) ಹೆಚ್ಚಾಗುವಂತೆ ನೋಡಿಕೊಳ್ಳಲಾಗುತ್ತದೆ.

ಬಲವಂತವಾಗಿ ಸೇರಿಸಿಕೊಂಡ ರೈತರು ಕಾಲ ಕ್ರಮದಲ್ಲಿ ಯೋಜನೆಯಿಂದ ಹೊರಗುಳಿಯುತ್ತಾರೆ. ಸಾಲ ವಿತರಣೆಯ ಸಮಯದಲ್ಲಿ ಬೇರೆ ದಾರಿಯೇ ಇಲ್ಲದೆ ರೈತರು ವಿಮಾ ಯೋಜನೆಗೆ ಸೇರಿಕೊಳ್ಳುವ

ಪುಟ 13 ನೋಡಿ

ರೈತರ ಸಾಲಮನ್ನಾಕ್ಕೆ ಕೇರಳದ ಪರ್ಯಾಯದಲ್ಲಿ ಇಡೀ ಭಾರತಕ್ಕೆ ಪಾಠಗಳಿವೆ

ಇದು ಡಿಸೆಂಬರ್ 27ರಂದು livemint.com ನಲ್ಲಿ ಪ್ರಕಟವಾಗಿರುವ ನಿದೀಶ್ ಎಂ.ಕೆ. ಅವರ ಲೇಖನದ ಶಿರೋನಾಮೆ. ರೈತರ ಹೋರಾಟಗಳ ಹಿನ್ನೆಲೆಯಲ್ಲಿ ಬಿಜೆಪಿ ಚುನಾವಣೆಗಳಲ್ಲಿ ಸಾಲುಸಾಲಾಗಿ ಸೋಲುಣ್ಣುತ್ತಿರುವ ಹಿನ್ನೆಲೆಯಲ್ಲಿ ಸಾಲಮನ್ನಾದ ಪರ-ವಿರುದ್ಧ ಚರ್ಚೆಗಳ ಸಂದರ್ಭದಲ್ಲಿ ಗಮನ ಸೆಳೆಯುವ ವಿಷಯವಿದು. 2006ರಲ್ಲಿ ಕೇರಳದ ಎಲ್‌ಡಿಎಫ್ ಸರಕಾರ ಪ್ರಯೋಗಿಸಿದ ಈ ಪರ್ಯಾಯ ದಾರಿಯಿಂದಾಗಿ ಫಲವಾಗಿ ಈ ರಾಜ್ಯದ ಆರ್ಥಿಕವು ವಾಣಿಜ್ಯ ಬೆಳೆಗಳನ್ನೇ ಹೆಚ್ಚಾಗಿ ಅವಲಂಬಿಸಿದ್ದರೂ ರೈತರ ಆತ್ಮಹತ್ಯೆಗಳ ಸುದ್ದಿಗಳು ಬರುತ್ತಿಲ್ಲ. ಎಲ್‌ಡಿಎಫ್ ಸರಕಾರದ ಈ ಪ್ರಯೋಗದ ಸ್ಥೂಲ ಪರಿಚಯ ಮಾಡಿಕೊಡುವ ಈ ಲೇಖನದ ಕನ್ನಡ ಅನುವಾದ 'ವಾರ್ತಾಭಾರತಿ'ಯಲ್ಲೂ ಪ್ರಕಟವಾಗಿದೆ. ನಮ್ಮ ಓದುಗರಿಗಾಗಿ ಇದರ ಆಯ್ದ ಅಂಶಗಳು ಇಲ್ಲಿವೆ:

ಕೇರಳ 2006 ರಲ್ಲೇ ಗಂಭೀರ ಪರಿಸ್ಥಿತಿ ಎದುರಿಸುವಂತಾಗಿತ್ತು. ರಾಜ್ಯದಲ್ಲಿ, ಕೃಷಿ ಕ್ಷೇತ್ರ ಪ್ರಮುಖವಾಗಿ ರಫ್ತು ಗಮನದ ನಗದು ಬೆಳೆಗಳಾದ ರಬ್ಬರ್ ಹಾಗೂ ಕಾಳುಮೆಣಸಿದೇ ಬಿಗಿಹಿಡಿತ. ಆದರೆ ಜಾಗತಿಕ ಮಾರುಕಟ್ಟೆಯಲ್ಲಿ ಇವುಗಳ ಬೆಲೆ ಪಾತಾಳಕ್ಕೆ ಕುಸಿದಿತ್ತು. ಇದು ಸುಸ್ತಿ ಸಾಲ ಹೊಂದಿದ್ದ ಹಲವು ರೈತರ ಆತ್ಮಹತ್ಯೆಗೆ ಕಾರಣವಾಯಿತು.

ಇದು ಸ್ವತಃ ಹೋರಾಟಗಾರರು, ಕಾರ್ಮಿಕಪರ ಹಾಗೂ ಚಾಣಾಕ್ಷ ರಾಜಕಾರಣಿ ವಿ.ಎಸ್. ಅಚ್ಯುತಾನಂದ ನೇತೃತ್ವದ ಕಮ್ಯೂನಿಸ್ಟ್ ಸರ್ಕಾರದ ಹೊಸ ಕಾರ್ಯತಂತ್ರಕ್ಕೆ ಕಾರಣವಾಯಿತು. ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷ ಹುದ್ದೆಗೆ ದೆಹಲಿ ಮೂಲದ ಪ್ರಭಾತ್ ಪಟ್ನಾಯಕ್ ಅವರನ್ನು ಅಚ್ಯುತಾನಂದ ನೇಮಕ ಮಾಡಿದರು. ಕೇರಳ ತಲುಪಿದ ಈ ಎಡಪಂಥೀಯ ಅರ್ಥಶಾಸ್ತ್ರಜ್ಞ "ನಾವು ಏನಾದರೂ ಮಾಡಲೇಬೇಕು" ಎಂಬ ನಿರ್ಧಾರಕ್ಕೆ ಬಂದರು. ಒಂದು ಸಂವಾದದ ವೇಳೆ ಅವರ ಪತ್ನಿ ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞೆ ಉಷಾ ಪಟ್ನಾಯಕ್, ಸ್ವಾತಂತ್ರ್ಯ ಪೂರ್ವ ಕಾಲಘಟ್ಟದ ಮಾದರಿಯೊಂದನ್ನು ಗಮನಕ್ಕೆ ತಂದರು. ಈ ಮಾದರಿ ಸಂಕಷ್ಟದಲ್ಲಿರುವ ರೈತರಿಗೆ ಮಹತ್ವದ ಪರಿಹಾರ ಒದಗಿಸಿತ್ತು. ಸರ್ ಚೋಟು ರಾಮ್ ಆಯೋಗದ ಸದಸ್ಯರು ಪಂಜಾಬ್‌ನಲ್ಲಿ ಗ್ರಾಮ ಗ್ರಾಮಗಳಿಗೆ ಭೇಟಿ ನೀಡಿ, ಸಾಲದ ಬಾಧೆಯಿಂದ ಕಂಗೆಟ್ಟಿದ್ದ ರೈತರಿಂದ ಅರ್ಜಿಗಳನ್ನು ಪಡೆದು ಅವರಿಗೆ ಪರಿಹಾರ ಮಂಜೂರು ಮಾಡಿತ್ತು.

ಬ್ರಿಟಿಷ್ ಅವಧಿಯ ಈ ವಿನೂತನ ಯೋಜನೆಯ ಅಂಶಗಳನ್ನು ಅಧ್ಯಯನ ಮಾಡಿದ ಪಟ್ನಾಯಕ್ ಹಾಗೂ ಇತರರು ಇದನ್ನು ಹೊಸ ಮಾದರಿಯಾಗಿ ಪರಿವರ್ತಿಸಿದರು. ಇದು ಕೇರಳ ರಾಜ್ಯ ರೈತರ ಸಾಲ ಪರಿಹಾರ ಆಯೋಗದ ರಚನೆಗೆ ಕಾರಣವಾಯಿತು. 2007ರ ಜನವರಿಯಲ್ಲಿ ಇದಕ್ಕೆ ಸಂಬಂಧಿಸಿದ ಕಾನೂನು ಜಾರಿಗೆ ಬಂತು.

ಈ ಕೇರಳದ ಪ್ರಾಯೋಗಿಕ ಮಾದರಿ, ದೇಶದಲ್ಲಿ ಹೆಚ್ಚುತ್ತಲೇ ಇರುವ ದೊಡ್ಡ ಮೊತ್ತದ ಸಾಲ ಮನ್ನಾ ಯೋಜನೆಗೆ ಭರವಸೆಯ ಪರ್ಯಾಯ ಕ್ರಮವಾಗಿದೆ. ಕೇರಳ ಉಪಕ್ರಮದಲ್ಲಿ ಏಳು ಮಂದಿ ರೈತರು, ಕಾನೂನು ತಜ್ಞರು, ಕೃಷಿ ಅರ್ಥಶಾಸ್ತ್ರಜ್ಞರು, ರಾಜಕಾರಣಿಗಳಿಂದ ನೇಮಕಗೊಂಡ ಸದಸ್ಯರು ಗ್ರಾಮಗಳಿಂದ ಗ್ರಾಮಗಳಿಗೆ ತೆರಳಿ, ರೈತರ ಜತೆ ಮಾತುಕತೆ ನಡೆಸಿ, ಅವರ ಸಾಲದ ಮಾಹಿತಿಗಳನ್ನು ಪರಿಶೀಲಿಸಿ, ಅವರಿಗೆ ನೀಡುವ ಪರಿಹಾರ ಮೊತ್ತದ ಪ್ರಮಾಣವನ್ನು ನಿರ್ಧರಿಸಿತು.

ಪಟ್ನಾಯಕ್ ಈ ಪರಿಹಾರ ಸೂಚಿಸುವ ವೇಳೆಗೆ ರಾಜ್ಯದಲ್ಲಿ 1500 ಮಂದಿ ಕೃಷಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕೃಷಿಕ ಸಂಘಗಳು ಹೇಳಿದ್ದವು. ಆದರೆ ಅಧಿಕೃತ ಅಂಕಿ ಸಂಖ್ಯೆ ಇದಕ್ಕಿಂತ ತೀರಾ ಕಡಿಮೆ ಇತ್ತು. ಇಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಪ್ರಮಾಣ ಮಹಾರಾಷ್ಟ್ರದ ವಿದರ್ಭ ಪ್ರದೇಶಕ್ಕೆ ಹೋಲಿಸಿದರೆ ಕಡಿಮೆ. ಆದರೆ ಇಷ್ಟಾಗಿಯೂ ಈ ಸಂಖ್ಯೆ ದೊಡ್ಡ ಪ್ರಮಾಣದಲ್ಲಿತ್ತು.

ಸಾಲ ಪರಿಹಾರ ಆಯೋಗವನ್ನು ನೇಮಿಸಿದ ತಕ್ಷಣ, ಕೇಂದ್ರ ಕಛೇರಿ ತಿರುವನಂತಪುರದಲ್ಲಿ 25 ಕ್ಕೂ ಹೆಚ್ಚು ಮಂದಿ ಸಿಬ್ಬಂದಿ ಪರಿಹಾರ ಕೋರಿ ಸಲ್ಲಿಸಿದ ಅರ್ಜಿಯ ವಿಲೇವಾರಿ ಮಾಡುವಲ್ಲಿ ನಿರತರಾದರು. ಎರಡು ವರ್ಷಗಳ ಒಳಗಾಗಿ, ರೈತರ ಆತ್ಮಹತ್ಯೆ ಗಣನೀಯವಾಗಿ ಇಳಿಯಿತು. ಇದಾಗಿ 11 ವರ್ಷ ಕಳೆದಿದ್ದು, ಸಮಸ್ಯೆ ಮಾಯವಾಗಿದೆ.

ನಿರಂತರ ತೊಡಗಿಸಿಕೊಳ್ಳುವಿಕೆ ಯುಪಿಎ ಸರ್ಕಾರ 2008ರಲ್ಲಿ ಘೋಷಿಸಿದ ದೊಡ್ಡ ಮೊತ್ತದ ಸಾಲಮನ್ನಾ ಪ್ಯಾಕೇಜ್ ಹಾಗೂ ರಾಜ್ಯಮಟ್ಟದಲ್ಲಿ ಕೈಗೊಂಡ ಕ್ರಮಗಳು ಪ್ರಮುಖ ಪಾತ್ರ ವಹಿಸಿದ್ದರೂ, ಇದರ ಯಶಸ್ವಿನ ಕೀರ್ತಿ ಭಾಗಶಃ ಆಯೋಗಕ್ಕೆ ಸಲ್ಲಬೇಕು.

ಆಯೋಗ ನೀಡಿದ್ದು ಬೇಷರತ್ ಪರಿಹಾರವನ್ನಲ್ಲ. ಇದು ಸಹಕಾರ ಸಂಸ್ಥೆಗಳಿಂದ ಪಡೆದ ಸಾಲವಾಗಿರಬೇಕು. ಸಾಮಾನ್ಯವಾಗಿ ರೈತರಿಗೆ ದೊಡ್ಡ ಮೊತ್ತದ ಸಾಲವನ್ನು ಸಹಕಾರ ಸಂಸ್ಥೆಗಳು ನೀಡುತ್ತವೆ. ಅರ್ಜಿದಾರರು ಸಣ್ಣ ಅಥವಾ ಅತಿಸಣ್ಣ ರೈತರಾಗಿರಬೇಕು. ಅಂದರೆ ಐದು ಎಕರೆಗಿಂತ ಕಡಿಮೆ ಜಮೀನಿನ ಮಾಲೀಕನಾಗಿರಬೇಕು ಅಥವಾ ಐದು ಎಕರೆಗಿಂತ ಕಡಿಮೆ ಜಮೀನನ್ನು ಕೃಷಿ ಉದ್ದೇಶಕ್ಕಾಗಿ ಭೋಗ್ಯಕ್ಕೆ ಪಡೆದಿರಬೇಕು. ಅರ್ಜಿದಾರನ ವಾರ್ಷಿಕ ಆದಾಯ 2 ಲಕ್ಷ ರೂಪಾಯಿಗಿಂತ ಅಧಿಕ ಇರಬಾರದು ಎಂಬ ಷರತ್ತು ವಿಧಿಸಲಾಗಿತ್ತು. ಆಯೋಗ ಹಲವು ತಿಂಗಳ ಕಾಲ ಹಲವು ದಿನಗಳನ್ನು ಗ್ರಾಮಗಳಲ್ಲಿ ಕಳೆಯಿತು. ಆ ಒಂದು ವರ್ಷದಲ್ಲೇ 11354 ರೈತರು ಫಲಾನುಭವಿಗಳಾಗಿ ಇದರ ಪ್ರಯೋಜನ ಪಡೆದರು ಹಾಗೂ 11 ಸಾವಿರ ಕೋಟಿ ರೂಪಾಯಿ ಮೊತ್ತದ ಪರಿಹಾರ ಲಭ್ಯವಾಯಿತು.

ದೊಡ್ಡ ರಾಜ್ಯಗಳಿಗೆ ಹೋಲಿಸಿದರೆ ಇದು ಸೀಮಿತ ವ್ಯವಸ್ಥೆಯಾಗಿದ್ದು, ಅವುಗಳ ನಿರೀಕ್ಷೆಗೆ ಹೋಲಿಸಿದರೆ ಇದು ತೀರಾ ಕಡಿಮೆ ಇರಬಹುದು. ....

ಆಯೋಗದ ಸದಸ್ಯ ಮತ್ತು ಕೃಷಿ ತಜ್ಞ ಜೆ. ಜನಾರ್ಧನನ್ ಹೇಳುವಂತೆ ......"ಆದಾಗದಯೂ ಈ ಮಾದರಿ, ದೇಶಾದ್ಯಂತ ವಿಸ್ತರಿಸಬಹುದಾದ ಉತ್ತಮ ಮಾದರಿ".

ಈ ವರ್ಷದ ಆರಂಭದಲ್ಲಿ ರಾಜಸ್ಥಾನದಿಂದ ಆಗಮಿಸಿದ ತಂಡ ಕೇರಳ ಪ್ರವಾಸ ಕೈಗೊಂಡು, ಸಾಲ ಮನ್ನಾ ಘೋಷಣೆಗೆ ಮುನ್ನ ಈ ಮಾದರಿಯನ್ನು ಅಧ್ಯಯನ ಮಾಡಿತ್ತು.

"ಸಾರಾಸಗಟಾಗಿ ಸಾಲ ಮನ್ನಾ ಮಾಡುವ ಬದಲು, ಇದು ನಿರಂತರ ಚಟುವಟಿಕೆ, ವರ್ಷವಿಡೀ ಒಬ್ಬರಲ್ಲದಿದ್ದರೆ ಒಬ್ಬರು ರೈತರ ಜತೆ ಸಂವಾದ ನಡೆಸುತ್ತಾರೆ ಹಾಗೂ ಅವರು ಎಂಥ ಕಷ್ಟದಲ್ಲಿದ್ದಾರೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ರಾಜ್ಯ ಇವರಿಗೆ ಹೇಗೆ ನೆರವಾಗಬಹುದು ಎಂದು ಯೋಚಿಸುತ್ತಾರೆ" ಎಂದು ಜನಾರ್ದನನ್ ಹೇಳುತ್ತಾರೆ. "ಈ ಸಭೆಗಳು ಅನೌಪಚಾರಿಕವಾಗಿರುತ್ತವೆ. ನಾವು ನಮ್ಮ ಕಾರ್ಯಸೂಚಿಯನ್ನು ಮೀರಿ, ರೈತರಿಗೆ ಆಗಿರುವ ಸಾಲ ಹೆಣ್ಣುಮಕ್ಕಳ ಶಿಕ್ಷಣ ಅಥವಾ ವೈದ್ಯಕೀಯ ವೆಚ್ಚದ ಕಾರಣದಿಂದ ಆಗಿದ್ದರೂ, ರೈತರಿಗೆ ಸೂಕ್ತ ಸಲಹೆಗಳನ್ನೂ ನೀಡುತ್ತೇವೆ. ಎಷ್ಟೋ ಮಂದಿಗೆ ಅವರಿಗೆ ಯಾವೆಲ್ಲ ಸವಲತ್ತುಗಳು ಲಭ್ಯ ಇವೆ ಎಂಬ ಮಾಹಿತಿಯೂ ಇಲ್ಲ. ಉದಾಹರಣೆಗೆ ನೈಸರ್ಗಿಕ ವಿಕೋಪದಿಂದ ಬೆಳೆ ಹಾನಿಯಾಗಿದ್ದರೂ, ಅದಕ್ಕೆ ಯಾವ ಪರಿಹಾರ ಸಿಗುಸತ್ತದೆ ಎಂಬ ಕಲ್ಪನೆ ಇಲ್ಲ. ಇಂಥ ಪ್ರಕರಣಗಳಲ್ಲಿ ನಾವು ಅವರಿಗೆ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದೇವೆ" ಎಂದು ವಿವರಿಸುತ್ತಾರೆ.

ಕೊಲ್ಲಂ ಜಿಲ್ಲೆಯಲ್ಲಿ ಸುಮಾರು 30 ವರ್ಷಗಳಿಂದ ಅರ್ಬನ್ ಕೋ ಅಪರೇಟಿವ್ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಕೆ.ಆರ್. ಚಂದ್ರಮೋಹನ್ ಹೇಳುವಂತೆ, "ಪ್ರಾಯೋಗಿಕವಾಗಿ ಸಾಲ ಪರಿಹಾರ ಆಯೋಗ, ಬ್ಯಾಂಕ್‌ಗಳ ಸಾಲ ಪರಿಹಾ ಆಯೋಗವಾಗಿಯೂ ಕಾರ್ಯನಿರ್ವಹಿಸುತ್ತದೆ". "ಪ್ರತಿ ಸಹಕಾರ ಬ್ಯಾಂಕ್‌ಗಳಲ್ಲಿ ದೊಡ್ಡ ಮೊತ್ತದ ಸುಸ್ತಿದಾರರಿರುತ್ತಾರೆ. ರೈತರು ಹಾಗೂ ಸಾಲದಾತರ ನಡುವಿನ ಸಂಧಾನ ಮಾತುಕತೆಗಳಿಗೆ ಸರ್ಕಾರ ಮಧ್ಯವರ್ತಿಯಾಗಿ ಸಹಕರಿಸಿ, ಅನುತ್ಪಾದಕ ಆಸ್ತಿಯ ಸಮಸ್ಯೆ ನಿವಾರಿಸಲು ನೆರವಾಗುತ್ತದೆ".

ಇದು ದೇಶಾದ್ಯಂತ ವಿಸ್ತರಿಸಬಹುದಾದ ಉತ್ತಮ ಮಾದರಿ ಎನ್ನುವುದು ಪಟ್ನಾಯಕ್ ಅವರ ಅಭಿಮತ. "ಇದರ ಪ್ರಮುಖ ಅಂಶವೇ ರೈತರತ್ತ ನೋಡುವುದು. ಕೃಷಿ ಎನ್ನುವುದು ರೈತರ ಜೀವನಾಧಾರ. ಅವರಿಗೆ ಸಾಕಷ್ಟು ಸೌಲಭ್ಯ ಕಲ್ಪಿಸದಿದ್ದರೆ, ಅವರು ತಮ್ಮ ಮಕ್ಕಳನ್ನು ಆಸ್ಪತ್ರೆಗೆ ಕರೆದೊಯ್ಯುವ ಸ್ಥಿತಿಯಲ್ಲೂ ಇಲ್ಲ" ಎಂದು ಅವರು ಸ್ಪಷ್ಟಪಡಿಸುತ್ತಾರೆ.

ಈ ಸಾಲ ಪರಿಹಾರ ಆಯೋಗವು ಬಸವನಹುಳು ವೇಗದಲ್ಲಿ ಕಾರ್ಯನಿರ್ವಹಿಸಿದರೂ, ಬಹುತೇಕ ರೈತರಿಗೆ ಪ್ರಯೋಜನ ಒದಗಿಸಿದೆ ಎನ್ನುವುದು ಪಾಲಕ್ಕಾಡ್ ಜಿಲ್ಲೆಯ ಭತ್ತ ಬೆಳೆಗಾರ ಪಿ.ವಿ. ರಾಜಪ್ಪನ್ ಅವರ ಸ್ಪಷ್ಟ ಅಭಿಪ್ರಾಯ. 2008 ರ ತೀವ್ರ ಬರಗಾಲದಿಂದ ಕಂಗೆಟ್ಟಿದ್ದ ರಾಜಪ್ಪನ್, ಈ ಕಾರಣದಿಂದಾಗಿ ಸಹಕಾರ ಬ್ಯಾಂಕ್‌ಗೆ 50 ಸಾವಿರ ರೂಪಾಯಿ ಸುಸ್ತಿ ಬಾಕಿ ಉಳಿಸಿಕೊಳ್ಳಬೇಕಾಯಿತು.

"ಮೂವರು ರೈತರು ಸೇರಿ ಸಾಲ ಪಡೆದಿದ್ದೆವು. ಆದರೆ ಬರಗಾಲದಿಂದ ನಾವು ಮರುಪಾವತಿಸಲು ಸಾಧ್ಯವಾಗಲಿಲ್ಲ. ಬಾಕಿ ಮೊತ್ತವೂ ಸೇರಿಕೊಂಡು ಇದು ಕ್ರಮೇಣ 80 ಸಾವಿರ ರೂಪಾಯಿಗೆ ಹೆಚ್ಚಿತು. ಆ ವೇಳೆಗೆ ನಮಗೆ ಆಯೋಗದ ಬಗ್ಗೆ ತಿಳಿಯಿತು. "ಒಂದು ಸಭೆಯಲ್ಲಿ ಆಯೋಗದ ಮುಂದೆ ನಾವು ಮನವಿ ಸಲ್ಲಿಸಿದೆವು. ಇದರಿಂದಾಗಿ ಬ್ಯಾಂಕ್‌ನ ಸುಸ್ತಿವಸೂಲಿ ಪ್ರಕ್ರಿಯೆ ಸ್ಥಗಿತಗೊಂಡಿತು... ಎರಡು ತಿಂಗಳ ಹಿಂದಷ್ಟೇ "ನಿಮ್ಮ ಎಲ್ಲ ಸಾಲ ಮನ್ನಾ ಮಾಡಲಾಗಿದೆ" ಎಂಬ ಪತ್ರ ಸಿಕ್ಕಿದೆ ಎಂದು ವಿವರಿಸುತ್ತಾರೆ.

ಮನ್ನಾ ಮಾಡಿರುವುದು ಸಣ್ಣ ಮೊತ್ತವಾದರೂ, ಅದು ರೈತರಿಗೆ ದೊಡ್ಡ ಪ್ರಯೋಜನ ಒದಗಿಸಿದೆ. ಈ ಪ್ರಕ್ರಿಯೆ ವೇಗ ಪಡೆಯಬೇಕು ಎನ್ನುವುದಷ್ಟೇ ನನ್ನ ಬಯಕೆ ಎಂದು ರಾಜಪ್ಪನ್ ಹೇಳುತ್ತಾರೆ.

ಕೃಪೆ: livemint ಮತ್ತು 'ವಾರ್ತಾಭಾರತಿ'

ಬೆಳೆ ವಿಮೆ ಯೋಜನೆ:

ಪುಟ 12 ರಿಂದ

ಒಪ್ಪಿಗೆ/ಸಮ್ಮತಿ ಪತ್ರಕ್ಕೆ ಸಹಿ ಹಾಕಿರುತ್ತಾರೆ. ನಂತರ, ವಿಮಾ ಕಂತನ್ನು ಕಟ್ಟುವುದಿಲ್ಲ. ಆದ್ದರಿಂದ ಹೊರಗುಳಿಯುತ್ತಾರೆ. ಅಲ್ಲದೆ, ಬ್ಯಾಂಕಿಂಗ್ ವ್ಯವಸ್ಥೆಯೇ ಬಿಕ್ಕಟ್ಟಿನಲ್ಲಿರುವಾಗ ರೈತರಿಗೆ ಸಾಲದ ಲಭ್ಯತೆಯೂ ಕಡಿಮೆಯಾಗುತ್ತದೆ. ಜೊತೆಯಲ್ಲಿ ರೈತ ಸಾಲಗಾರರ ಸಂಖ್ಯೆಯೂ ಇಳಿಯುತ್ತದೆ, ಹಾಗಾಗಿ, ಬೆಳೆ ವಿಮೆ ಪಡೆಯುವ ಒಟ್ಟು ರೈತರ ಸಂಖ್ಯೆಯೂ ಇಳಿಯುತ್ತಿದೆ.

ಮಾಡಬೇಕಿರುವುದು ಏನು?

ಪ್ರಧಾನ ಮಂತ್ರಿ ವಿಮಾ ಫಸಲ್ ಯೋಜನೆಯು, ರೈತರು ಬೆವರು ಸುರಿಸಿ ದುಡಿದ ಹಣವನ್ನು ಮತ್ತು ಸರ್ಕಾರದ ಹಣವನ್ನು (ಇದು ಸಾರ್ವಜನಿಕರಿಗೆ ಸೇರಿದ್ದೂ ಹೌದು) ಸೆಳೆದು ಅದನ್ನು ಖಾಸಗಿ ವಿಮಾ ಕಂಪೆನಿಗಳಿಗೆ ಹಸ್ತಾಂತರಿಸುವ ಒಂದು ದೊಡ್ಡ ಪಿತೂರಿಯಾಗಿ ಪರಿಣಮಿಸಿದೆ. ಮುಂಗಾರು ಮಳೆ ವಿಫಲವಾದಾಗ ಅಥವಾ ಹೆಚ್ಚು ಮಳೆ ಸುರಿದಾಗ ಅಥವಾ ಕ್ರಿಮಿ ಕೀಟಗಳ ಬಾಧೆಯಿಂದ ರೈತರ ಫಸಲು ಹಾನಿಗೊಳಗಾದಾಗ, ನ್ಯಾಯವಾದ ಪ್ರಮಾಣದಲ್ಲಿ ಪರಿಹಾರ ಒದಗಿಸುವಲ್ಲಿ ಈ ವಿಮಾ ಯೋಜನೆ ವಿಫಲವಾಗಿದೆ. ಇಂತಹ ಕಾರಣಗಳಿಂದ ರೈತರಿಗೆ ಉಂಟಾದ ನಷ್ಟವನ್ನು ತುಂಬಿಕೊಡುವ ಮುಖ್ಯವಾದ ಹೊಣೆಗಾರಿಯನ್ನು ನೇರವಾಗಿ ನಿರ್ವಹಿಸುವುದು ಇಡೀ ಸಮಾಜದ ಮತ್ತು ಚುನಾಯಿತ ಸರ್ಕಾರದ ಕರ್ತವ್ಯವಾಗುತ್ತದೆ.

ರೈತರ ಸಂಕಷ್ಟಗಳನ್ನು ಬಳಸಿಕೊಂಡು ನೂರಾರು ಕೋಟಿ ರೂಪಾಯಿಗಳ ಲಾಭ ಮಾಡಿಕೊಳ್ಳಲು ವಿಮಾ ಕಂಪೆನಿಗಳಿಗೆ ಅವಕಾಶ ಕಲ್ಪಿಸಿಕೊಡುವ ದಿಕ್ಕಿನಲ್ಲಿ ಈ ದೇಶವನ್ನು ಕೊಂಡೊಯ್ಯುವುದು ಮೋದಿಯವರ ವಿಚಾರವಾಗಿರಬಹುದು. ಆದರೆ, ಅದು ನ್ಯಾಯಕ್ಕೆ ಮತ್ತು ನೈತಿಕತೆಗೆ ವಿರುದ್ಧವಾಗಿದೆ. ಆದ್ದರಿಂದ, ಪ್ರಧಾನ ಮಂತ್ರಿ ಬಿಮಾ ಫಸಲ್ ಯೋಜನೆಯನ್ನು ತಕ್ಷಣವೇ ರದ್ದುಮಾಡಬೇಕು ಮತ್ತು ಅದರ ಸ್ಥಾನದಲ್ಲಿ ಸರ್ಕಾರವೇ ನೇರವಾಗಿ ಪರಿಹಾರ ಒದಗಿಸುವ ಒಂದು ಸಾರವತ್ತಾದ ವ್ಯವಸ್ಥೆಯನ್ನು ಜಾರಿಗೊಳಿಸಬೇಕು.

ಧೈರ್ಯ-ಸ್ಥೈರ್ಯಗಳ ಪ್ರತೀಕವಾಗಿದ್ದ ಸೈಮನ್ ಬ್ರಿಟ್ಟೊ



ಕೇರಳದ ಒಬ್ಬ ಸಿಪಿಐ(ಎಂ) ಮುಖಂಡ ಸೈಮನ್ ಬ್ರಿಟ್ಟೊ ಡಿಸೆಂಬರ್ 31 ರಂದು ಹೃದಯಾಘಾತದಿಂದ ನಿಧನರಾದರು. 34 ವರ್ಷಗಳ ಹಿಂದೆ, 1984ರಲ್ಲಿ ಕೇರಳದ ಎಸ್‌ಎಫ್‌ಐ ಘಟಕದ ಉಪಾಧ್ಯಕ್ಷರಾಗಿ ವಿದ್ಯಾರ್ಥಿ ಆಂದೋಲನಕ್ಕೆ ನೇತೃತ್ವ ನೀಡುತ್ತಿದ್ದಾಗ, ಆಗ 30 ವರ್ಷದ ಇವರ ಮೇಲೆ ಕೆಎಸ್‌ಯು(ಐ) ಗೂಂಡಾಗಳು ಮಾರಣಾಂತಿಕ ಹಲ್ಲೆ ನಡೆಸಿ ಸತ್ತರೆಂದೇ ಭಾವಿಸಿ ಹೊರಟು ಹೋಗಿದ್ದರು. ಆ ಹಲ್ಲೆಯಲ್ಲಿ ಗೂಂಡಾಗಳ ನಾಲ್ಕು ಇರಿತಗಳು ಅವರ ಹೃದಯ, ಪಿತ್ತಕೋಶ, ಶ್ವಾಸಕೋಶ ಮತ್ತು ಬೆನ್ನುಹುರಿಯನ್ನು ತೀವ್ರವಾಗಿ ಹಾಳುಗೆಡವಿದ್ದವು. ಆದರೂ ಬದುಕುಳಿದ ಅವರು ಧೃತಿಗೆಡದೆ ಇನ್ನೂ 34 ವರ್ಷ ಘನತೆಯ ಜೀವನ ನಡೆಸಿದರು. ಪಾರ್ಶ್ವವಾಯುವಿನಿಂದಾಗಿ ಅವರು ನಡೆದಾಡಲು ಸಾಧ್ಯವಾಗದಿದ್ದರೂ ಹಲವು ರೀತಿಗಳಲ್ಲಿ ಪ್ರಜಾಪ್ರಭುತ್ವ ಆಂದೋಲನಕ್ಕೆ ಸೇವೆ ಸಲ್ಲಿಸಿದ ಅದಮ್ಯ ಚೇತನ ಅವರದ್ದು.

ಮೂರು ಕಾದಂಬರಿಗಳು ಮತ್ತು ಹಲವಾರು ಲೇಖನಗಳ ಕರ್ತೃವಾದ ಇವರ ಮೊದಲ ಕಾದಂಬರಿ 'ಅಗ್ರಾಮಿ' ಕೇರಳ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಗಳಿಸಿದೆ. ಇವರು 12ನೇ ಕೇರಳ ವಿಧಾನ ಸಭೆಗೆ ಆಂಗ್ಲೋ-ಇಂಡಿಯನ್ ಸಮುದಾಯದ ಪ್ರತಿನಿಧಿಯಾಗಿ ನೇಮಕಗೊಂಡಿದ್ದರು. ಕೇರಳ ಗ್ರಂಥಾಲಯ ಮಂಡಳಿಯ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಅವರ ಧೈರ್ಯ ಮತ್ತು ದೃಢತೆಗಳು ಈಗಿನ ತಲೆಮಾರಿನವರು ಅನುಸರಿಸಬೇಕಾದ ಆದರ್ಶಗಳು, ಅವರ ಬದುಕು ಸ್ಫೂರ್ತಿದಾಯಕವಾಗಿತ್ತು ಎಂದು ಹೇಳಿದ್ದಾರೆ

ರಾಜ್ಯಗಳ ಸುತ್ತ

ಮಹಾರಾಷ್ಟ್ರದಲ್ಲಿ ದಮನದ ಬಲೆಯನ್ನು ವಿಸ್ತರಿಸಲು ಬಿಜೆಪಿ ಸರಕಾರದ ಪ್ರಯತ್ನ: ಸಿಪಿಐ(ಎಂ) ಖಂಡನೆ

ಮಹಾರಾಷ್ಟ್ರದಲ್ಲಿ ಮುಂಭಯ ಮತ್ತು ಪುಣೆಯಲ್ಲಿ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಲು ಮುಂಬೈರಗೆ ಬಂದ ಭೀಮ್ ಆರ್ಮಿಕಯ ಮುಖ್ಯಸ್ಥರಾದ ಚಂದ್ರಶೇಖರ ಆಝಾದ್‌ರವರ ಮೇಲೆ ದಮನಚಕ್ರವನ್ನು ಆರಂಭಿಸಿದ ಮಹಾರಾಷ್ಟ್ರದ ಪೋಲೀಸರು ಭಾರೀ ಬಂದೋಬಸ್ತತ ಹಾಕಿ ಅವರು ಮತ್ತು ಸಂಗಡಿಗರು ಅವರು ತಂಗಿದ್ದ ಹೊಟೇಲನನು ಬಿಟ್ಟು ಕದಲದಂತೆ ಮಾಡಿದರು. ಮರುದಿನ ಅವರನ್ನು ಭೇಟಿಯಾಗಲು ಹೋದ 'ದಲಿತ ಶೋಷಣ ಮುಕ್ತಿ ಮಂಚ್'ಗೆ ಸೇರಿದ 'ಜಾತಿ ಅಂತ್ ಸಂಘರ್ಷ ಸಮಿತಿ'ಯ ರಾಜ್ಯಸಮಿತಿ ಸದಸ್ಯ ಸುಬೋಧ್ ಮೋರೆ, ಭೀಮ್ ಆರ್ಮಿಯ ಮಹಾರಾಷ್ಟ್ರ ಮುಖಂಡರಾದ ಅಶೋಕ ಕಾಂಬ್ಳೆ, ಸುನಿಲ್ ಥೋರಟ್, ಮಧು ಪವಾರ್ ಮತ್ತತರರನ್ನೂ ಬಂಧಿಸಿ ಅಜ್ಞಾತ ಸ್ಥಳಕ್ಕೆ ಕೊಂಡೊಯ್ದರು ಎಂದು ತಿಳಿದುಬಂದಿದೆ. ಅವರ ಮೊಬೈಲುಗಳನ್ನು ಪೋಲೀಸರು ವಶಪಡಿಸಿಕೊಂಡರು, ಅವರು ಎಲ್ಲಿದ್ದಾರೆಂದು ತಿಳಿದಿಲ್ಲ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಅಶೋಕಧವಳೆ, ನರಸಯ್ಯ ಅದಂ ಮತ್ತು ಮಹೇಂದ್ರ ಸಿಂಗ್ ಡಿಸೆಂಬರ್ 29 ರಂದು ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಮುಂಬೈಯಲ್ಲಿ ನಡೆಯಲಿದ್ದ ಸಭೆಗೆ ಅನುಮತಿಯನ್ನೂ ನಿರಾಕರಿಸಲಾಗಿದೆ ಎಂದೂ ತಿಳಿದುಬಂದಿದೆ. ಜನವರಿ 1ರಂದು ಭೀಮ-ಕೋರೆಗಾಂವ್‌ನಲ್ಲಿ 'ಜಯಸ್ತಂಭ'ಕ್ಕೆ ಸಾವಿರಾರು ದಲಿತರು ನೀಡುವ ಹಿನ್ನೆಲೆಯಲ್ಲಿ ಈ ದಮನಚಕ್ರ ಆರಂಭಿಸಲಾಗಿದೆ ಎಂದಿರುವ ಈ ಮುಖಂಡರು, ಕಳೆದ ವರ್ಷ ದಲಿತರೇ ಇದ್ದ ಸೇನೆಯ ವಿಜಯದ 200ನೇ ವಾರ್ಷಿಕೋತ್ಸವದ ಆಚರಣೆಯ ಸಂದರ್ಭದಲ್ಲಿ ಗಲಭೆಗಳನ್ನು ಸೃಷ್ಟಿಸಿದ್ದ ಮನೋಹರ ಭಿಡೆ ಮತ್ತು ಮಿಲಿಂದ ಎಕ್‌ಬೋಟೆಯನ್ನು ಆರಾಮವಾಗಿ ತಿರುಗಾಡಲು ಬಿಟ್ಟಿರುವ ಮಹಾರಾಷ್ಟ್ರ ಸರಕಾರ ಹಲವು ಮಾನವ ಹಕ್ಕುಗಳ ಕಾರ್ಯಕರ್ತರನ್ನು ಬಂಧಿಸಿದೆ, ಈಗ ದಮನದ ಬಲೆಯನ್ನು ವ್ಯಾಪಕಗೊಳಿಸುತ್ತಿದೆ ಎಂದು ಸಿಪಿಐ(ಎಂ) ಜಾತಿ ಅಂತ ಸಂಘಷ ಸಮಿತಿ ಖಂಡಿಸಿವೆ, ಚಂದ್ರಶೇಖರ್ ಆಝಾದ್ ಮತ್ತವರ ಸಂಗಡಿಗರನ್ನು, ಸುಭೋದ್ ಮೋರೆ, ಅಶೋಕ್ ಕಾಂಬ್ಳೆ ಮತ್ತಿತರ ದಲಿತ ಮುಖಂಡರನ್ನು ಕೂಡಲೇ ಬಿಡುಗಡೆ ಮಾಡಬೇಕು, ಕಳೆದ ವರ್ಷ ಭೀಮ-ಕೊರೆಗಾಂವ್‌ನಲ್ಲಿ ದಲಿತರ ಮೇಲೆ ದಾಳಿಗಳಿಗೆ ಕಾರಣರಾದ ಭಿಡೆ ಮತ್ತು ಏಕ್‌ಬೋಟೆಯವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಭೀಮ್ ಆರ್ಮಿಗೆ ಭಾಗಶಃ ವಿಜಯ

ಈ ನಡುವೆ ಮುಂಬೈ ಹೈಕೋರ್ಟ್ ಮಹಾರಾಷ್ಟ್ರದಲ್ಲಿ ಚಂದ್ರಶೇಖರ ಆಝಾದ್ ಮತ್ತು ಅವರ ಸಂಗಡಿಗರ ಮುಕ್ತ ಸಂಚಾರಕ್ಕೆ ಮತ್ತು ಸಾರ್ವಜನಿಕವಾಗಿ ಕಾಣಿಸಿಕೊಳ್ಳು ಅಡ್ಡಿಪಡಿಸಬಾರದು ಮಹಾರಾಷ್ಟ್ರ ಪೊಲಿಸ್‌ಗೆ ತಾಕೀತು ಮಾಡಿದೆ. ಆಝಾದ್ ಮತ್ತು ಸಂಗಡಿಗರ ಮೇಲಿನ ದಮನವನ್ನು ಪ್ರಶ್ನಿಸಿ ಭೀಮ್ ಆರ್ಮಿಯ ಮಹಾರಾಷ್ಟ್ರ ಮುಖ್ಯಸ್ಥ ದತ್ತ ಪೋಲ್ ಹಾಕಿದ ಅರ್ಜಿಯ ವಿಚಾರಣೆನಡೆಸಿದ ಹೈಕೋರ್ಟ್ ನ್ಯಾಯಾಧೀಶರು ಅವರನ್ನೆಲ್ಲ ಬಂಧಿಸಿದ್ದು ತಪ್ಪು ಮತ್ತು ನಿಯಮೋಲ್ಲಂಘನೆ ಎಂದು ಹೇಳಿದ್ದಾರೆ. ಮುಂಬೈಯಲ್ಲಿ ಸಾರ್ವಜನಿಕ ಸಭೆಗೆ ಅನುಮತಿ ನಿರಾಕರಿಸಲಾಗಿದೆ ಎಂದು ಮಹಾರಾಷ್ಟ್ರ ಸರಕಾರಉದ್ದೇಶಪೂರ್ವಕವಾಗಿಯೇ ಸಂಘಟಕರಿಗೆ ತಿಳಿಸಲಿಲ್ಲ, ಪುಣೆಯಲ್ಲಿ ಡಿಸೆಂಬರ್ 31 ರಂದು ನಡೆಯಬೇಕಾಗಿದ್ದ ಸಭೆಗೆ ಕೊನೆಯ ಗಳಿಗೆಯಲ್ಲಿ ಅನುಮತಿ ನಿರಾಕರಿಸಲಯಿತು. ಸಾವಿತ್ರಿಬಾಯಿ ಪುಲೆ ವಿಶ್ವ ವಿದ್ಯಾಲಯದಲ್ಲಿನ ಕಾರ್ಯಕಕ್ರಮವನ್ನು ರದ್ದು ಮಾಡುವಂತೆ ಒತ್ತಡ ಹಾಕಿತು ಎಂದು ಅರ್ಜಿಯಲ್ಲಿ ತಿಳಿಸಲಾಗಿತ್ತು. ವಿಚಾರಣೆ ವೇಳೆಯಲ್ಲಿ ನ್ಯಾಯಾಧೀಶರು ಮುಮಬೈ ಪೋಲಿಸರನ್ನು ತರಾಟೆಗೆ ತಗೊಂಡರು. ಪೋಲೀಸ್ ಮುಖ್ಯಸ್ಥರುಗಳು ತಮ್ಮ ವರ್ತನೆಗಳ ಬಗ್ಗೆ ನ್ಯಾಯಾಲಯದಲ್ಲಿ ಕ್ಷಮೆ ಕೋರಿದರೆಂದೂ ವರದಿಯಾಗಿದೆ.

ಕೇರಳ: ಎಲ್‌ಡಿಎಫ್‌ಗೆ ಇನ್ನೂ 4 ಪಕ್ಷಗಳ ಸೇರ್ಪಡೆ; ಬಿಜೆಪಿಯಿಂದ 4 ಮುಖಂಡರ ರಾಜೀನಾಮೆ

ಲೋಕತಾಂತ್ರಿಕ ದಳ, ಡೆಮಾಕ್ರಟಿಕ್ ಕೇರಳ ಕಾಂಗ್ರೆಸ್, ಇಂಡಿಯನ್ ನ್ಯಾಶನಲ್ ಲೀಗ್ ಮತ್ತು ಕೇರಳ ಕಾಂಗ್ರೆಸ್(ಬಿ) ಈ ನಾಲ್ಕು ಪಕ್ಷಗಳನ್ನು ಕೇರಳದ ಎಲ್‌ಡಿಎಫ್ ರಂಗದಲ್ಲಿ ಸೇರಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಎಲ್‌ಡಿಎಫ್ ಸಂಯೋಜಕರಾದ ಎ.ವಿಜಯರಾಘವನ್ ಪ್ರಕಟಿಸಿದ್ದಾರೆ. ಜೆಎಸ್‌ಎಸ್, ಮತ್ತಿತರ ಪಕ್ಷಗಳೂ ಎಲ್‌ಡಿಎಫ್ ಸೇರುವ ಇಂಗಿತವನ್ನು ವ್ಯಕ್ತಪಡಿಸಿದ್ದು, ಆ ಬಗ್ಗೆ ಎಲ್‌ಡಿಎಫ್‌ನೊಳಗೆ ಚರ್ಚೆ ನಡೆಯುತ್ತಿದೆ, ಈ ನಡುವೆ ಅವರೊಂದಿಗೆ ಸಹಕಾರ ಮುಂದುವರಿಯುತ್ತದೆ ಎಂದೂ ತಿಳಿಸಲಾಗಿದೆ.

ಲೋಕತಾಂತ್ರಿಕ ದಳದ ಎಂ.ಪಿ. ವೀರೇಂದ್ರ ಕುಮಾರ್ ಕಳೆದ ಲೋಕಸಭಾ ಚುನಾವಣೆಯ ವೇಳೆಯಲ್ಲಿ ಯುಡಿಎಫ್ ಸೇರಿದ್ದರು. ಆದರೆ ನಂತರ ಭ್ರಮನಿರಸನಗೊಂಡು ಎಲ್‌ಡಿಎಫ್ ಜತೆಗೆ ಸಹಕರಿಸುತ್ತಿದ್ದರು. ಎಲ್‌ಡಿಎಫ್ ಬೆಂಬಲದಿಂದ ಅವರು ಈಗ ರಾಜ್ಯಸಭಾ ಸದಸ್ಯರಾಗಿದ್ದಾರೆ. ತಾನು ಯುಡಿಎಫ್ ಮತ್ತು ಎಲ್‌ಡಿಎಫ್ ಎರಡರಿಂದಲೂ ಸಮಾನ ದೂರಲ್ಲಿದ್ದೇನೆ ಎಂದು ಹೇಳಿಕೊಳ್ಳುತ್ತಿದ್ದ ನಾಯರ್ ಸರ್ವಿಸ್ ಸೊಸೈಟಿ(ಎನ್‌ಎಸ್‌ಎಸ್) ಶಬರಿಮಲೆ ತೀರ್ಪು ವಿರೋಧಿ ಬಿಜೆಪಿ ರಂಗದಲ್ಲಿ ಸೇರಿದ್ದನ್ನು ಬಾಲಕೃಷ್ಣ ಪಿಳ್ಳೆ ನೇತೃತ್ವದ ಕೇರಳ ಕಾಂಗ್ರೆಸ್(ಬಿ) ಬಲವಾಗಿ ವಿರೋಧಿಸಿದೆ.

ಈ ಹಿಂದೆ ಸಿಪಿಐ(ಎಂ) ನಿಂದ ಉಚ್ಚಾಟನೆಗೊಂಡು ಬೇರೆ ಪಕ್ಷ ರಚಿಸಿಕೊಂಡು ಯುಡಿಎಫ್‌ನೊಂದಿಗೆ ಸಹಕರಿಸುತ್ತಿದ್ದ ಎಂಸಿಪಿ ಪಕ್ಷದಲ್ಲೂ ಬಿರುಕು ಉಂಟಾಗಿದ್ದು ಅದರ ಒಂದು ಬಣ ಈಗ ಎಲ್‌ಡಿಎಫ್‌ನ ನಿಲುವನ್ನು ಬೆಂಬಲಿಸುತ್ತಿದೆ ಎಂದೂ ತಿಳಿದು ಬಂದಿದೆ.

ಇನ್ನೊಂದೆಡೆಯಲ್ಲಿ ಶಬರಿಮಲೆ ತೀರ್ಪಿನ ವಿರುದ್ಧ ಗದ್ದಲ ಎಬ್ಬಿಸುವ ಮೂಲಕ ರಾಜಕೀಯ ಬಲ ಗಳಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಬಿಜೆಪಿಗೂ ಹೊಡೆತ ಬಿದ್ದಿದೆ ಎಂದು ವರದಿಯಾಗಿದೆ. ಆರಂಭದಲ್ಲಿ ತೀರ್ಪನ್ನು ಸವಾಗತಿಸಿ, ನಂತರ ಕೇವಲ ರಾಜಕೀಯ ಲಾಭಕ್ಕಾಗಿ ಅದನ್ನು ವಿರೋಧಿಸಿ ರಾಜ್ಯದಲ್ಲಿ ಗಲಭೆ ಸೃಷ್ಟಿಸುವ ಪ್ರಯತ್ನದ ಮೂಲಕ ಅದು ಕೇರಳ ಸಮಾಜದಲ್ಲಿ ವಿಭಜನೆ ಸೃಷ್ಟಿಸುತ್ತಿದೆ ಎಂದು ಆಪಾದಿಸಿ ಬಿಜೆಪಿ ರಾಜ್ಯಸಮತಿಯ ಸದಸ್ಯ ವೆಳ್ಳನಾಡ್ ಕೃಷ್ಣಕುಮಾರ್ ಮತ್ತು ಜಿಲ್ಲಾ ಮುಖಂಡರುಗಳಾದ ಉಳಮಳಕ್ಕಲ್ ಜಯಕುಮಾರ್, ಥೆಲಿಕೋಡ್ ಸುರೇಂದ್ರನ್ ಮತ್ತು ವಿ.ಸುಕುಮಾರನ್ ಪಕ್ಷಕ್ಕೆ ರಾಜೀನಾಮೆ ನೀಡಿರುವುದಾಗಿ ಪಿಟಿಐ(ಡಿಸೆಂಬರ್21) ವರದಿ ಮಾಡಿದೆ. ಈ ಚಳುವಳಿಗೆ ಧುಮುಕವ ಬಗ್ಗೆ ಚರ್ಚಿಸಲು ಇದುವರೆಗೂ ರಾಜ್ಯಸಮಿತಿಯ ಸಭೆ ಕರೆದಿಲ್ಲ, ಅಂದರೆ ಬಿಜೆಪಿ ಜಾಲದ ಮೂಲಕ ಆರೆಸ್ಸೆಸ್ ಅಜೆಂಡಾವನ್ನು ಹೇರಲಾಗುತ್ತಿದೆ ಎಂದು ಕೃಷ್ಣಕುಮಾರ್ ಹೇಳಿರುವುದಾಗಿ ವರದಿಯಾಗಿದೆ. ಶಬರಿಮಲೆ ತೀರ್ಪಿನ ವಿರುದ್ಧ ರಾಜ್ಯದಲ್ಲಿ ಬಿಜೆಪಿ ಮತ್ತೆ-ಮತ್ತೆ ಹರತಾಳಕ್ಕೆ ಕರೆ ನೀಡುತ್ತಿರುವುದು ಹಲವೆಡೆಗಳಿಂದ ಟೀಕೆಗಳನ್ನು ಎದುರಿಸುತ್ತಿದ್ದೆದರ ಕರೆಗಳಿಗೆ ಅದು ನಿರೀಕ್ಷಿಸುತ್ತಿರುವ ಸ್ಪಂದನೆ ಸಿಗುತ್ತಿಲ್ಲ ಎಂದೂ ವರದಿಯಾಗಿದೆ.

ಮುಖ್ಯಮಂತ್ರಿಗಳ ಬಗ್ಗೆ ಬಿಜೆಪಿಯ ಜಾತಿವಾದಿ ಕಾರ್ಟೂನ್-ಸರ್ವತ್ರ ಟೀಕೆ

ಈ ನಡುವೆ ಬಿಜೆಪಿ ಜಾತಿವಾದಿ ಸ್ವರೂಪ ಮತ್ತೊಮ್ಮೆ ಬಯಲಿಗೆ ಬಂದಿದೆ. ಈ ಹಿಂದೆ ಜನಸಂಘದ , ಈಗ ಬಿಜೆಪಿ ಮುಖವಾಣಿಯಾಗಿರುವ ಮಲೆಯಾಳಿ ಪತ್ರಿಕೆ 'ಜನ್ಮಭೂಮಿ' ಮುಖ್ಯಮಂತ್ರಿಗಳನ್ನು ಜಾತಿಹೆಸರಿನಲ್ಲಿ ನಿಂದಿಸುವ ವ್ಯಂಗ್ಯಚಿತ್ರವೊಂದನ್ನು ಪ್ರಕಟಿಸಿ, ಬಿಜೆಪಿಯ ಮೇಲ್ಜಾತಿ ಚಾರಿತ್ರ್ಯವನ್ನು, ಮತ್ತು ಸಂಘಪರಿವಾರದ ನಿಜವಾದ 'ತತ್ವ'ವನ್ನು ಪ್ರದರ್ಶಿಸಿದೆಯೆಂದು ವ್ಯಾಪಕ ಟೀಕೆಗೆ ಒಳಗಾಗಿದೆ.

ಡಿಸೆಂಬರ್ 24 ರಂದು ಪ್ರಕಟವಾದ ಈ ವ್ಯಂಗ್ಯಚಿತ್ರದಲ್ಲಿ ಇಬ್ಬರು 'ಮಹಿಳಾ ಗೋಡೆ'ಯನ್ನು ಸಂಗಟಿಸುತ್ತಿರುವುದರ ಮೇಲೆ ಹಕ್ಕು ಬಾಧ್ಯತಾ ನಿಲುವಳಿಯ ಬಗ್ಗೆ ಚರ್ಚಿಸುವಾಗ ಮೂರನೇ ವ್ಯಕ್ತಿಯೊಬ್ಬ ತೆಂಗಿನ ಮರ ಹತ್ತುತ್ತಿದ್ದ ವ್ಯಕ್ತಿಯೊಬ್ಬನಿಗೆ ಉನ್ನತ ಹುದ್ದೆಯನ್ನು ಕೊಡುವಾಗ ಇದನ್ನು ಯೋಚಿಸಬೇಕಿತ್ತು ಎನ್ನುತ್ತಾನೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ರವರ ತಂದೆ ಥಿಯಾ ಜಾತಿಯ ಕಸುಬಾದ ತೆಂಗಿನ ಮರದಿಂದ ಕಳ್ಳು ಬಗೆಯುವ ಮೂರ್ತೆದಾರಿಕೆ ಮಾಡುತ್ತಿದ್ದರು ಎಂಬ ಬಗ್ಗೆ ಕೀಳುಬುದ್ಧಿಯ ಟಿಪ್ಪಣಿ ಇದು. ಶಬರಿಮಲೆಯಲ್ಲಿ ಮಹಿಳೆಯರಿಗೆ ಪ್ರವೇಶದ ತೀರ್ಪಿಗೆ ವಿರೋಧ ಬಹುಪಾಲು ಮೇಲ್ಜಾತಿಗಳಿಂದ ಬಂದಿದೆ, ಆದ್ದರಿಂದ ಬಿಜೆಪಿ ಅವರ ತುತ್ತೂರಿಯಾಗಿದೆ ಎಂಬ ಸಂಗತಿಯನ್ನೂ ಇದು ಎತ್ತಿ ತೋರಿದೆ ಎಂದು ಹಲವು ರಾಜಕೀಯ ವೀಕ್ಷಕರು ಟಿಪ್ಪಣಿ ಮಾಡಿದ್ದಾರೆ..

ವಾಸ್ತವವಾಗಿ ಈ ವ್ಯಂಗ್ಯಚಿತ್ರದ ಆಧಾರದ ಮೇಲೆ ಈ ಪತ್ರಿಕೆಯ ನೋಂದಣಿಯನ್ನು ನಿಯಮಗಳ ಪ್ರಕಾರ ರದ್ದು ಮಾಡಬಹುದು, ಏಕೆಂದರೆ ಇದು ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಅವಹೇಳನ ಮಾಡುವಂತದ್ದು ಎಂದೊಬ್ಬ ಮಲೆಯಾಳಿ ಪತ್ರಕರ್ತರು ಹೇಳಿದ್ದಾರೆ.

ಮೇಘಾಲಯದ ಕಾನೂನುಬಾಹಿರ ಕಲ್ಲಿದ್ದಲು ಗಣಿಗಾರಿಕೆಗೆ 13 ಜೀವಗಳ ಬಲಿ?

ಮೇಘಾಲಯದ ಕಲ್ಲಿದ್ದಲು ಗಣಿಯೊಂದರಲ್ಲಿ ಸಿಲುಕಿಕೊಂಡ 13 ಕಲ್ಲಿದ್ದಲು ಕಾರ್ಮಿಕರನ್ನು ಕಾಪಾಡಲೆಂದು ಎರಡು ವಾರಗಳ ನಂತರ ನೌಕಾಪಡೆ ಮತ್ತು ವಿಮಾನ ಪಡೆಗಳ ಮುಳುಗುತಜ್ಞರನ್ನು 'ರಾಷ್ಟ್ರೀಯ ಅನಾಹುತ ಸ್ಪಂದನಾ ಪಡೆ'(ಎನ್‌ಡಿಆರ್‌ಎಫ್) ಕಳಿಸಿದೆ. ಆದರೆ ಈ 13 ಕಾರ್ಮಿಕರು ಜಲಸಮಾಧಿ ಹೊಂದದೆ ಬದುಕಿರುವ ನಿರೀಕ್ಷೆ ಸುಮಾರಾಗಿ ಯಾರಿಗೂ ಇಲ್ಲ ಎಂದು ಹೇಳಲಾಗುತ್ತಿದೆ. ಕೇಂದ್ರ ಸರಕಾರದ ಮತ್ತು ರಾಜ್ಯಸರಕಾರದ ನಿರ್ಲಕ್ಷ್ಯದತ್ತ ಈ ಹಿನ್ನೆಲೆಯಲ್ಲಿ ಹಲವರು ಗಮನ ಸೆಳೆದಿದ್ದಾರೆ.

ಈ ಗಣಿ ಕಾರ್ಮಿಕರು ಯಾರು ಎಂದು ತಿಳಿದರೆ ಈ ನಿರ್ಲಕ್ಷ್ಯಕ್ಕೆ ಕಾರಣವೂ ತಂತಾನೇ ಹೊಳೆಯುತ್ತದೆ ಎಂದು ಕೆಲವರು ಟಿಪ್ಪಣಿ ಮಾಡಿದ್ದಾರೆ. ಈ ಕಾರ್ಮಿಕರಲ್ಲಿ ಬಹುಪಾಲು ಕಡುಬಡವರು, ವಲಸೆ ಕಾರ್ಮಿಕರು, ಬಹುಶಃ ಕೆಲವರು ಭಾರತೀಯ ನಾಗರಿಕರೂ ಆಗಿರಲಿಕ್ಕಿಲ್ಲ ಎಂದು ಊಹಿಸಲಾಗಿದೆ. ಏಕೆಂದರೆ, ಖಾಸಗಿ ಕಲ್ಲಿದ್ದಲು ಗಣಿಗಳಲ್ಲಿ, ಅದರಲ್ಲೂ ಕಲ್ಲಿದ್ದಲು ಗಣಿಕಾರಿಕೆಯನ್ನು 'ರಾಷ್ಟ್ರೀಯ ಹಸಿರು ನ್ಯಾಯಮಂಡಳಿ' (ಎನ್‌ಜಿಟಿ) ನಿರ್ಬಂಧಿಸಿರುವ ಮೇಘಾಲಯದಲ್ಲಿ ಜೀವನೋಪಾಯಕ್ಕೆ ಬೇರೆ ಮಾರ್ಗಗಳಿಲ್ಲದವರು ಮಾತ್ರವೇ ಅತ್ಯಂತ ಕಡಿಮೆ ಕೂಲಿಯ, ಯಾವ ಸುರಕ್ಷಿತತೆಯ ಸೌಕರ್ಯಗಳೂ ಇಲ್ಲದ ಇಲಿ-ಬಿಲಗಳಂತಹ ಗಣಿಗಳಲ್ಲಿ ಕಾನೂನುಬಾಹಿರವಾಗಿ ಕೆಲಸ ಮಾಡುವವರು. ಇಲ್ಲಿಯ ಗಣಿಗಾರಿಕೆಯ ಮತ್ತು ಗಣಿಗಳಲ್ಲಿ ಕೆಲಸ ಮಾಡುವ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿದ ಎನ್‌ಜಿಟಿ ಗಣಿಗಾರಿಕೆಯನ್ನು ನಿಷೇಧಿಸಿದರೂ ಇದನ್ನು ನೆಲದಡಿಯ 'ಕುಟೀರ ಉದ್ಯಮ' ಎಂದು ಪರಿಗಣಿಸ ಬೇಕೆನ್ನುವ ಅಸ್ಸಾಂ, ಮೇಘಾಲಯದ ಆಳುವ ಮಂದಿ, ಪಕ್ಷ-ಬೇಧವಿಲ್ಲದೆ ಅದಕ್ಕೆ ಪರೋಕ್ಷವಾಗಿ ಅವಕಾಶ ಕಲ್ಪಿಸಿದ್ದರ ಫಲಿತಾಂಶವಿದು ಎಂದು ಪರಿಣಿತರು ಹೇಳುತ್ತಿದ್ದಾರೆ. ಇವರುಗಳ ಒತ್ತಡದಿಂದಾಗಿ 'ಈಗಾಗಲೇ ಗಣಿಗಾರಿಕೆಯಿಂದ ಉತ್ಪಾದಿಸಿರುವ' ಕಲ್ಲಿದ್ದಲು ಸಾಗಾಣಿಕೆಗೆ ಅವಕಾಶ ಕಲ್ಪಿಸಲು ಎನ್‌ಜಿಟಿ ಒಪ್ಪಿತ್ತು. ಆದರೆ ಇದರ ಮರೆಯಲ್ಲೇ ಗಣಿಗಾರಿಕೆ ಮುಂದುವರೆದಿದೆ, ಇದರಲ್ಲಿ ಉತ್ಪಾದನೆಗೊಂಡ ಕಲ್ಲಿದ್ದಲನ್ನು ಈ ಹಿಂದೆಯೇ ಉತ್ಪಾದನೆಗೊಂಡದ್ದು ಎಂದು ಸಾಗಿಸಲಾಗುತ್ತಿದೆ, ಇದು ಎನ್‌ಜಿಟಿ ಗಮನಕ್ಕೂ ಬಂದಿದೆ ಎನ್ನಲಾಗಿದೆ. ಇದೊಂದು ದೊಡ್ಡ ಹಗರಣವೇ ಆಗಿದೆ ಎಂದೂ ಈ ಬಗ್ಗೆ ಹತ್ತಿರದಿಂದ ಅಧ್ಯಯನ ಮಾಡಿರುವ ಪತ್ರಕರ್ತರು ಮತ್ತು ಸಾಮಾಜಿಕ ಕಾರ್ಯಕರ್ತರು ಹೇಳುತ್ತಿದ್ದಾರೆ.

ಈ ಗಣಿಗಳ ಮಾಲಕರು ಆಳುವ ಪಕ್ಷಗಳ ಮುಖಂಡರೂ ಆಗಿರುವುದು ಒಂದು ಅಂಶವಾದರೆ, ಈ ಕಾನೂನುಬಾಹಿರ ಶೋಷಣಾತ್ಮಕ ಉದ್ದಿಮೆಯ ನಿಜರೂಪವನ್ನು ಬಯಲಿಗೆಳೆಯಲು ಪ್ರಯತ್ನಿಸಿರುವ ಈ ಪತ್ರಕರ್ತರು ಮತ್ತು ಸಾಮಾಜಿಕ ಕಾರ್ಯಕರ್ತರ ಮೇಲೆ ಹಲ್ಲೆಗಳು ಈ ಕಾನೂನುಬಾಹಿರ ಚಟುವಟಿಕೆಗೆ ಸರಕಾರಗಳ ಉದ್ದೇಶಪೂರ್ವಕವಾದ ನಿರ್ಲಕ್ಷ್ಯದ ಮತ್ತೊಂದು ಆಯಾಮವಾಗಿದೆ. ಪೊಯ್ಬಿನ್‌ಹುನ್ ಮಜಾವ್ ಎಂಬ ಆರ್‌ಟಿಐ(ಮಾಹಿತಿ ಹಕ್ಕು) ಕಾರ್ಯಕರ್ತರ ಕೊಲೆಯಾಗಿದೆ.

ಯೋಗಿ ರಾಜ್ಯದಲ್ಲಿ ಇನ್ನೊಬ್ಬ ಪೋಲೀಸ್ ಸಿಬ್ಬಂದಿ ಸಾವು

ಡಿಸೆಂಬರ್ 29 ರಂದು ಉತ್ತರಪ್ರದೇಶದ ಗಾಝೀಪುರದಲ್ಲಿ ಪ್ರಧಾನಿಗಳ ಸಭೆಯ ನಂತರ ದೊಂಬಿ ಹಿಂಸಾಚಾರದಲ್ಲಿ ಇನ್ನೊಬ್ಬ ಪೋಲೀಸ್ ಸಿಬ್ಬಂದಿ ಪ್ರಾಣ ಕಳಕೊಂಡಿರುವ ಸುದ್ದಿಯನ್ನು ಕೇಳಿ ಹಲವರ ಮನಸ್ಸಿನಲ್ಲಿ ಉಂಟಾಗಿರುವ ಕಳವಳ ಇದು. ಯೋಗಿ ರಾಜ್ಯಭಾರದಲ್ಲಿ ಈಗ 'ರಿವರ್ಸ್ ಎನ್‌ಕೌಂಟರ್'ಗಳು ನಡೆಯುತ್ತಿವೆಯೇ?" ಎಂದೊಬ್ಬರು ಪ್ರಶ್ನಿಸಿದ್ದಾರೆ.

ಪ್ರಧಾನ ಮಂತ್ರಿಗಳ ಸಭೆಗೆ ವಿಶೇಷ ಕರ್ತವ್ಯದ ಮೇಲೆ ನಿಯೋಜಿಸಿದ ಪೋಲೀಸ್ ಸಿಬ್ಬಂದಿ ತಮ್ಮ ಡ್ಯೂಟಿ ಮುಗಿಸಿ ಹಿಂತಿರುಗುತ್ತಿದ್ದಾಗ, ಟ್ರಾಫಿಕ್ ಜಾಮ್ ಆಗಿದೆ, ಅದನ್ನು ನಿವಾರಿಸಿ ಬನ್ನಿ ಎಂದು ಪೋಲೀಸ್ ಕಂಟ್ರೋಲ್ ರೂಮಿನಿಂದ ಸಂದೇಶ ಬಂತು. ಅದನ್ನು ನಿರ್ವಹಿಸಲು ಹೋದಾಗ ಜನಜಂಗುಳಿ ಕಲ್ಲು, ಇಟ್ಟಿಗೆ, ಬಡಿಗೆಗಳನ್ನು ಎಸೆಯಲಾರಂಭಿಸಿದರು, ಇದರಲ್ಲಿ ಇಬ್ಬರು-ಮೂವರು ಪೋಲಿಸರು ಗಾಯಗೊಂಡರು, ಒಬ್ಬರನ್ನು ಆಸ್ಪತ್ರೆಗೆ ಒಯ್ಯುವಷ್ಟರಲ್ಲಿ ಅಸು ನೀಗಿದರು ಎಂದು ವರದಿಯಾಗಿದೆ.

ಈ ನಡುವೆ ಬುಲಂದ್‌ಶಹರಿನಲ್ಲಿ ದೊಂಬಿ-ಹಿಂಸಾಚಾರಕ್ಕೆ ಬಲಿಯಾದ ಪೊಲಿಸ್ ಇನ್ಸ್‌ಪೆಕ್ಟರ್ ಸುಬೋದ್ ಕುಮಾರ್ ಸಿಂಗ್‌ರವರನ್ನು ಯಾರೂ ಬಡಿದು ಸಾಯಿಸಿಲ್ಲ, ಅವರೇ ತಲೆಗೆ ಗುಂಡು ಹೊಡೆದುಕೊಂಡು ಸತ್ತರು, ಎಫ್‌ಐಆರ್ ದಾಖಲಿಸದಿದ್ದುದಕ್ಕೆ ಆಕ್ರೋಶಗೊಂಡ ಜನರು ಅವರನ್ನು ಸುತ್ತುವರೆದಿದ್ದರು, ಇನ್ನು ತನಗೆ ಉಳಿಗಾಲವಿಲ್ಲ ಎಂದು ಭಾವಿಸಿದ ಈ ಎನ್‌ಕೌಂಟರ್ ಸ್ಪೆಶಲಿಸ್ಟ್ ಹಿಂದೆ ಹಲವು ಬಾರಿ ಮಾಡಿದಂತೆ ತನ್ನ ಕೈಗೆ ಗುಂಡು ಹೊಡೆದುಕೊಂಡು ಬಚಾವಾಗುವ ಪ್ರಯತ್ನದಲ್ಲಿ ಗುರಿ ತಪ್ಪಿ ತಲೆಗೆ ಹೊಡೆದುಕೊಂಡದ್ದರಿಂದ ಸತ್ತರು, ನಿಷ್ಕಾರಣವಾಗಿ ಸಂಘ ಪರಿವಾರದವರ ಮೇಲೆ ಆರೋಪ ಹೊರಿಸಲಾಗಿದೆ ಎಂಬುದು ಬುಲಂದ್‌ಶಹರಿನ ಬಿಜೆಪಿ ಶಾಸಕ ದೇವೇಂದ್ರ ಸಿಂಗ್ ಲೋಧಿ ಈಗ ಹೆಣೆದಿರುವ ಹೊಸಕತೆ. ಇದು ಉತ್ತರ ಪ್ರದೇಶ ಪೋಲಿಸರು ತಮ್ಮ ತನಿಖೆಯಿಂದ ತಿಳಿದುಬಂದಿದೆಯೆಂದು ಹೇಳಿರುವ ಸಂಗತಿಗೆ ತದ್ವಿರುದ್ಧವಾಗಿದೆ.

ಪೂರ್ಣಕುಂಭ ಮತ್ತು ಕನ್ನಡ ಸಾಹಿತ್ಯ ಸಮ್ಮೇಳನ



ಜನವರಿ 4 ರಿಂದ ಕನ್ನಡ ಸಾಹಿತ್ಯ ಸಮ್ಮೇಳನ ಧಾರವಾಡದಲ್ಲಿ ನಡೆಯುತ್ತಿದ್ದು ಅದು ಆರಂಭವಾಗುವ ಮೊದಲೇ ವಿವಾದಕ್ಕೆ ಒಳಗಾಗಿತ್ತು. ಸಾವಿರ ಮಹಿಳೆಯರಿಂದ ಪೂರ್ಣ ಕುಂಭ ಸ್ವಾಗತ ಮೆರವಣಿಗೆ ನಡೆಸುವುದನ್ನು, ಸುಮಾರು 250ಕ್ಕೂ ಹೆಚ್ಚು ಸಾಹಿತಿ, ಕಲಾವಿದರು, ಪ್ರಗತಿಪರರು, ಪ್ರಜ್ಞಾವಂತರು ಇದನ್ನು ವಿರೋಧಿಸಿದ್ದರು. ಆದರೂ ಎಲ್ಲ ಪ್ರತಿರೋಧದ ನಡುವೆಯೂ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳೆಯರಿಂದ ಪೂರ್ಣಕುಂಭ ಮೆರವಣಿಗೆ ಮಾಡಿಸಿರುವ ಸಾಹಿತ್ಯ ಪರಿಷತ್ತು ಹಾಗೂ ಸಮ್ಮೇಳನದ ಸ್ವಾಗತ ಸಮಿತಿಯ ಕ್ರಮವನ್ನು, ಅವರು ಒಂದು ಹೇಳಿಕೆಯಲ್ಲಿ ತೀವ್ರವಾಗಿ ಖಂಡಿಸಿದ್ದಾರೆ.

ಅವರು "ಇಂತಹ ಮೆರವಣಿಗೆಯು ಮಹಿಳೆಯರ ಶೋಷಣೆಯ ಪ್ರತೀಕ ಆಗಿರುತ್ತದೆ. ಸ್ವಸಹಾಯ ಸಂಘಗಳ ಸದಸ್ಯರು, ಆಶಾ ಕಾರ್ಯಕರ್ತರು ಮತ್ತು ಅಂಗನವಾಡಿ ಕಾರ್ಯಕರ್ತರನ್ನು ಹೀಗೆ ಮೆರವಣಿಗೆಯಲ್ಲಿ ಪ್ರದರ್ಶಕ ವಸ್ತುಗಳಂತೆ ಬಳಕೆ ಮಾಡುವುದು ಆಧುನಿಕ ಸಮಾಜದ ಅಣಕವಾಗಿರುತ್ತದೆ. ಸಂಸ್ಕೃತಿ, ಆಚರಣೆಗಳ ಹೆಸರಿನಲ್ಲಿ ಹೀಗೆ ಮೆರವಣಿಗೆ ಮಾಡಿಸುವುದಕ್ಕೂ, ಮಾರುಕಟ್ಟೆ ಸಾಮಗ್ರಿಗಳ ಪ್ರಚಾರಕ್ಕೆ ಜಾಹಿರಾತುಗಳಲ್ಲಿ ಹೆಣ್ಣನ್ನು ಬಳಸುವುದಕ್ಕೂ ಏನೂ ವ್ಯತ್ಯಾಸ ಇರುವುದಿಲ್ಲ." ಎಂದು ತಮ್ಮ ವಿರೋಧಕ್ಕೆ ಕಾರಣವನ್ನು ಕೊಟ್ಟಿದ್ದರು.

"ಮಹಿಳೆಯರು ತಾವಾಗೆ ಬಂದರೆ ಮೆರವಣಿಗೆ ಮಾಡುತ್ತೇವೆ. ಬರಿ ಮಹಿಳೆಯರಲ್ಲ, ಪುರುಷರು, ಟ್ರಾನ್ಸ್ ಜೆಂಡರ್ ಹೀಗೆ ಯಾರು ಬಂದರೂ ಅವಕಾಶ ನೀಡಲಾಗುವುದು", "ಹಿಂದೆಲ್ಲಾ ಇದೇ ರೀತಿ ಮೆರವಣಿಗೆ ಮಾಡಿಸಿದೆ. ಆಗ ಯಾರೂ ವಿರೋಧಿಸಲಿಲ್ಲ. ಈಗ್ಯಾಕೆ ವಿರೋಧ?" ಎಂಬ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್ ಅವರ ಸಮಜಾಯಿಷಿಗೆ, "ಅಲಂಕಾರ, ಮೆರವಣಿಗೆಗಳ ಮೂಲಕ ಮಹಿಳೆ ತನ್ನ ಅಸ್ಮಿತೆ ಕಳೆದುಕೊಳ್ಳದೆ, ಶಿಕ್ಷಣ, ಸಾಹಿತ್ಯದ ಮೂಲಕ ಅಸ್ಮಿತೆ ಗಳಿಸುವಂತೆ ತಿಳಿಸಿ ಹೇಳಬೇಕಾದ್ದು ಸಾಹಿತ್ಯ ಪರಿಷತ್ತಿನ ಜವಾಬ್ದಾರಿ ಆಗಿರುತ್ತದೆ. ಸಾಹಿತ್ಯ ಎಂದರೆ ಬರಿದೇ ಅಕ್ಷರವಲ್ಲ. ಅದು ಬದುಕಿನ ಪ್ರತಿಬಿಂಬ ಮತ್ತು ಬದುಕಿಗೆ ದಾರಿದೀಪ. ಹೀಗಿರುವಾಗ ಅಧ್ಯಕ್ಷರಿಂದ ಇನ್ನೂ ಹೆಚ್ಚಿನ ಹೊಣೆಗಾರಿಕೆಯನ್ನು ಕನ್ನಡದ ಜನ ನಿರೀಕ್ಷಿಸುತ್ತಾರೆ." ಎಂದು ಪ್ರತಿಕ್ರಿಯಿಸಿದ್ದರು.

"ಮೆರವಣಿಗೆ ಸಮಿತಿಯಲ್ಲಿ 13–14 ಜನರಿದ್ದು ಅದರಲ್ಲಿರುವ ಮಹಿಳೆ ಕೇವಲ ಒಬ್ಬರು ಮಾತ್ರ, ಆದರೆ ಮೆರವಣಿಗೆಗೆ ಮಾತ್ರ 1001 ಮಹಿಳೆಯರು ಬೇಕು! ಇದು ದೌರ್ಜನ್ಯ ಅಲ್ಲವೆ?.. ಸಮ್ಮೇಳನದ ಗೋಷ್ಠಿಗಳಲ್ಲಿ ಮಹಿಳೆಯರಿಗೆ ಶೇ.50ರಷ್ಟು ಪ್ರಾತಿನಿಧ್ಯ ನೀಡುವ ಮೂಲಕ ಮಹಿಳೆಯರ ಭಾಗವಹಿಸುವಿಕೆಯನ್ನು ದೃಢಪಡಿಸಬೇಕೇ ಹೊರತು ಅಲಂಕಾರಿಕವಾಗಿ ಬಳಸುವುದು ಕರ್ನಾಟಕದ ಎಲ್ಲ ಮಹಿಳೆಯರಿಗೆ ಮಾಡುವ ಅವಮಾನ." ಎಂದೂ ಪ್ರಶ್ನಿಸಿದ್ದರು.

"ಪಕ್ಕದ ಕೇರಳದಲ್ಲಿ ಸ್ತ್ರೀ ಸಮಾನತೆಗಾಗಿ ಲಕ್ಷಾಂತರ ಮಹಿಳೆಯರು 620 ಕಿಮೀ ಉದ್ದದ ಮಹಿಳೆಯರ ಗೋಡೆಯನ್ನು ನಿರ್ಮಿಸಿದ್ದಾರೆ. ಇಡೀ ದೇಶ ಇಂದು ಕೇರಳದ ಕಡೆಗೆ ಅಚ್ಚರಿಯಿಂದ ನೋಡುತ್ತಿದೆ. ನೆರೆಮನೆಯವರಾದ ನಾವು ಮುಗ್ಧ ಮಹಿಳೆಯರಿಗೆ ಅಲಂಕಾರ ಮಾಡಿಸಿ, ಅವರ ತಲೆಯ ಮೇಲೆ ನೀರಿನ ಕೊಡ ಹೊರಿಸಿ, 5 ಕಿಮೀ ನಡೆಸುವುದು ಅಮಾನವೀಯ. ಆಧುನಿಕ ಕಾಲದಿಂದ ಕತ್ತಲ ಕಾಲಕ್ಕೆ ಚಲಿಸಿದಂತೆ ಆಗುತ್ತದೆ ಸರಕಾರದ ದುಡ್ಡನ್ನು ಮೌಢ್ಯ ಬೆಳೆಸಲು, ಮಹಿಳೆಯರ ಗೌರವಕ್ಕೆ ಚ್ಯುತಿ ತರುವಂತೆ ಬಳಸುವುದು ಸಂವಿಧಾನ ವಿರೋಧಿಯಾಗಿದೆ." ಎಂದೂ ಟೀಕಿಸಿದ್ದರು.

ಎಲ್ಲ ಪ್ರತಿರೋಧದ ನಡುವೆಯೂ ಇಂದು ಸಾಹಿತ್ಯ ಸಮ್ಮೇಳನದಲ್ಲಿ ಮಹಿಳೆಯರಿಂದ ಪೂರ್ಣಕುಂಭ ಮೆರವಣಿಗೆ ಮಾಡಿಸಿರುವ ಸಾಹಿತ್ಯ ಪರಿಷತ್ತು ಹಾಗೂ ಸಮ್ಮೇಳನದ ಸ್ವಾಗತ ಸಮಿತಿಯ ಕ್ರಮವನ್ನು, ಹಿಂದೆ ವಿರೋಧಿಸಿದ್ದ ಸುಮಾರು 250ಕ್ಕೂ ಹೆಚ್ಚು ಸಾಹಿತಿ, ಕಲಾವಿದರು, ಪ್ರಗತಿಪರರು, ಪ್ರಜ್ಞಾವಂತರು ತೀವ್ರವಾಗಿ ಖಂಡಿಸಿದ್ದಾರೆ.

"ಈ ಕ್ರಮವು ಸಾಹಿತ್ಯ ಪರಿಷತ್ತಿನಲ್ಲಿ ಇರುವವರು ನಿಜಕ್ಕೂ ಸಾಹಿತಿ ಬರಹಗಾರರೇ ಎಂಬ ಅನುಮಾನವನ್ನು ಹುಟ್ಟಿಸಿದೆ. ಬರಹಗಾರರೆಂದರೆ ಸೂಕ್ಷ್ಮ ಸಂವೇದನೆ ಇರುತ್ತದೆ. ಜನರ ನಾಡಿ ಮಿಡಿತ ಆಲಿಸುವ ಗುಣ ಇರುತ್ತದೆ ಎನ್ನುವುದು ನಮ್ಮ ತಿಳುವಳಿಕೆಯಾಗಿತ್ತು." ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

"ಪೂರ್ಣಕುಂಭ ಮೆರವಣಿಗೆಯನ್ನು ವಿರೋಧಿಸಿ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಮಹಿಳೆಯರು ಶಾಂತ ರೀತಿಯಿಂದ, ಕಪ್ಪು ಪಟ್ಟಿ ಧರಿಸಿ ನಡೆಸುತ್ತಿದ್ದ ಪ್ರತಿಭಟನೆಯನ್ನು ಪೊಲೀಸರು ಹತ್ತಿಕ್ಕಿದ್ದಾರೆ. ಎತ್ತರದ ಧ್ವನಿಯಲ್ಲಿ ಮಾತನಾಡಿ ಪ್ರತಿಭಟನಾ ನಿರತರನ್ನು ಹೆದರಿಸಿದ್ದಲ್ಲದೆ, ಅವರ ಬಳಿ ಇದ್ದ ಕಪ್ಪು ಪಟ್ಟಿಗಳನ್ನು ಬಲವಂತದಿಂದ ಕಸಿದುಕೊಂಡಿದ್ದಾರೆ. ನಂತರ ಸ್ಟಾಲ್ ಗೆ ನುಗ್ಗಿ, ಇನ್ನೂ ಎಷ್ಟು ಇಟ್ಟಿದ್ದೀರ ಎಂದು ಸ್ಟಾಲ್ ಜಾಲಾಡಿದ್ದಾರೆ. ಶಾಂತಯುತವಾಗಿ ನಡೆಸುತ್ತಿದ್ದ ಪ್ರತಿಭಟನೆಯನ್ನು ಹೀಗೆ ಹತ್ತಿಕ್ಕಿದ ಪೊಲೀಸರ ಕ್ರಮವನ್ನು" ಅವರು ಖಂಡಿಸಿದ್ದಾರೆ.

"ಪ್ರತಿರೋಧವನ್ನು ಆಲಿಸಿ, ಮಾತನಾಡುವ ಸೌಜನ್ಯವೂ ಇಲ್ಲದ ಸಾಹಿತ್ಯ ಪರಿಷತ್ತು ಮತ್ತು ಸಮ್ಮೇಳನವನ್ನು ಆಯೋಜಿಸಿರುವ ಸ್ವಾಗತ ಸಮಿತಿಯ ಸದಸ್ಯರ ಈ ನಡೆ"ಯನ್ನೂ ಖಂಡಿಸಿದ್ದಾರೆ.

"ಧಾರವಾಡದ ಜಿಲ್ಲಾ ಆಡಳಿತದಲ್ಲಿ ಡಿಸಿ, ಪೊಲೀಸ್ ಎಸ್ ಪಿ ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷೆ – ಈ ಮೂವರೂ ಮಹಿಳೆಯರಾಗಿದ್ದೂ ಇಂತಹ ಮೆರವಣಿಗೆ ನಡೆಸಿರುವುದು ಅವರ ಬೌದ್ಧಿಕ ದಾರಿದ್ರ್ಯವನ್ನು ತೋರಿಸುತ್ತದೆ.. .ಜನರ ಬದುಕಿನ ಸೂಕ್ಷ್ಮಗಳೇ ಅರ್ಥವಾಗದ ಇಂತಹ ಸಮ್ಮೇಳನಗಳಿಗೆ ಧಿಕ್ಕಾರವಿರಲಿ." ಎಂದು ಅವರು ಟೀಕಿಸಿದ್ದಾರೆ. ●

ಸಹಯಾನ 2018 – 'ಭಾರತದ ಸಂವಿಧಾನ: ಹೊಸ ತಲೆಮಾರು'...... ಪುಟ 16 ರಿಂದ

ಜಾತ್ಯತೀತತೆ ಮತ್ತು ಸಾಮಾಜಿಕ ನ್ಯಾಯವನ್ನು ಒಳಗೊಂಡಿದೆಯೇ ಎಂದು ತುಲನೆ ಮಾಡಲು ಸಂವಿಧಾನವೊಂದೇ ತಳಹದಿ.

ರಾಜ್ಯಾದ್ಯಂತ ನಡೆಯುತ್ತಿರುವ ಸಂವಿಧಾನ ಅಭಿಯಾನದ ಉದ್ದಕ್ಕೂ ಎಲ್ಲಿಯೂ ಅಸಮಾಧಾನ ಅತೃಪ್ತಿ ಆಗಿಲ್ಲ. ಏಕೆಂದರೆ ನಾವು ಹೋದಲ್ಲೆಲ್ಲ ನಡೆಸಿದ ಸಂವಾದ, ಚರ್ಚೆ, ಮಾತುಕತೆ ಎಲ್ಲವೂ ಸಂವಿಧಾನಾತ್ಮಕವಾಗಿತ್ತು. ಈ ಚಳುವಳಿ ಮುಂದಕ್ಕೆ ಹೋಗಬೇಕು ಮತ್ತು ಜನ ವಿಭಾಗಕ್ಕೆಲ್ಲ ತಲುಪಬೇಕು. ರೈತರ ಭೂಮಿ ಪ್ರಶ್ನೆ, ಕಾರ್ಮಿಕರು, ವಿದ್ಯಾರ್ಥಿ ಯುವಜನರ ಸಮಸ್ಯೆ ಬಗೆಹರಿಸಲು ಜನಪರ ಹೋರಾಟಕ್ಕೆ ಸಂವಿಧಾನ ಅವಕಾಶ ಕಲ್ಪಿಸಿದೆ. ಹಾಗಾಗಿ ಸೈದ್ಧಾಂತಿಕ ಸಂಘರ್ಷವನ್ನು ಅಂತರಂಗದಲ್ಲಿ ಪ್ರಾರಂಭಿಸಬೇಕಿದೆ. ಇದಕ್ಕಾಗಿ ನಮ್ಮ ಆದ್ಯತೆ ಮತ್ತು ವಿವೇಕವನ್ನು ಬಳಸಬೇಕು.

ಇದಕ್ಕಾಗಿ ಸಂವಿಧಾನವನ್ನು ಅರ್ಥೈಸಿ, ಅಳವಡಿಸಿಕೊಳ್ಳೋಣ. ಮೈಗೂಡಿಸಿಕೊಳ್ಳೋಣ. ಕುಟುಂಬದವರಿಗೂ, ಸುತ್ತಮುತ್ತಲಿನವರಿಗೂ ಇದರ ಆಶಯಗಳನ್ನು ಮನವರಿಕೆ ಮಾಡಿಕೊಡುವುದು ಆದ್ಯತೆಯ ಕೆಲಸವಾಗಲಿ. 'ಸಂವಿಧಾನ ಹೊಸತಲೆಮಾರು' ವಿಷಯದ ಮೇಲೆ ಸಹಯಾನ ಸಾಹಿತ್ಯೋತ್ಸವ ಅರ್ಥಪೂರ್ಣವಾಗಿ ನಡೆದು ಡಾ. ಆರ್.ವಿ. ಭಂಡಾರಿಯವರ ವೈಚಾರಿಕತೆಯ ಮೂಲ ಆಶಯಗಳನ್ನು ಈಡೇರಿಸುತ್ತಿದೆ ಎಂದು ನ್ಯಾಯಮೂರ್ತಿ ನಾಗಮೋಹನ ದಾಸ್ ಸಮಾರೋಪ ಭಾಷಣ ಮಾಡುತ್ತಾ ಹೇಳಿದರು.

ತಮ್ಮ ಕವಿತೆಯ ವಾಚನ ಮಾಡುವದರೊಂದಿಗೆ ಕವಿ ಕೆ.ಎಸ್. ಮುಸ್ತಾಫಾ ಸಮಾರೋಪ ಸಮಾರಂಭವನ್ನು ನಿರ್ವಹಿಸಿದರು.

ತಾಳಮದ್ದಲೆ

ಕೊನೆಯದಾಗಿ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ' ಸಹಯೋಗದಲ್ಲಿ 'ಸಮುದಾಯ ಕರ್ನಾಟಕ', 'ಚಿಂತನ ಉತ್ತರ ಕನ್ನಡ'ದ ಸಹಕಾರದಿಂದ ನಡೆದ "ವಾಲಿ ಸುಗ್ರೀವರ ಕಾಳಗ" ತಾಳಮದ್ದಲೆಯಲ್ಲಿ, ಕೃಷ್ಣ ಭಂಡಾರಿ ಗುಣವಂತೆ ಭಾಗವತರಾಗಿ, ಮಂಜುನಾಥ ಭಂಡಾರಿ ಕರ್ಕಿ ಮದ್ದಲೆ ವಾದಕರಾಗಿ, ಡಾ. ಕೇಶವ ಶರ್ಮ, ಡಾ. ಪುರುಷೋತ್ತಮ ಬಿಳಿಮಲೆ, ಡಾ. ಶ್ರೀಪಾದ ಭಟ್, ಗಣೇಶ್ ನಾಯ್ಕ ಮುಗ್ವಾ, ಗಣೇಶ ಭಂಡಾರಿಯವರು ಪ್ರಸಂಗದ ಅರ್ಥಧಾರಿಗಳಾಗಿದ್ದರು. ವೈಚಾರಿಕ ಸ್ಪರ್ಶದೊಂದಿಗೆ ಆ ಕಾಲದ ಒಳನೋಟವನ್ನು ಅದ್ಭುತವಾಗಿ ಅರ್ಥೈಸುವುದರೊಂದಿಗೆ ತಾಳಮದ್ದಲೆ ಯಶಸ್ವಿಯಾಯಿತು. ●



ಸಮಾರೋಪ



ತಾಳಮದ್ದಲೆ

ಮೃಣಾಲ್ ಸೇನ್: ಭಾರತೀಯ ಸಿನೆಮಾದ...... ಪುಟ 6 ರಿಂದ

ಸಮಾಜದಲ್ಲಿ ಮಧ್ಯಮವರ್ಗೀಯರಿಗೆ ಸಾಂಸ್ಕೃತಿಕ ಕಾಳಜಿಗಳು, ಸೌಂದರ್ಯಾಸ್ವಾದನೆಯ ಅಭಿರುಚಿ, ಬೌದ್ಧಿಕ ಚರ್ಚೆಗಳ ಮಾದಕತೆಗಳು, ವರ್ಗಅಸಮಾನತೆ ಮತ್ತು ಅದರ ಫಲಿತಗಳಾದ ಸಾಮಾಜಿಕ ವಿಷಮತೆಗಳಿಗಿಂತ ಹೆಚ್ಚು ಮುಖ್ಯವಾಗುತ್ತವೆ. ಬಟ್ಟೆ ಅಂಗಡಿಯ ನೀಟಾಗಿ ಬಟ್ಟೆ ಧರಿಸಿದ ಬೊಂಬೆಯಂತೆ ಸುಂದರ ಆದರೆ ನಿರ್ಜೀವ ಶುಷ್ಕ ಜಗತ್ತಿನಲ್ಲಿ ಅವರು ಜೀವಿಸಬೇಕಾಗುತ್ತದೆ. ಎಲ್ಲೋ ಅಪೂರ್ವಕ್ಕೆ ಯಾವುದೋ ಬರಡು ಭೂಮಿಯಲ್ಲಿ ಹಣವಂತರಿಗೆ, ಬಂದೂಕದ ಆ ಕೊನೆಯಲ್ಲಿ ಕಂಡ ಕೊಕ್ಕರೆಯು ಆದಿವಾಸಿ ಮಹಿಳೆಯೊಂದಿನ ಒಡನಾಟದಲ್ಲಿ ಮಾನವೀಯತೆಯನ್ನು ಮೀಟಿದಾಗ ಮನುಷ್ಯ ಪ್ರಪಂಚ ಕಾಣಿಸುತ್ತದೆ.

ಮೃಣಾಲ್ ಸೇನ್ ಹಿಂದಿಯಲ್ಲಿ ಮಾಡಿದ ಭುವನ್ ಶೋಮ್ ನಿಂದ ಹಿಡಿದು 'ಕಲ್ಕತ್ತ ತ್ರಿವಳಿ' ಎಂದು ಗುರುತಿಸುವ 'ಇಂಟರ್‌ವ್ಯೂ', 'ಕಲ್ಕತ್ತ–71' ಮತ್ತು 'ಪದಾತಿಕ್' ಚಿತ್ರಗಳಲ್ಲಿ, ಪ್ರೇಮ್‌ಚಂದ್ ಅವರ 'ಕಫನ್' (ಹೆಣದ ಬಟ್ಟೆ) ಕತೆಯನ್ನು ಆಧರಿಸಿ ತೆಲುಗಿನಲ್ಲಿ ಮಾಡಿದ 'ಒಕ ಊರಿ ಕಥ' ಚಿತ್ರದಲ್ಲೂ, ಅವರು ಚಿತ್ರಿಸುವ ಪ್ರಪಂಚ, ವರ್ಗತಾರತಮ್ಯದಲ್ಲಿ ಸಿಕ್ಕಿ ನರಳುವ, ನಲುಗುವ, ಕ್ರೋಧಗೊಳ್ಳುವ, ಪ್ರತಿಭಟಿಸುವ, ಸೋಲುವ, ಸೋತರೂ ಹಿಂದೆಗೆಯದೆ ಮುಂದೆ ಸಾಗುವ ಸಾಮಾನ್ಯ ಮನುಷ್ಯರ ಪ್ರಪಂಚ. ಈ ಕಾರಣಕ್ಕಾಗಿ ಮೃಣಾಲ್ ಸೇನ್‌ರನ್ನು ಅವರ ಅಭಿಮಾನಿಗಳು, 'ಭಾರತದ ಸಿನಿಮಾಕ್ಕೆ ಹೊಸ ಅರ್ಥವನ್ನು ತಂದುಕೊಟ್ಟವರು', 'ಹಳೆಯ ಕಾಲದ ಸ್ಟೀರಿಯೋಟೈಪ್‌ಗಳನ್ನು ಮುರಿದು ಹೊಸ ದಿಕ್ಕನ್ನು ತೋರಿಸಿದವರು', 'ಹೊಸ ಅಲೆಯ ಪ್ರವರ್ತಕರಲ್ಲಿ ಒಬ್ಬರು', 'ಭಾರತೀಯ ಸಿನೆಮಾದ ಬೀದಿ ಹೋರಾಟಗಾರ', ಎಂದೆಲ್ಲಾ ಹೊಗಳಿದ್ದಾರೆ. ಸಿನೆಮಾ ಸಮಾಜವನ್ನು ಬದಲಾಯಿಸುತ್ತದೆ ಎಂಬರ್ಥದ ಗೊಡಾರ್ಡ್ ನ ಮಾತನ್ನು ಫ್ರೆಂಚ್ ಮತ್ತು ಇಟಾಲಿಯನ್ ವಾಸ್ತವವಾದದ ಪ್ರತಿಪಾದಕರಾದ ಮೃಣಾಲ್ ಸೇನ್ ಒಪ್ಪುವುದಿಲ್ಲ. ಸಿನೆಮಾ ಜನರನ್ನು ಎಚ್ಚರಿಸುತ್ತದೆ, ಸಾಮಾಜಿಕ ಬದಲಾವಣೆಗೆ ಪ್ರಚೋದಿಸುತ್ತದೆ ಎಂಬ ಅಭಿಪ್ರಾಯ ಅವರದು.

ಚಾರ್ಲಿ ಚಾಪ್ಲಿನ್ ಮೃಣಾಲ್ ಸೇನ್ ರ ಅಚ್ಚುಮೆಚ್ಚಿನ ಚಿತ್ರನಿರ್ಮಾಪಕ. ಅವನ ಬಗ್ಗೆ ಒಂದು ಪುಸ್ತಕವನ್ನೂ ಅವರು ಪ್ರಕಟಿಸಿದ್ದಾರೆ. ಚಾಪ್ಲಿನ್ನರ 'ದಿ ಕಿಡ್' ಅವರಿಗೆ ತಾನೂ ಸಿನೆಮಾ ಮಾಡಬೇಕೆಂಬ ಆಸೆ ಹುಟ್ಟಿಸಿದ ಚಿತ್ರ. ಚಾಪ್ಲಿನ್ ಚಿತ್ರಗಳನ್ನು ನೋಡಿ ಸುಖಿಸುವ ಜನರಿಗೆ ಅವನ ಸಿನೆಮಾ ಪ್ರಪಂಚದ ಹಾಸ್ಯ ಮುನ್ನೆಲೆಗೆ ಬರುತ್ತದೆ. ಆದರೆ ಅದರಾಚೆಗೆ ನೋಡಿ ಪರಿತಾಪ ಪಡುವ, ಚಿಂತಿಸುವ ಜನರಲ್ಲಿ ಅವನ ಚಿತ್ರಗಳು, ನಾವಿರುವ ಸಮಾಜದ ಬಗೆಗಿನ ಅರಿವನ್ನು, ನ್ಯಾಯ, ಸಮಾನತೆ ಮತ್ತು ಸಮಸಮಾಜದ ಅಭೀಪ್ಸೆಯನ್ನು ಮೂಡಿಸುತ್ತವೆ. ●

JANASHAKTHI KANNADA VARA PATRIKE JANUARY 7-13, 2019 Price: Rs. 10/- Date of Publication: 4 JANUARY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಉದ್ಘಾಟನೆ




ಸಂವಾದ–1



ಸಂವಾದ–2

ಸಹಯಾನ 2018 – 'ಭಾರತದ ಸಂವಿಧಾನ: ಹೊಸ ತಲೆಮಾರು'

'ಧರ್ಮ ಮತ್ತು ರಾಜಕಾರಣ ಪ್ರತ್ಯೇಕವಾಗಿರುವುದೇ ಜಾತ್ಯತೀತತೆ'



ಸರ್ವಾಧ್ಯಕ್ಷ ನ್ಯಾ. ದಾಸ್

ಸರ್ಕಾರಕ್ಕೆ ತನ್ನದೇ ಆದ ಧರ್ಮ ಇರಬಾರದು. ಹಾಗಾದಾಗ ಮಾತ್ರ ಸರ್ಕಾರ ಜಾತ್ಯಾತೀತ ಆಗುತ್ತದೆ. ಸರ್ಕಾರದ ಶಿಕ್ಷಣ, ಜನಸಂಖ್ಯೆ, ಸಾಂಸ್ಕೃತಿಕ, ಕೃಷಿ ಯೋಜನೆಗಳು ಜನಪರವಾಗಿರಬೇಕೇ ವಿನಾ ಧರ್ಮದ ಪ್ರಭಾವಕ್ಕೆ ಒಳಗಾಗಿ ಯೋಜನೆ ಅನುಷ್ಠಾನ ಮಾಡಬಾರದು ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅಭಿಪ್ರಾಯಪಟ್ಟರು.

ಡಾ.ಆರ್.ವಿ.ಭಂಡಾರಿ ನೆನಪಿನ ಸಂಸ್ಕೃತಿ ಅಧ್ಯಯನ ಕೇಂದ್ರ 'ಸಹಯಾನ'ದ ಆಶ್ರಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕೆರೆಕೋಣದಲ್ಲಿ ಡಿಸೆಂಬರ್ 30ರಂದು ಆಯೋಜಿಸಿದ್ದ 'ಭಾರತದ ಸಂವಿಧಾನ: ಹೊಸ ತಲೆಮಾರು' ಸಾಹಿತ್ಯೋತ್ಸವದ ಸರ್ವಾಧ್ಯಕ್ಷರಾಗಿ ಉದ್ಘಾಟನಾ ಸಭೆಯಲ್ಲಿ ಅವರು ಮಾತನಾಡುತ್ತಿದರು.

ಧರ್ಮ ಎಂಬುದು ವೈಯಕ್ತಿಕ ವಿಚಾರ. ಇದು ವ್ಯಕ್ತಿಯ ವಿಚಾರವಾಗಬೇಕೇ ಹೊರತು ರಾಜಕೀಯ ವಿಚಾರವಾಗಬಾರದು. ಇಂದಿನ ರಾಜಕಾರಣ ಜನರನ್ನು ಭ್ರಮನಿರಸನಗೊಳಿಸುತ್ತಿದೆ. ಧರ್ಮ ಗುರುಗಳು ರಾಜಕಾರಣ ಕೈಗೆತ್ತಿಕೊಳ್ಳುತ್ತಿದ್ದಾರೆ. ಧರ್ಮಪೀಠಗಳು ರಾಜಕೀಯ ಕ್ಷೇತ್ರವನ್ನು ನಿಯಂತ್ರಿಸುತ್ತಿವೆ. ರಾಜಕೀಯ ನೀತಿ ರೂಪಿಸುವುದರ ಮೇಲೆ ಪ್ರಭಾವ ಬೀರುತ್ತಿವೆ. ನ್ಯಾಯಾಂಗದ ಮೇಲೂ ಹಿಡಿತ ಸಾಧಿಸಿ ಕಾಲಮಿತಿಯೊಳಗೆ ತಮಗೆ ಬೇಕಾದಂತೆ ನಿರ್ಣಯ ಪಡೆಯುವಲ್ಲಿ ಪ್ರಭಾವ ಬೀರುತ್ತಿವೆ. ಇದು ಸಾಮಾಜಿಕ ಪ್ರಜಾಪ್ರಭುತ್ವ ಹಾಗೂ ಜಾತ್ಯತೀತ ವಿಚಾರಕ್ಕೆ ವಿರುದ್ಧವಾಗಿದೆ. ಜಾತ್ಯತೀತ ಪದವನ್ನು ಪುನರ್ ವ್ಯಾಖ್ಯಾನಿಸಬೇಕಾಗದ ಅಗತ್ಯವಿದೆ ಎಂದರು.

'ಭಾರತದ ಸಂವಿಧಾನವು ರಾಜಕೀಯ, ಆರ್ಥಿಕ, ಸಾಮಾಜಿಕ ಎಲ್ಲ ರೀತಿಯ ಪ್ರಜಾಪ್ರಭುತ್ವವನ್ನು ಒಳಗೊಂಡಿದೆ. ಆದರೆ, ನಾವು ಆರ್ಥಿಕ, ಸಾಮಾಜಿಕ ಪ್ರಜಾಪ್ರಭುತ್ವದ ಬಗ್ಗೆ ಚರ್ಚಿಸಿಲ್ಲ, ಇವೆಲ್ಲವನ್ನು ಸಮ್ಮಿಳಿತಗೊಳಿಸಿಲ್ಲ. ಆ ಕಾರಣಕ್ಕಾಗಿ ಭಾರತದಲ್ಲಿ ಅಪಾರ ಸಂಪತ್ತು ಉತ್ಪಾದನೆಯಾಗಿದೆ. ದೇಶ ಶ್ರೀಮಂತವಾಗಿದ್ದರೂ, ಸಂಪತ್ತು ಕೆಲವೇ ಜನರ ಹಿಡಿತದಲ್ಲಿದೆ. ಶೇ 60ರಷ್ಟು ಸಂಪತ್ತು ಶೇ 1ರಷ್ಟು ಜನರ ಕೈಯಲ್ಲಿದೆ. ದಶಕಗಳ ಹೋರಾಟದ ನಂತರವೂ ಅಸಮಾನ ಭಾರತವನ್ನು ಕಟ್ಟಿದ್ದೇವೆ. ಹಸಿವು, ಬಡತನ, ಅನಕ್ಷರತೆ, ನಿರುದ್ಯೋಗ, ಅನಾರೋಗ್ಯ, ವಸತಿರಹಿತರ ಸಮಸ್ಯೆ ಇಂದಿಗೂ ಜೀವಂತವಾಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಹಿಂಸೆ, ದರೋಡೆ, ಕ್ರೌರ್ಯ, ಅಪನಂಬಿಕೆ ಜೊತೆಗೆ ಅನ್ನಕ್ಕಾಗಿ ಆಂದೋಲನಗಳು ಪ್ರಾರಂಭವಾಗುತ್ತವೆ. ಆರ್ಥಿಕ ಪ್ರಜಾಪ್ರಭುತ್ವದ ಕುರಿತು ಧ್ವನಿ ಎತ್ತಬೇಕು' ಎಂದು ಕರೆ ನೀಡಿದರು.

'ಮಾತು, ಆಹಾರ, ವಸ್ತ್ರ ಸೇರಿದಂತೆ ವಿವಿಧ ಹಂತದಲ್ಲಿ ಮೂಲಭೂತವಾದಿಗಳ ಒತ್ತಡ ಹೆಚ್ಚುತ್ತಿದೆ. ಬಟ್ಟೆ ಹಾಕಿಕೊಳ್ಳುವ, ದೇವಾಲಯಕ್ಕೆ ಹೋಗುವ ವಿಷಯದಲ್ಲಿ ಮೂಲಭೂತವಾದಿಗಳು ಫರ್ಮಾನು ಹೊರಡಿಸುತ್ತಾರೆ. ಇದನ್ನು ನಿವಾರಿಸಲು ಸಾಮಾಜಿಕ ಪ್ರಜಾಪ್ರಭುತ್ವವನ್ನು ರಾಜಕೀಯ ಪ್ರಜಾಪ್ರಭುತ್ವದ ಜೊತೆ ಸೇರಿಸಬೇಕಾಗಿದೆ' ಎಂದೂ ಅವರು ಹೇಳಿದರು.

ಬಸಣ್ಣ ಪಟ್ಟೇಗಾರ್ ಕಾರ್ಯಕ್ರಮ ಉದ್ಘಾಟಿಸಿದರು. ಕವಿ ಕೆ.ಶರೀಫಾ ಅವರು ದಿವಂಗತ ಆರ್.ವಿ.ಭಂಡಾರಿ ಅವರ 'ಕಯ್ಯೂರಿನ ಮಕ್ಕಳು' ಕೃತಿಯನ್ನು ಬಿಡುಗಡೆಗೊಳಿಸಿದರು. ಪ್ರಾಧ್ಯಾಪಕ ಎಂ.ಜಿ.ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಠ್ಠಲ ಭಂಡಾರಿ ಸ್ವಾಗತಿಸಿದರು. ದೀಪಾ ಹಿರೇಗುತ್ತಿ ನಿರೂಪಿಸಿದರು. ಹಿರಿಯ ಸಾಹಿತಿ ವಿಷ್ಣು ನಾಯ್ಕ ಅವರು ಭಾಗವಹಿಸಿದರು. ಸಚಿನ್ ಅಂಕೋಲಾ ವಂದನಾರ್ಪಣೆ ಮಾಡಿದರು.

ನಿಜ ಬಹುತ್ವಕ್ಕೆ ಉತ್ಪಾದಿತ ಬಹುತ್ವದ ಸವಾಲು

'ಭಾರತದ ಸಂವಿಧಾನ ಮತ್ತು ನಾಡಿನ ಸಾಂಸ್ಕೃತಿಕ ಬಹುತ್ವದ ರಕ್ಷಣೆ' ಕುರಿತ ಸಂವಾದ–1ರಲ್ಲಿ ಮಾತನಾಡಿದ ಹಂಪಿಯ ಡಾ. ಅರುಣ ಜೋಳದಕೂಡ್ಲಿಗಿ 'ಇಂದು ಬಹುತ್ವ ನಾಶವಾಗುತ್ತಿಲ್ಲ. ಆದರೆ, ಅದನ್ನು ರೂಪಾಂತರಗೊಳಿಸಲಾಗುತ್ತಿದೆ. ಇದನ್ನು ಮತ್ತೆ ಪುನರುಜ್ಜೀವನಗೊಳಿಸುವ ಕೆಲಸ ಆಗಬೇಕಾಗಿದೆ ಎಂದರು.

ಕರ್ನಾಟಕದ ಬಹುತ್ವದ ಭಾಗವಾಗಿ ಜನಪದ ಕಲೆಗಳಲ್ಲಿ ನಾಲ್ಕು ತರಹದ ಪ್ರತಿರೋಧ–ಯುಕ್ತ ಅಭಿವ್ಯಕ್ತಿ ಇತ್ತು. ಜಾತ್ರೆಯಂತಹ ಶಾಬ್ದಿಕ ಆರಾಧನೆ ಕಲೆಗಳಲ್ಲಿ ದೊಡ್ಡ ಮಟ್ಟದ ಬಂಡಾಯ ಇದೆ. ಕೆಲವು ದಲಿತ ಕಲೆಗಳಲ್ಲಿ ಕೂಡ ಈ ದನಿಯಿದೆ. ಶೈವರು ವೈಷ್ಣವರ ಸಂಘರ್ಷದಲ್ಲಿ ಪ್ರತಿರೋಧದ ಬಹುತ್ವ ಇತ್ತು. ರಾಕ್ಷಸ ಸಂಹಾರದ ಕಲ್ಪನೆಯಲ್ಲಿಯೂ ಪ್ರತಿರೋಧ ಅಡಗಿತ್ತು. ರಾಕ್ಷಸರನ್ನು ಜನಕಂಟಕ ಎಂಬ ಕಲ್ಪನೆಯಲ್ಲಿ ಕಂಡಿದ್ದ ಜನಪದರು, ಅವರು ವಾಸಿಸುವ ನೆಲೆಯಲ್ಲಿ ಜನರಿಗೆ ಕಂಟಕರಾಗಿದ್ದವರನ್ನು ಊಹಿಸಿಕೊಂಡು ರಾಕ್ಷಸ ಸಂಹಾರ ಮಾಡುವ ಮೂಲಕ ಬಹುತ್ವ ತೋರುತ್ತಿದ್ದರು ಎಂದು ವಿವರಿಸಿದರು.

ಧಾರ್ಮಿಕ ಮೂಲಭೂತವಾದದ ಮನುಪ್ರಣೀತ ಅಲಿಖಿತ ಸಂವಿಧಾನ, ಕಾರ್ಪೋರೆಟ್ ಶಕ್ತಿಗಳ ವ್ಯಾಪಾರಿ ಸಂವಿಧಾನ ಸಮತೆಯ ಕನಸಿನ ಸಂವಿಧಾನವನ್ನು ಹೇಗೆ ದುರ್ಬಲಗೊಳಿಸಲು ಯತ್ನಿಸುತ್ತಿವೆ, ಇವುಗಳು ಹೇರಲ್ಪಟ್ಟ ಕಲ್ಪಿತ ಬಹುತ್ವವನ್ನು ಹೇಗೆ ಜನಸಮುದಾಯ ತಮ್ಮದಾಗಿಸಿಕೊಳ್ಳುತ್ತಿದೆ ಮತ್ತು ಹೇರಲ್ಪಟ್ಟ ಬಹುತ್ವ, ಪ್ರತಿರೋಧ ನಿರಸನಗೊಂಡ ಬಹುತ್ವ, ಉತ್ಪಾದಿತ ಬಹುತ್ವಗಳು ಜನರೇ ನಿರ್ಮಿಸಿಕೊಂಡ ನಿಜ ಬಹುತ್ವವನ್ನು ಅರ್ಥೈಸಿಕೊಳ್ಳುವಿಕೆಯಲ್ಲಿ ಹುಟ್ಟಿಸಿರುವ ಸವಾಲುಗಳ ಬಗ್ಗೆ ಡಾ. ಜೋಳದಕೂಡ್ಲಿಗಿ ನಿರೂಪಿಸಿದರು.

ಪ್ರಕಾಶ ಕಡಮೆ, ಗಾಯತ್ರಿ ರಾಘವೇಂದ್ರ, ಮಮತಾ ಅರಸಿಕೆರೆ, ಚಾಂದ್ ಪಾಷಾ ಕವಿತೆ ವಾಚನ ಮಾಡಿದರು. ರಂಗನಾಥ ಕಂಟನಕುಂಟೆ ನಿರೂಪಿಸಿದರು. ಕಿರಣ್ ಭಟ್ ವಂದಿಸಿದರು.

'ಭಾರತದ ಸಂವಿಧಾನ: ಸಮಕಾಲೀನ ಸವಾಲುಗಳು ಮತ್ತು ತಿದ್ದುಪಡಿಯ ಸ್ವರೂಪ' ಕುರಿತ ಸಂವಾದ–2ರಲ್ಲಿ ಕಿರಣ್ ಗಾಜನೂರು ವಿಷಯ ಮಂಡಿಸಿ, ಸಂವಿಧಾನದ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಕೆಲವು ಸೂಕ್ಷ್ಮ ಒಳನೋಟಗಳನ್ನು ಕೊಟ್ಟರು. ದೀಪಾ ಗಿರೀಶ, ಹಾ.ಉ.ಸೊರಬ ಕವಿತೆ ವಾಚನ ಮಾಡಿದರು. ಕಾವ್ಯಶ್ರೀ ನಾಯ್ಕ ನಿರೂಪಿಸಿದರು.

ವಿವಿಧ ಜಿಲ್ಲೆಗಳಲ್ಲಿ ಸಂವಿಧಾನ ಓದು ಅಭಿಯಾನ ಯಶಸ್ವಿಯಾಗಿ ನಡೆಸಿದ ಅನುಭವ ಕಥನ ಮತ್ತು ಆ ಬಗ್ಗೆ ಪರಾಮರ್ಶೆ ನಡೆಯಿತು. ಇದರಲ್ಲಿ ಸುಧೀರ ಕುಮಾರ ಮರೋಳಿ (ಕೊಪ್ಪ), ದೇವೇಂದ್ರಗೌಡ (ರಾಯಚೂರು), ಹೆಚ್.ಆರ್. ನವೀನ ಕುಮಾರ್ (ಹಾಸನ), ರಾಜಶೇಖರ ಕಿಗ್ಗಾ (ಬೆಂಗಳೂರು), ಅರುಣ ಕುಮಾರ ಎಲ್. ಎಚ್. (ದಾವಣಗೆರೆ) ಭಾಗವಹಿಸಿದ್ದರು. ಕೆ.ಎಸ್. ವಿಮಲಾ ಆಶಯ ನುಡಿಗಳನ್ನಾಡಿದರು. ಜ್ಯೋತಿ ಹಿಟ್ನಾಳ ಕವಿತೆ ಓದಿದರು. ಎಸ್.ಸತ್ಯಾ ನಿರೂಪಣೆ ಮಾಡಿದರು.

ಸಂವಿಧಾನ ದೇಶದ ಭಾಷ್ಯ, ಸಡಿಲವಾಗಲು ಬಿಡಬಾರದು

ಭಾರತದ ಐತಿಹಾಸಿಕ ಅತ್ಯುತ್ತಮ ಘಟನೆ ಎಂದರೆ ನಾವು ದಾಸ್ಯತ್ವವನ್ನು ತೊರೆದು ಸಂವಿಧಾನವನ್ನು ಹೊಂದಿ ಸಿಟಿಜನ್ ಆಗಿದ್ದುದು. ಆದರೆ ಇಂದು ಸಂವಿಧಾನಕ್ಕೆ ಗೌರವ ತೋರದವರು ವಿವಿಧ ಹಂತದ ಸ್ಥಾನಮಾನದಲ್ಲಿದ್ದಾರೆ. ಕೆಲವರು ಸರ್ವೋಚ್ಚ ನ್ಯಾಯಾಲಯವು ಧಾರ್ಮಿಕವಾಗಿ ಜನ ಒಪ್ಪುವ ತೀರ್ಪು ಕೊಡಬೇಕೆಂದು ನಿಯಂತ್ರಿಸಲು ತೊಡಗುತ್ತಾರೆ. ದೇಶದಲ್ಲಿ ಜಾತಿ ವ್ಯವಸ್ಥೆಯೇ ಇಲ್ಲ ಎನ್ನುವವರು, ಕೋತಿಗಳು ಸೇತುವೆ ಕಟ್ಟಿದರು ಎನ್ನುವವರು, ಮಾನವಿಕ ವಿಷಯಗಳು ಅನುತ್ಪಾದಕ ವಿಷಯಗಳು ಎನ್ನುವವರು ಇಂದು ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಾಗಿದ್ದಾರೆ. ಕೆಲವು ಮಹತ್ವದ ಉನ್ನತ ಶಿಕ್ಷಣ ಸಂಸ್ಥೆಗಳ ಗಂಬೀರತೆಯನ್ನೇ ಕಳೆದಿದ್ದಾರೆ. ಈ ರೀತಿಯ ದಾಳಿ ಮಾಡುವವರಿಗೆ ಸಾಮಾಜಿಕ ಮನ್ನಣೆ ನೀಡುತ್ತಿರುವುದು ಖೇದಕರ. ಇಂದು ಸಂವಿಧಾನದ ಬಗ್ಗೆ ಅಪನಂಬಿಕೆ ಮೂಡುವಂತೆ ಮಾಡಲಾಗುತ್ತಿದೆ. ಆದರೆ ಸಂವಿಧಾನ ಮತ್ತು ಭಾರತದ ಬಹುತ್ವ ಉಳಿಸಲು ಹೊಸ ತಲೆಮಾರಿನ ಅನೇಕರು ಬಯಸುತ್ತಿರುವುದು ಆಶಾದಾಯಕ ಬೆಳವಣಿಗೆ. ಸಂವಿಧಾನ ಈ ದೇಶಕ್ಕೊಂದು ಭಾಷ್ಯ ಬರೆದಿದೆ. ಅದು ಸಡಿಲವಾಗಲು ಬಿಡಬಾರದು ಎಂದು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಡಾ. ಪುರುಷೋತ್ತಮ ಬಿಳಿಮಲೆಯವರು ಹೇಳಿದರು. ಅವರು ಸಹಯಾನ ಸಾಹಿತ್ಯೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಸಂವಿಧಾನವೊಂದೇ ಪರಿಹಾರ

ದೇಶ ಹಿಂದೆಂದಿಗಿಂತ ಹೆಚ್ಚು ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಿದೆ. ಕಷ್ಟಕರ ವಿಷಯಗಳು ನಮ್ಮೆದುರು ಬಂದಾಗ ಅದರ ಪರಿಹಾರಕ್ಕೆ ಅನ್ವಯಿಸಬೇಕಾದುದು ಸಂವಿಧಾನವನ್ನು. ನ್ಯಾಯಾಧೀಶರಾದವರು ತಾವು ನೀಡುವ ತೀರ್ಪನ್ನು ಒಮ್ಮೆ ತಾವೇ ವಿಮರ್ಶಿಸಿ ನೋಡಬೇಕು. ಅದು ಪ್ರಜಾಪ್ರಭುತ್ವದ ಪರವಾಗಿದೆಯೇ,

ಪುಟ 15 ಕ್ಕೆ



ಸಂವಿಧಾನ ಓದು ಅನುಭವ ಕಥನ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**